"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**156ನೇ ಅಧಿವೇಶನ**

**ಶುಕ್ರವಾರ, 22ನೇ ಆಗಸ್ಟ್ 2025**

## ವಿಷಯಾನುಕ್ರಮಣಿಕೆ (INDEX)

**01. ಕಾರ್ಯದರ್ಶಿಯವರ ವರದಿ**

**ವಿಧಾನಸಭೆಯಿಂದ ಅಂಗೀಕೃತಗೊಂಡಿರುವ ವಿಧೇಯಕಗಳ ಮಂಡನೆ**

**02. ವರದಿಗಳನ್ನೊಪ್ಪಿಸುವುದು**

**ಅ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿವಿಧ ನಿಗಮಗಳಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಪರಿಶೀಲಿಸಲು ರಚಿಸಲಾದ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯ ಅಂತಿಮ ವರದಿಯನ್ನು ಸದನಕ್ಕೆ ಒಪ್ಪಿಸುವ ಬಗ್ಗೆ.**

- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

**ಆ) ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 16ನೇ ವಿಧಾನಸಭೆಯ 2ನೇ ವರದಿಯನ್ನು ಮಂಡಿಸುವ ಬಗ್ಗೆ.**

- ಶ್ರೀ ಕೆ.ಅಬ್ದುಲ್ ಜಬ್ಬರ್

**03. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025**

- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025**

- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)
- ಶ್ರೀ ಕೆ.ಎಸ್.ನವೀನ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ಪಿ.ಹೆಚ್.ಪೂಜಾರ್

- ಶ್ರೀ ಡಿ.ಎಸ್.ಅರುಣ್
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಅಡಗೂರ್ ಹೆಚ್.ವಿಶ್ವನಾಥ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025**

- ಶ್ರೀ ಕೆ.ವೆಂಕಟೇಶ್(ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು)
- ಶ್ರೀ ಡಿ.ಟಿ ಶ್ರೀನಿವಾಸ್(ಡಿ.ಟಿ.ಎಸ್)
- ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
- ಡಾ: ಉಮಾಶ್ರೀ
- ಶ್ರೀ ಅಡಗೂರ್ ಹೆಚ್.ವಿಶ್ವನಾಥ್
- ಡಾ: ಡಿ.ತಿಮ್ಮಯ್ಯ
- ಶ್ರೀ ಎಂ. ನಾಗರಾಜು
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಗೋವಿಂದರಾಜು

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕ, 2025**

- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)(ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೆ.ಎಸ್.ನವೀನ್
- ಶ್ರೀ ಟಿ.ಎ. ಶರವಣ
- ಶ್ರೀ ವೈ.ಎಂ. ಸತೀಶ್
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಪಿ.ಹೆಚ್.ಪೂಜಾರ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಉ) ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕ, 2025**

- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)
- ಶ್ರೀ ಎಂ.ನಾಗರಾಜು
- ಡಾ॥ ಧನಂಜಯ ಸರ್ಜಿ
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಎಸ್,ಎಲ್.ಭೋಜೇಗೌಡ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಊ) "ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ, 2025**

- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**04. ಗಣೇಶೋತ್ಸವ ಮೆರವಣಿಗೆ ಸಂದರ್ಭದಲ್ಲಿ ಡಾಲ್ಬಿ ಸ್ಟೀರಿಯೋ ಅಥವಾ ಡಿ.ಜೆ. ಅಳವಡಿಸಬಾರದೆಂದು ಸರ್ಕಾರ ಷರತ್ತು ವಿಧಿಸಿರುವ ಕುರಿತು.**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಕೆ.ಎಸ್.ನವೀನ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

**05. 2025-26ನೇ ಸಾಲಿಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿಯ ಸಲುವಾಗಿ ಆಯವ್ಯಯದಲ್ಲಿ 5,000 ಕೋಟಿ ರೂಪಾಯಿಗಳನ್ನು ಘೋಷಿಸಿದ್ದರೂ ಇದುವರೆಗೂ Action Plan ತಯಾರಿಸದಿರುವುದರಿಂದ ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯವಾಗಿರುವ ಬಗ್ಗೆ.**

- ಶ್ರೀ ಸುನಿಲ್ ವಲ್ಯಾಪುರ್
- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)
- ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಶಶೀಲ್ ಜಿ.ನಮೋಶಿ

**06. ಪ್ರಶ್ನೋತ್ತರಗಳು**

**ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**07. ನಿಯಮ 58ಎ ಮೇರೆಗೆ ಶೂನ್ಯ ವೇಳೆಯ ಪ್ರಸ್ತಾವಗಳಿಗೆ ಸರ್ಕಾರದ ಲಿಖಿತ ಉತ್ತರಗಳ ಮಂಡನೆ.**

**ಅ) ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ, 187 ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಅವಧಿ ಮುಗಿದಿದ್ದರೂ, ರಾಜ್ಯ ಸರ್ಕಾರ ಈವರೆಗೂ ಮೀಸಲಾತಿ ಪಟ್ಟಿ ನೀಡದಿರುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**ಆ) ಭೂ ಪರಿವರ್ತಿತ ಜಮೀನಿನ ಏಕವಿನ್ಯಾಸ ನಕ್ಷೆಗಾಗಿ ಜಿಲ್ಲಾ ಕೇಂದ್ರಕ್ಕೆ ಪ್ರಯಾಣ ಬೆಳೆಸುವ ಸರ್ಕಾರಿ ಆದೇಶವು ಗ್ರಾಮೀಣ ಜನರನ್ನು ಹೈರಾಣುಗೊಳಿಸಿರುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರ ಪರವಾಗಿ)

**ಇ) “ಹೊಸ ವಿದ್ಯುತ್ ಸಂಪರ್ಕಕ್ಕೆ ಒಸಿ ಬಿಸಿ” ಕುರಿತು**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಇಂಧನ ಸಚಿವರ ಪರವಾಗಿ)

**ಈ) ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಅಪೂರ್ಣಗೊಂಡಿರುವ ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ)

**ಉ) ಆಫ್ರಿಕನ್ ಕ್ಯಾಟ್‌ಫಿಶ್‌ಗಳ ಸಾಕಾಣಿಕೆಯನ್ನು ಸರ್ಕಾರ ನಿಷೇಧಿಸಿದ್ದರೂ ಅಕ್ರಮವಾಗಿ ಸಾಕಾಣಿಕೆ ಮಾಡುತ್ತಿರುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಪರವಾಗಿ)

**ಊ) ನೈಸ್ ಸಂಸ್ಥೆಯ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಲೋಕೋಪಯೋಗಿ ಸಚಿವರ ಪರವಾಗಿ)

**ಋ) ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರದ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಪರವಾಗಿ)

**ಎ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆಗೊಳಸುವ ಜಮೀನಿಗೆ ಸರ್ಕಾರಿ ರಸ್ತೆ ಸಂಪರ್ಕ ಹೊಂದಿದ್ದರೆ ಮಾತ್ರ ಭೂ ಪರಿವರ್ತನೆ ಮಾಡುತ್ತಿದ್ದು, ಪಂಚಾಯತ್ ವ್ಯಾಪ್ತಿಯಲ್ಲಿ ದೊರಕುತ್ತಿದ್ದ 9/11ಎ ಖಾತಾ ದೃಢೀಕರಣ ಪತ್ರವನ್ನು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸಿರುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಂದಾಯ ಸಚಿವರ ಪರವಾಗಿ)

**ಏ) ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಹಿಂದೇಟು ಪರಿಣಾಮ ಈ ವರ್ಷ 9 ವಿಭಾಗಗಳು ಮುಚ್ಚುವ ಭೀತಿ ಎದುರಿಸುತ್ತಿರುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಐ) ಆಶಾ ಕಾರ್ಯಕರ್ತೆಯರು ತಮ್ಮ ಗೌರವಧನವನ್ನು 10,000 ರೂಪಾಯಿಗಳಿಗೆ ಹೆಚ್ಚಿಸುವಂತೆ ಆಗ್ರಹಿಸಿ ಧರಣಿ ಮಾಡುತ್ತಿರುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಒ) ಮೈಸೂರಿನಲ್ಲಿ ತಯಾರಾದ ಮಾದಕ ವಸ್ತುವಿಗೆ ಮಹಾರಾಷ್ಟ್ರದ ನಂಟು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಮಾದಕ ಜಾಲವನ್ನು ಬುಡ ಸಮೇತ ಕಿತ್ತು ಹಾಕುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ)

**ಓ) ಸಿಂಧನೂರಿನ ನಗರ ಹೃದಯ ಭಾಗದಲ್ಲಿ ಹಣ್ಣಿನ ತೋಟವನ್ನು ನಿರ್ಲಕ್ಷಿಸದೆ ಅಭಿವೃದ್ಧಿ ಪಡಿಸುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ)

**ಔ) ವಿದ್ಯಾರ್ಥಿಗಳ ಸಂಖ್ಯೆ ಆಧರಿಸಿ ಶಾಲಾ ನಿರ್ವಹಣಾ ಅನುದಾನ ಹಂಚಿಕೆಗೆ ಶಿಕ್ಷಕರ ಒತ್ತಾಯ ಅಸಮಾಧಾನಕ್ಕೆ ಕಾರಣವಾಗುವ ಅನುದಾನದ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ)

**ಅಂ) ಬಾಲ್ಯ ವಿವಾಹದ ಪಿಡುಗನ್ನು ತಡೆಗಟ್ಟುವಲ್ಲಿ ವಿಫಲವಾಗಿರುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ)

**ಅಃ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗಳ ಅಂತಿಮ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಕ) ಧರ್ಮಸ್ಥಳದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅನಾಮಿಕ ದೂರುದಾರನಿಗೆ ಮಂಪರು ಪರೀಕ್ಷೆ ಮಾಡುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ)

**ಖ) ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಗ) ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಅಧಿಕಾರಿ, ಸಿಬ್ಬಂದಿಗಳ ಹುದ್ದೆ ಖಾಲಿ ಇರುವುದರಿಂದ ನಿರ್ವಹಣೆ ಕೊರತೆ ಹೆಚ್ಚಾಗಿದ್ದು ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರ ಪರವಾಗಿ)

**ಘ) ರಕ್ತದಾನ ಸಂದರ್ಭದಲ್ಲಿ ರಕ್ತದ ಗುಣಮಟ್ಟದ ಪರೀಕ್ಷೆ ಮತ್ತು ಸೋಂಕುಗಳನ್ನು ಪತ್ತೆ ಹಚ್ಚಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಪರವಾಗಿ)

**ಙ) ರಾಜ್ಯದಲ್ಲಿ ಅಪಹರಣಕ್ಕೆ ಹಾಗೂ ನಾಪತ್ತೆಗೆ ಒಳಗಾಗುತ್ತಿರುವ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು) (ಗೃಹ ಸಚಿವರ ಪರವಾಗಿ)

## ೦೮. ಸಾರಾಂಶ

(932) 22.8.2025 10.20 ಪಿಕೆ:ಆರ್‌ಎನ್

# ಕರ್ನಾಟಕ ವಿಧಾನ ಪರಿಷತ್ತು

## ಶುಕ್ರವಾರ, 22ನೇ ಆಗಸ್ಟ್ 2025

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

## 01. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕವಿಪ:-** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ಮತ್ತು ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡು ಎರಡನೇ ಬಾರಿ ವಿಧಾನ ಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025

2. ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025

3. ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕ, 2025

4. ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕ, 2025

5. ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025

## ೦2. ವರದಿಗಳನ್ನೊಪ್ಪಿಸುವುದು

**ಅ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿವಿಧ ನಿಗಮಗಳಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಪರಿಶೀಲಿಸಲು ರಚಿಸಲಾದ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯ ಅಂತಿಮ ವರದಿಯನ್ನು ಸದನಕ್ಕೆ ಒಪ್ಪಿಸುವ ಬಗ್ಗೆ.**

**ಶ್ರೀ ಕೆ. ಪ್ರತಾಪ್‌ಸಿಂಹ ನಾಯಕ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಗಂಗಾ ಕಲ್ಯಾಣ ವಿಶೇಷ ಸದನ ಸಮಿತಿಯ ಸದಸ್ಯನಾದ ನಾನು, ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 215ರ ರೀತ್ಯಾ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿವಿಧ ನಿಗಮಗಳಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಪರಿಶೀಲಿಸಲು ರಚಿಸಲಾದ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯ ಅಂತಿಮ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಆ) ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 16ನೇ ವಿಧಾನಸಭೆಯ 2ನೇ ವರದಿಯನ್ನು ಮಂಡಿಸುವ ಬಗ್ಗೆ.**

**ಶ್ರೀ ಕೆ.ಅಬ್ದುಲ್ ಜಬ್ಬಾರ್(ವಿಧಾನಸಭಾ ಕ್ಷೇತ್ರ) (ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಅಧ್ಯಕ್ಷರ ಪರವಾಗಿ):-** ಮಾನ್ಯ ಸಭಾಪತಿಗಳೆ, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಸದಸ್ಯನಾದ ನಾನು 16ನೇ ವಿಧಾನಸಭೆಯ 2ನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನೊಪ್ಪಿಸಲಾಯಿತು.

## 03. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

**ಅ) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025**

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ಮತ್ತು ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡು ಎರಡನೇ ಬಾರಿ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2025ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ಮತ್ತು ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡು ಎರಡನೇ ಬಾರಿ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2025ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 24**

**ಸಭಾಪತಿಯವರು:-** "ಖಂಡ 2 ರಿಂದ 24 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 24 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ಮತ್ತು ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡು ಎರಡನೇ ಬಾರಿ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2025ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ಮತ್ತು ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡು ಎರಡನೇ ಬಾರಿ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2025ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು”

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>**

## ಆ) ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಹೆಚ್.ಕೆ.ಪಾಟೀಲ್ ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಗಳೆ, ಇದೊಂದು ಅತ್ಯಂತ ಸರಳವಾಗಿರುವಂತಹ ಮತ್ತು ಕಡಿಮೆ ತಿದ್ದುಪಡಿಯನ್ನು ಅಥವಾ ಕೆಲವು ಅಂಶಗಳನ್ನು ಸೇರಿಸುವ ಸಲುವಾಗಿ ತಂದಿರುವಂಥದ್ದಾಗಿದೆ. ನಮ್ಮ THE KARNATAKA TOURISM TRADE (FACILITATION AND REGULATION) (AMENDMENT) BILL, 2025 ಮೂಲಕ District Level Monitoring Committee ಎಂದು ಮಾಡಿದ್ದೇವೆ. ಅದರಲ್ಲಿ Monitoring Committee ಏನಿದೆ, ಅದು ಹೇಗಿರಬೇಕು ಎನ್ನುವುದರ ಬಗ್ಗೆ ಒಂದು ಸ್ವರೂಪ ಇರಲಿಲ್ಲ. Deputy Commissioner has to head the Committee ಎಂದಿತ್ತು. ಈಗ ನಾವು Deputy Commissioner as Chairperson, Superintendent of Police as Ex-officio member, Chief Executive Officer of Zilla Panchayat as Ex-officio member, Deputy Conservator of forest as Ex-officio member, Superintending Engineer, Public Works Department as Ex-officio member, Deputy Director of Archaeological Department as Ex-officio member, ಮೂರು ಜನ ಸದಸ್ಯರನ್ನು ರಾಜ್ಯ ಸರ್ಕಾರ ನಾಮಕರಣ ಮಾಡಬಹುದು.

(ಮುಂದು)

(933) 22-8-2025 10.30 ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಚ್.ಕೆ.ಪಾಟೀಲ್ (ಮುಂದು):-**

ಹಾಗೂ 3 ಜನ ಮೆಂಬರ್‌ಗಳನ್ನು ಡಿಸ್ಟ್ರಿಕ್ಟ್ ಕಮಿಟಿಯವರು ಆ stakeholders ಏನಿದ್ದಾರೆ ಅವರನ್ನು ಕ್ಷೇತ್ರದಲ್ಲಿರತಕ್ಕಂಥವರಿಗೆ ಅವರು ನಾಮಕರಣ ಮಾಡಿಕೊಳ್ಳಬಹುದು. ಆದ್ದರಿಂದ ಉಪ ನಿರ್ದೇಶಕರವರನ್ನು ಕಾರ್ಯದರ್ಶಿ ಮಾಡಿದ್ದೇವೆ. ಈ constitution of committee ಏನಿದೆ, ಈ constitution of committee ಅನ್ನು ಮಾಡಿರುವಂತಹ ಬದಲಾವಣೆ ಆಗಿದೆ. ಇದನ್ನು ಒಪ್ಪಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರವಾಸೋದ್ಯಮ ಸಚಿವರು ವಿಧೇಯಕವನ್ನು ಮಂಡನೆ ಮಾಡಿದ್ದಾರೆ. ಇದು transactional meeting ಮಾಡಿ, ಇದರ ಬಗ್ಗೆ ಜಿಲ್ಲಾ ಹಂತದಲ್ಲಿ ಆಗಬೇಕಾಗಿರುವ ಅನೇಕ ಕೆಲಸಗಳಿಗೆ ಸಹಕಾರಿ ಆಗಬಹುದು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಎಲ್ಲೋ ಒಂದು ಕಡೆ ಪ್ರವಾಸೋದ್ಯಮ ಇಲಾಖೆಗೆ paralysis ಆದ ಹಾಗೆ ಆಗಿಬಿಟ್ಟಿದೆ. Statistics ಅನ್ನು ಮಾನ್ಯ ಸಚಿವರು ತಮ್ಮ ಇಲಾಖೆಯಿಂದ ಪಡೆದುಕೊಂಡು ನೋಡಬೇಕಾಗುತ್ತದೆ. ಇಡೀ ದೇಶದಲ್ಲಿ ನಮ್ಮ ರಾಜ್ಯ Tourist visitors ನಲ್ಲಿ ಮೂರನೇ ಸ್ಥಾನದಲ್ಲಿತ್ತು. ಈಗ 5-6ನೇ ಸ್ಥಾನಕ್ಕೆ ಇಳಿದಿದೆ. ಏಕೆಂದರೆ, ಬೇರೆ ರಾಜ್ಯಗಳಲ್ಲಿ ಪ್ರವಾಸೋದ್ಯಮಕ್ಕೆ ಒತ್ತು ಕೊಡುತ್ತಿದ್ದಾರೆ. ಮಾನ್ಯ ಸಚಿವರಿಗೆ ಕೆಲಸದ ಒತ್ತಡ ಇದೆಯೋ ಏನೋ ಗೊತ್ತಿಲ್ಲ ಅಥವಾ ಅವರಿಗೆ ದೊಡ್ಡ ಇಲಾಖೆಗಳ ಜವಾಬ್ದಾರಿ ಇರುವ ಕಾರಣಕ್ಕೋಸ್ಕರ ಇಲಾಖೆಯ ಅಧಿಕಾರಿಗಳು ಅವರಿಗೆ ಅಪ್‌ಡೇಟ್ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ಇವತ್ತು ರಾಜ್ಯದಲ್ಲಿ domestic tourism ಎನ್ನುವಂಥದ್ದು ನಡೆಯುತ್ತಿರುವುದು ಬಿಟ್ಟರೆ ಹೊರ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ. ಹೊರ ದೇಶಗಳಿಂದ ನಮ್ಮ ರಾಜ್ಯಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ. ಸ್ಥಳೀಯ ಪ್ರವಾಸಿ ತಾಣಗಳನ್ನು ನಿರ್ಮಾಣ ಮಾಡುವಂಥದ್ದರಲ್ಲಿ ಸಂಪೂರ್ಣವಾಗಿ ಪ್ರವಾಸೋದ್ಯಮ ಇಲಾಖೆ ತನ್ನ ಎಲ್ಲಾ ಕೆಲಸಗಳನ್ನು ಮರೆತಿದೆ. ನಮ್ಮ ಚಿತ್ರದುರ್ಗ ಜಿಲ್ಲೆ ಐತಿಹಾಸಿಕ ಸ್ಥಳ ಎಂಬುದು ಮಾನ್ಯ ಸಚಿವರಿಗೂ ಗೊತ್ತಿದೆ. ನಾನು ಒಂದೇ ಒಂದು ಮಾಹಿತಿಯನ್ನು ಮಾನ್ಯ ಸಚಿವರಿಗೆ ಕೊಡುತ್ತೇನೆ. ಚಿತ್ರದುರ್ಗ ಕೋಟೆಯ ಎದುರಿಗೆ ಪ್ರವಾಸೋದ್ಯಮ ಇಲಾಖೆಯದ್ದು ಜಾಗ ಇದೆ, Archaeological Survey of India ಜಾಗ ಇದೆ. ಆದರೆ, ಈ ಎರಡು ಇಲಾಖೆಗಳ ಮಧ್ಯೆ ಸಮನ್ವಯದ ಸಮಸ್ಯೆಯಾಗಿ ಐದು ವರ್ಷಗಳಿಂದ ಉಪಯೋಗಕ್ಕೆ ರೆಡಿಯಾಗಿರುವಂತಹ ಪ್ರವಾಸಿಗರ ಶೌಚಾಲಯ ಮತ್ತು ಪ್ರವಾಸಿಗರ clock room ಅನ್ನು ಕಳೆದ ವಾರ ಉದ್ಘಾಟನೆ ಮಾಡಿದ್ದಾರೆ. ಅವರ ಲಗೇಜ್ ರೂಮ್ ರೆಡಿಯಾಗಿ ಐದು ವರ್ಷಗಳಾಗಿವೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸಚಿವರು ಮಾಡುತ್ತಿರುವ ಉದ್ದೇಶ ಸರಿ ಇರಬಹುದು. ಆದರೆ, impractical ಆಗಿ ಅವರು defunct ಆಗಿ ಇರುವ ರೀತಿ ಆಗದೆ ದಯವಿಟ್ಟು ಇಲಾಖೆಯಲ್ಲಿ ಎಷ್ಟು vacancies ಇದೆ? ಒಬ್ಬೊಬ್ಬ ನಿರ್ದೇಶಕರು 3-3 ಜಿಲ್ಲೆಗಳನ್ನು

ನಿರ್ವಹಣೆ ಮಾಡುತ್ತಿದ್ದಾರೆ. ನಮ್ಮ ಚಿತ್ರದುರ್ಗದಲ್ಲಿರುವಂತಹ ಸಹಾಯಕ ನಿರ್ದೇಶಕರು ವಿಜಯನಗರವನ್ನು ನಿರ್ವಹಣೆ ಮಾಡುತ್ತಿದ್ದಾರೆ, ಚಿತ್ರದುರ್ಗವನ್ನು ನಿರ್ವಹಣೆ ಮಾಡುತ್ತಿದ್ದಾರೆ. ಅವರು ಕೈಗೇ ಸಿಗುವುದಿಲ್ಲ. ನಾನು ಕೇಳುತ್ತಿರುವುದೇನೆಂದರೆ, namesake Bill ಗಳನ್ನು ತಂದು ಸುಮ್ಮನೆ nomination, political appointment, ೩-೩ ಜನರನ್ನು ನಾಮಿನೇಟ್ ಮಾಡುವುದರಿಂದ ಏನು ಪ್ರಯೋಜನವಿಲ್ಲ. ಇದಕ್ಕಿಂತ ಹೆಚ್ಚಾಗಿ structurally ಇದನ್ನು ಹೇಗೆ activity improve ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಪ್ರವಾಸೋದ್ಯಮದ ಅವಕಾಶಗಳಿವೆ. ನಮ್ಮ tagline ಏನಿದೆ 'One State, Many Worlds' ಎನ್ನುವುದು ತುಂಬಾ ಚೆನ್ನಾಗಿದೆ, ಇದನ್ನು ಕಾರ್ಯಗತಗೊಳಿಸುವುದಕ್ಕೆ ಹೇಗೆ ಮಾಡಬೇಕೆಂದು ನಾನು ಕೇಳಬಯಸುತ್ತಿದ್ದೇನೆ. ನಾನು ಮಾನ್ಯ ಸಚಿವರಿಗೆ ವೈಯಕ್ತಿಕವಾಗಿ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಚಿತ್ರದುರ್ಗ ಜಿಲ್ಲೆಯಲ್ಲಿ ಮಾನ್ಯ ಸಚಿವರ ಇಲಾಖೆಯಿಂದ ಸಂಬಂಧಪಟ್ಟ ಎಲ್ಲಾ ಶಾಸಕರನ್ನು ಕರೆದು ಸಭೆಯನ್ನು ನಡೆಸಬೇಕು. 'ಜೋಗಿಮಟ್ಟಿ' ಎನ್ನುವ ಪ್ರವಾಸಿ ತಾಣ ಮಾನ್ಯ ಸಚಿವರಿಗೆ ಗೊತ್ತಿದೆ. ಸುಮಾರು 150 ವರ್ಷಗಳ ಹಿಂದೆ ಬ್ರಿಟಿಷರು ಕಟ್ಟಿರುವಂಥದ್ದು. ನಮ್ಮ ಅರಣ್ಯ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯ ಮಧ್ಯೆ dispute ಇರುವ ಕಾರಣಕ್ಕೋಸ್ಕರ ಕಳೆದ 25 ವರ್ಷಗಳಿಂದ ಅಲ್ಲಿ ಒಂದು ಬುಟ್ಟಿ ಜೆಲ್ಲಿ ಹಾಕುವುದಕ್ಕೆ ಬಿಟ್ಟಿಲ್ಲ. ಅದು ಅಷ್ಟು ಚೆನ್ನಾಗಿರುವಂತಹ ಪ್ರವಾಸೋದ್ಯಮವಾಗಿದೆ. ಇಡೀ ರಾಜ್ಯದಲ್ಲಿ ಅದನ್ನು 'ಊಟಿ' ಎಂದು ಕರೆಯುತ್ತಾರೆ. ಆದರೆ ರಸ್ತೆಗೆ ಒಂದು ಬುಟ್ಟಿ ಜೆಲ್ಲಿಯನ್ನು ಹಾಕಿಲ್ಲ. ಅತ್ಯಂತ ದುಸ್ಥಿತಿಗೆ ಹೋಗಿದೆ. ಈ ರೀತಿ ಸಮಿತಿಗಳನ್ನು ಮಾಡುವುದರ ಜೊತೆಗೆ ಇಲಾಖೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಮಾನ್ಯ ಸಚಿವರು ಹಿರಿಯರಾಗಿದ್ದಾರೆ. ಮಾನ್ಯ ಸಚಿವರಿಗೆಲ್ಲಾ ಗೊತ್ತಿದೆ. ಮಾನ್ಯ ಸಚಿವರು ಇದನ್ನು ಸರಿಪಡಿಸುತ್ತಾರೆ ಎನ್ನುವ ವಿಶ್ವಾಸ ನನಗಿದೆ. ನಾನು ಚಿತ್ರದುರ್ಗ ಜಿಲ್ಲೆಯ ಜನಪ್ರತಿನಿಧಿಯಾಗಿ ನಾನು ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ನವೀನ್‌ರವರೇ, ತಮ್ಮ ಭಾಷಣ ಮುಗಿದ ತಕ್ಷಣ ಹೊರಟು ಹೋಗಬೇಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರವಾಸೋದ್ಯಮ ಸಚಿವರು ಮಾನಿಟರಿಂಗ್ ಕಮಿಟಿ ಮಾಡುವುದಕ್ಕೆ ವಿಧೇಯಕವನ್ನು ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಕರ್ನಾಟಕ ಪ್ರವಾಸೋದ್ಯಮ ಟ್ರೇಡ್‌ನಲ್ಲಿ ನಾವು ಎಲ್ಲಿಯೋ ಒಂದು ಕಡೆ ಸಾಧನೆ ಮಾಡಬೇಕೆಂದು ಹೇಳಿದ್ದಾರೆ. ನನ್ನ ಕಳಕಳಿ ವಿನಂತಿ ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆ ಕರಾವಳಿ ಭಾಗ ಎಂದರೆ ಅಲ್ಲಿ ಪ್ರವಾಸೋದ್ಯಮ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಷ್ಟು Tourism Development ಗಳು ಬೇರೆ ಎಲ್ಲಿಯೂ ಇಲ್ಲ. ನಮ್ಮ ಜಿಲ್ಲೆಗೆ ಬಂದವರು ಪ್ರತಿಯೊಬ್ಬರು ಕರಾವಳಿ ಭಾಗದಲ್ಲಿ ಅನೇಕ ವಿಪುಲ ಅವಕಾಶಗಳಿವೆ, ತಾವು ಯಾವ ರೀತಿ ಅಭಿವೃದ್ಧಿಪಡಿಸುತ್ತೀರಿ ಎಂದು ಕೇಳುತ್ತಾರೆ. ನಮ್ಮಲ್ಲಿ ಬೋಟು, ರೈಲು, ವಿಮಾನ ಇವೆ. ಈ ಮೂರು connectivity ಇದೆ. ಈ connectivity ಇದ್ದರೂ ಕೂಡ Toursim and Beach development ಎಷ್ಟು ಆಗಬೇಕಾಗಿತ್ತೋ ಆ

ಮಟ್ಟಕ್ಕೆ ನಾವು ಹೋಗಲಿಲ್ಲ ಎಂಬುದು ನಗ್ನ ಸತ್ಯ. ಹಾಗಾಗಿ ಅಭಿವೃದ್ಧಿ ಪಡಿಸುವುದಕ್ಕೆ ಈ ಕಮಿಟಿ ಮೂಲಕ, ವಿಧೇಯಕದಲ್ಲಿ; *"3-A.* ***District Level Monitoring Committee.–*** *(1) There shall be constituted a District Level Monitoring Committee to review and submit the proposal regarding facilitation, regulating and promotion of tourism trade in the jurisdiction of concerned District."* ಎಂದು ಹೇಳಿದ್ದಾರೆ. ಮಾನ್ಯ ಸಚಿವರೇ, 'trade' ಎಂದರೆ what type of trade you are going to monitor? ಎಂದು ಹೇಳಿರುವುದರ ಬಗ್ಗೆ ನನಗೆ ಕ್ಲಾರಿಫಿಕೇಶನ್ ಬೇಕು. ನಮ್ಮ ಕರಾವಳಿ ಭಾಗಕ್ಕೆ ಸಿ.ಆರ್.ಜೆಡ್. ಸಮಸ್ಯೆ ಇದೆ, ನಮಗೆ ಇನ್ನು ಬೇಕಾದಷ್ಟು ಸಮಸ್ಯೆಗಳಿವೆ. ಅದನ್ನು ಬಗೆಹರಿಸುವುದಕ್ಕೆ ಈ ಮಾನಿಟರಿಂಗ್ ಕಮಿಟಿ ಯಾವ ರೀತಿ ಸಹಾಯ ಮಾಡುತ್ತದೆ ಎಂದು ನಾನು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರ ಬಗ್ಗೆ ನನಗೆ ಅಭಿಮಾನ ಮೂಡುತ್ತಿದೆ. ಪ್ರವಾಸೋದ್ಯಮ ಇಲಾಖೆ ನಮ್ಮ ಜಿಲ್ಲೆಯಲ್ಲಿ ಐಹೊಳೆ, ಪಟ್ಟದಕಲ್ಲು, ಬಾದಾಮಿ, ಇವುಗಳಿಗೆ ವಿಶೇಷವಾದ ಅನುದಾನಗಳನ್ನು ಇತ್ತೀಚೆಗೆ ಕೊಡುವಂಥದ್ದನ್ನು ಮಾಡಿದ್ದಾರೆ. 50 ಕೋಟಿ, 100 ಕೋಟಿ ರೂಪಾಯಿಗಳ ಯೋಜನೆಗಳನ್ನು ಈಗಾಗಲೇ ಹಾಕಿಕೊಂಡಿದ್ದಾರೆ. ಅವುಗಳಿಗೆ ಅನುದಾನ ಕೂಡ ಬಿಡುಗಡೆಯಾಗಿದೆ ಎಂದು ನಾನು ಭಾವಿಸಿದ್ದೇನೆ. ಅಲ್ಲಿ ಎಲ್ಲರು ನಮ್ಮ ಜೊತೆ ಸೇರಿ ಚರ್ಚೆ ಮಾಡಿ ತೀರ್ಮಾನಗಳನ್ನು ಮಾಡಿದ್ದಾರೆ. ಆದರೆ ಮಾನ್ಯ ಸಚಿವರಿಗೆ ನನ್ನ ಸಲಹೆ ಏನೆಂದರೆ, ಚಿಕ್ಕ ಸಂಗಮದಿಂದ ಆಲಮಟ್ಟಿವರೆಗೆ ಬೋಟಿಂಗ್ ವ್ಯವಸ್ಥೆ ಮಾಡುವುದಕ್ಕಾಗುತ್ತದೆ, Jetty ಮಾಡುವುದಕ್ಕೂ ಆಗುತ್ತದೆ. ಆ ಭಾಗಕ್ಕೆ ನೇರವಾಗಿ 10-15 ನಿಮಿಷಗಳಲ್ಲಿ ತಲುಪಬಹುದು. ಚಿಕ್ಕಸಂಗಮದಿಂದ ಆ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಆ ಜಿಲ್ಲೆಗೆ ತಲುಪಬಹುದು. ಅದನ್ನು ಕಾರ್ಯಕ್ರಮದಲ್ಲಿ ಹಾಕಿಕೊಳ್ಳಿ. ನನಗೆ ಅರ್ಥವಾಗುತ್ತಿಲ್ಲ, ಮಾನಿಟರಿಂಗ್ ಕಮಿಟಿಯಲ್ಲಿ ಶಾಸಕರುಗಳನ್ನು, ಜನಪ್ರತಿನಿಧಿಗಳನ್ನು ಸೇರಿಸಿಲ್ಲ. ಸೇರಿಸಬಾರದು ಎಂದು principle ನಲ್ಲೇ ಇದೆ ಎಂದರೆ ಅದಕ್ಕೆ ಕಾರಣಗಳು ಇರಬಹುದು. ಜನಪ್ರತಿನಿಧಿಗಳು ಆ ಜನರ ಜೊತೆ ಸದಾ ಬೆರೆತಿರುವಂಥವರು. ಅಧಿಕಾರಿಗಳು ಬರುತ್ತಾರೆ, ಹೋಗುತ್ತಿರುತ್ತಾರೆ. ಕೆಲಸ ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ, ಮತ್ತೊಂದು ಕಡೆ ವರ್ಗಾವಣೆಯಾದಂತಹ ಸಂದರ್ಭದಲ್ಲಿ ಆಸಕ್ತಿ ಇದ್ದಂಥವರು ಮಾಡುತ್ತಿರುತ್ತಾರೆ, ಅವರು ಬಿಟ್ಟು ಹೋದ ಮೇಲೆ ಕೆಲಸ ಅರ್ಧಕ್ಕೆ ಉಳಿಯುತ್ತದೆ. ಜನಪ್ರತಿನಿಧಿಗಳು ಇದಕ್ಕೆ ಸಂಬಂಧಪಟ್ಟ ಹಾಗೆ ಇದ್ದರೆ ಸಲಹೆಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ.

ಮೊನ್ನೆ ಮಲ್ಲಾಪುರದ ಬಗ್ಗೆ ಮಾತನಾಡಿದ್ದೇವೆ. ಮಲ್ಲಾಪುರದ ಬಗ್ಗೆ ತೀರ್ಮಾನ ಮಾಡಿದ್ದಾರೆ. ಜಿಲ್ಲಾಧಿಕಾರಿಯವರು ನಮ್ಮನ್ನು ಕರೆಯುತ್ತಾರೆಂದು ಭಾವಿಸಿಕೊಂಡಿದ್ದೇನೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅನೇಕ ಸದಸ್ಯರ ಸಮಿತಿಯನ್ನು ಮಾಡಿದ್ದಾರೆ. ಒಟ್ಟಾರೆ ಪ್ರವಾಸೋದ್ಯಮ ಇಲಾಖೆಗೆ, ಮಾನ್ಯ ಸದಸ್ಯರು ಹೇಳಿದ ಹಾಗೆ,

ಚಿತ್ರದುರ್ಗ ಜಿಲ್ಲೆಯ ಹಳೇ ಐತಿಹಾಸಿಕ ಸ್ಥಳದ ಬಗ್ಗೆ ತೀರ್ಮಾನ ಮಾಡಿದ್ದಾರೆ. ಬಾದಾಮಿ, ಪಟ್ಟದಕಲ್ಲು ಐತಿಹಾಸಿಕ ಸ್ಥಳವಾಗಿದೆ. ಕೂಡಲಸಂಗಮ ವಿಶೇಷವಾದ ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕು. ಧಾರ್ಮಿಕ ಕೇಂದ್ರದ ಜೊತೆಗೆ ಪ್ರವಾಸಿ ಕೇಂದ್ರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಹಿನ್ನೀರಿನಲ್ಲಿ ನಿಂತಂಥ ಸುತ್ತಮುತ್ತ ವ್ಯವಸ್ಥೆಯಲ್ಲಿ ಬಹಳ ಸುಂದರವಾದ ಪರಿಸರ ತನ್ನಷ್ಟಕ್ಕೇ ತಾನೇ ನಿರ್ಮಾಣವಾಗಿಬಿಟ್ಟಿದೆ. ಅದರ ಸದುಪಯೋಗ ಮಾಡಿಕೊಂಡು ಮಾನ್ಯ ಸಚಿವರ ಮುಖಾಂತರ ಹೆಚ್ಚಿನ ಅನುದಾನ ತೆಗೆದುಕೊಳ್ಳುವಂಥದ್ದನ್ನು ಮಾಡಬೇಕು. ಕೇಂದ್ರ ಸರ್ಕಾರ ಬಹಳ ತುದಿಗಾಲಿನಲ್ಲಿ ನಿಂತಿದೆ. ಯಾವ ಪ್ರಪೋಸಲ್ ಕಳುಹಿಸುತ್ತಾರೆ ಆ ಪ್ರಪೋಸಲ್‌ಗೆ ನೇರವಾಗಿ ಅವಕಾಶ ಕೊಡುವಂಥದ್ದನ್ನು ಮಾಡುತ್ತಾರೆ. ಅದರಲ್ಲಿ ಅನುಮಾನವಿಲ್ಲ. ದಯಮಾಡಿ ಇದರ ಬಗ್ಗೆ ತೀರ್ಮಾನಗಳನ್ನು ಮಾಡಬೇಕು. ಬಾಗಲಕೋಟೆ ಜಿಲ್ಲೆ, ವಿಜಯಪುರ ಜಿಲ್ಲೆಯಲ್ಲಿ ಹಿನ್ನೀರಿನ ಹಿನ್ನೆಲೆಯಲ್ಲಿ ಪ್ರವಾಸೋದ್ಯಮಕ್ಕೆ ಬಹಳ ಅನುಕೂಲತೆಗಳಿವೆ. ಅದಕ್ಕೆ ಯೋಜನೆಯನ್ನು ರೂಪಿಸಿ ಎಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಸಂಕ್ಷಿಪ್ತವಾಗಿ ಮಾತನಾಡಿ. ವಿಧೇಯಕಗಳು ಜಾಸ್ತಿ ಇವೆ.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಎರಡು ನಿಮಿಷ ಮಾತನಾಡುತ್ತೇನೆ. ಮಾನ್ಯ ಸಚಿವರೇ, District level Monitoring Committee ಬೇಕು ಎಂದು ನಾನು ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಯಾವುದೇ ರಾಜ್ಯದಲ್ಲಿ most neglected ಎರಡು ಕ್ಷೇತ್ರವೆಂದರೆ ಅದು ಪ್ರವಾಸೋದ್ಯಮ ಮತ್ತು ಕ್ರೀಡಾ ಇಲಾಖೆ. ಅದಕ್ಕೆ ಹೆಚ್ಚು ಅನುದಾನವನ್ನು, ಹೆಚ್ಚು ಶಕ್ತಿಯನ್ನು ಕೊಡಬೇಕಾಗುತ್ತದೆ. ಬಹಳಷ್ಟು ದೇಶಗಳು ಬರೀ ಪ್ರವಾಸೋದ್ಯಮದಿಂದಲೇ ಅವರ ಆರ್ಥಿಕ ವ್ಯವಸ್ಥೆ ನಡೆಯುತ್ತದೆ. ಆದರೆ ನಮ್ಮಲ್ಲಿರುವಂತಹ ಪ್ರವಾಸೋದ್ಯಮದ ಸ್ಥಳಗಳು ಎಷ್ಟಿವೆ ಎಂದರೆ ನಮ್ಮ ದೇಶದಲ್ಲಿರುವವರು ಬೇರೆ ದೇಶಕ್ಕೆ ಹೋಗುವಂತಹ ಅವಶ್ಯಕತೆಯೇ ಇಲ್ಲ.

(ಮುಂದು)

(934) 22/08/2025 10:40 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್(ಮುಂದು):-**

ಆ ರೀತಿಯಲ್ಲಿ ನಾವು ಮಾಡಿದರೆ, ನಮ್ಮಲ್ಲಿನ ಪ್ರವಾಸೋದ್ಯಮವನ್ನು ಅಷ್ಟು ಅಭಿವೃದ್ಧಿಪಡಿಸಬಹುದು. ನಮ್ಮ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಅಲ್ಲಿ ಆಗುತ್ತಿರುವ ಬೆಳವಣಿಗೆ ಹಾಗೂ ಅಲ್ಲಿನ ಸ್ಥಳಗಳನ್ನು ನೋಡಿದರೆ, ಅಲ್ಲಿ ಬಹಳ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ನಾವು ನಮ್ಮ ಊರಿನ ಸುತ್ತಮುತ್ತದಲ್ಲಿರುವ ಪ್ರವಾಸಿ ತಾಣಗಳಿಗೆ ಭೇಟಿ ನೀಡುವುದೇ ಜಾಸ್ತಿ. ಇಂತಹ ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯಗಳಾದ ಶೌಚಾಲಯ ಇತ್ಯಾದಿಗಳನ್ನು ಒದಗಿಸಬೇಕು. ಪ್ರವಾಸೋದ್ಯಮದ ಒಟ್ಟಾರೆಯ ಆಯವ್ಯಯದ ಮಾಹಿತಿಯನ್ನು ಸಚಿವರಲ್ಲಿ ಕೇಳಬಯಸುತ್ತೇನೆ. ಈ ಸಮಿತಿಗಳಿಗೆ ಅನುದಾನದ ಹಂಚಿಕೆಯಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮುಂಬರುವ ದಿನಗಳಲ್ಲಿ ಜಿಲ್ಲಾ ಮೇಲ್ವಿಚಾರಣಾ

ಸಮಿತಿಯ ಮೂಲಕ ರಾಜ್ಯದ ಜಿಲ್ಲೆಯಲ್ಲಿರುವ ಬಹಳ ವಿಶೇಷವಾಗಿರುವ ಪ್ರವಾಸಿ ತಾಣಗಳನ್ನು ಗಮನಿಸಿ, ವರ್ಷ ಪೂರ್ತಿ ಅವುಗಳನ್ನು ಉತ್ತೇಜಿಸಿ, ಅದಕ್ಕೆ ಬರುವ ವರಮಾನದಿಂದ self-sustain ಮಾಡಲು ಆಗುತ್ತದೆಯೇ ಎಂಬುದರ ಬಗ್ಗೆ ಯೋಜನೆಗಳನ್ನು ಮಾಡಬೇಕು. ಒಟ್ಟಾರೆಯಾಗಿ ಆ ಸಮಿತಿಯ ಉದ್ದೇಶಗಳನ್ನು ಕೇಳಲುಬಯಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನಮ್ಮ ಭಾಗದಲ್ಲಿ ಅಂಜನಾದ್ರಿ ಪರ್ವತದಲ್ಲಿ ತುಂಬಾ ಉತ್ತಮವಾದ ವಾತಾವರಣವಿದೆ. ಇದು ದೇಶವ್ಯಾಪಿ ಬಹಳಷ್ಟು ಪ್ರಸಿದ್ಧವಾದ ಪ್ರವಾಸಿ ತಾಣವಾಗಿದೆ. ಇಲಾಖೆಯ ಸಚಿವರೂ ಸಹ ಅಲ್ಲಿಗೆ ಬಂದಾಗ ನಾವು ಸಭೆಯನ್ನು ಮಾಡಿದ್ದೆವು. ಆದರೆ, ಸದರಿ ಯೋಜನೆಯನ್ನು ಸರ್ಕಾರವು ಯಾವಾಗ ಜಾರಿಗೊಳಿಸುತ್ತದೆ ಎಂದು ಕೇಳಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಭೂ ಸ್ವಾಧೀನ ಪ್ರಕ್ರಿಯೆ ಆಗಿದೆಯೇ ಅಥವಾ ಇಲ್ಲವೋ ಎಂದು ಕೇಳಬಯಸುತ್ತೇನೆ. ಇದು ಯಾವ ಹಂತದಲ್ಲಿತ್ತೋ, ಅಲ್ಲಿಯೇ ಇದೆ; ಮುಂದುವರೆದಿರುವುದಿಲ್ಲ. ಸಚಿವರ ಗಮನಕ್ಕೆ ಕೆಲವು ಅಂಶಗಳನ್ನು ತರಬಯಸುತ್ತೇನೆ. ಅದೇನೆಂದರೆ, ಅಲ್ಲಿಗೆ ಬರುವ ಭಕ್ತರಿಗೆ ನೀರು, ಸ್ನಾನ ಗೃಹ ಇತ್ಯಾದಿ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳ ಅನುಕೂಲತೆಗಳಿಲ್ಲ. ಸಚಿವರು ಹೇಳುತ್ತಾ ಬಂದಿರುವ ಯೋಜನೆಯನ್ನು ಸರ್ಕಾರವು ಯಾವಾಗ ಜಾರಿಗೊಳಿಸುತ್ತದೆ ಎಂದು ಕೇಳುತ್ತೇನೆ. ಇದಕ್ಕೆ ಅನುದಾನವಿದೆ ಎಂದು ಸಚಿವರು ಹೇಳುತ್ತಿದ್ದಾರೆ. ಅಂಜನಾದ್ರಿ ಬೆಟ್ಟಕ್ಕೆ ಸಂಬಂಧಿತ ಯೋಜನೆಯನ್ನು ನಾವುಗಳೆಲ್ಲರೂ ವಿಶ್ಲೇಷಿಸಿದ್ದೇವೆ. ಭಕ್ತಾದಿಗಳು ಅಲ್ಲಿಗೆ ಮಾಲೆಯನ್ನು ಹಾಕಿಕೊಂಡು ಬಂದಾಗ ಅವರುಗಳಿಗೆ ನೀರು, ಊಟ, ಸ್ನಾನ, ವಾಹನ ನಿಲುಗಡೆ ಮತ್ತಿತರೆ ಯಾವುದೇ ವ್ಯವಸ್ಥೆಗಳಿರುವುದಿಲ್ಲ. ಸದರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುತ್ತದೆ ಎಂದು ಕೇಳಬಯಸುತ್ತೇನೆ. ಅದು ಬಹಳ ಪ್ರಸಿದ್ಧವಾದ ಸ್ಥಳವಾಗಿರುವುದರಿಂದ ಇದರ ಬಗ್ಗೆ ನಾನೇನೂ ಹೆಚ್ಚು ಹೇಳುವಂತಿಲ್ಲ. ಆದಷ್ಟು ಶೀಘ್ರದಲ್ಲಿ ಅಂದರೆ, ಇದೇ ವರ್ಷದಲ್ಲಿಯೇ ಸದರಿ ಯೋಜನೆಯನ್ನು ಪ್ರಾರಂಭಿಸುವ ಕೆಲಸವನ್ನು ಮಾಡಬೇಕೆಂದು ನಾನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮೈಸೂರು ಜಿಲ್ಲೆಯು ಪ್ರವಾಸೋದ್ಯಮಕ್ಕೆ ಬಹಳ ಹೆಸರುವಾಸಿಯಾಗಿದೆ. 2013 ನೇ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು Royal Regional Tourism Development Authority ಎನ್ನುವುದನ್ನು ಘೋಷಿಸಿದ್ದು, even it was reflected in the Budget also. ಆದರೆ, ಅದು ಕಾರ್ಯಗತವಾಗಲಿಲ್ಲ. ಮೈಸೂರು, ಮಂಡ್ಯ, ಹಾಸನ, ಕೊಡಗು, ಚಿಕ್ಕಮಗಳೂರು, ಚಾಮರಾಜನಗರ ಜಿಲ್ಲೆಗಳಿಗೆ ಸೇರಿದಂತೆ ಬಹಳ ಒಳ್ಳೆಯ ಪ್ರವಾಸಿ ತಾಣಗಳಿವೆ. ಹೀಗಾಗಿ ಈಗ ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಪುನಃ ಅದನ್ನು ಹೊಸದಾಗಿ ಪ್ರಾರಂಭಿಸಬೇಕು. Royal Regional Tourism Development Authority ಅನ್ನು ತಾವು ಸ್ಥಾಪನೆ ಮಾಡಬೇಕು. ಆ ಮೂಲಕ ಪ್ರವಾಸಿಗರನ್ನು ಆಕರ್ಷಣೆ ಮಾಡುವುದರಿಂದ ಬಹಳಷ್ಟು ಜನರಿಗೆ

ಅನುಕೂಲವಾಗುತ್ತದೆ. ಪ್ರವಾಸೋದ್ಯಮ ಅಭಿವೃದ್ಧಿಯಾದರೆ ಯುವಕರಿಗೆ ಎಲ್ಲಾ ರೀತಿಯಿಂದಲೂ ಉದ್ಯೋಗಾವಕಾಶಗಳು ದೊರೆಯುತ್ತವೆ. ಮೈಸೂರು ಜಿಲ್ಲೆಯಲ್ಲಿ ಟಾಂಗಾ ಓಡಿಸುವವರಿಗೆ ಹಣ ದೊರೆಯುತ್ತದೆ. ಸಾರಾಯಿಯಿಂದ ಹಿಡಿದು ಸಿಹಿ ತಿನಿಸುಗಳವರೆಗೂ ಅಂದರೆ ಎಲ್ಲಾ ರೀತಿಯಿಂದಲೂ ಒಳ್ಳೆಯ ವ್ಯಾಪಾರವಾಗುತ್ತದೆ. ಹೀಗಾಗಿ ಮೈಸೂರು ಭಾಗದಲ್ಲಿ ಪ್ರವಾಸೋದ್ಯಮವನ್ನು ಹೆಚ್ಚಾಗಿ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೆ, ಸರಳ ಹಾಗೂ ಚಿಕ್ಕದಾದ ತಿದ್ದುಪಡಿ ವಿಧೇಯಕದ ಮೇಲೆ ಶ್ರೀ ಕೆ.ಎಸ್.ನವೀನ್, ಶ್ರೀ ಪಿ.ಹೆಚ್.ಪೂಜಾರ್, ಶ್ರೀ ಡಿ.ಎಸ್.ಅರುಣ್, ಶ್ರೀ ಐವನ್ ಡಿ'ಸೋಜಾ ಮತ್ತು ಸಹೋದರಿ ಶ್ರೀಮತಿ ಹೇಮಲತಾ ನಾಯಕ್ ಹಾಗೂ ಹಿರಿಯ ಸದಸ್ಯರಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ಇವರುಗಳು ತಮ್ಮ ಸಲಹೆಗಳನ್ನು ನೀಡಿದ್ದಾರೆ. ಈ ವಿಧೇಯಕವನ್ನು ಎಲ್ಲಾ ದೃಷ್ಟಿಯಿಂದಲೂ ಸ್ವಾಗತಿಸಿದ್ದಾರೆ. ಇದರಲ್ಲಿ ನಾವು ಸಣ್ಣದಾದ ಬದಲಾವಣೆಯನ್ನು ತರುತ್ತಿದ್ದೇವೆ. ಶ್ರೀ ಕೆ.ಎಸ್.ನವೀನ್ ರವರು ಮಾತನಾಡುವ ಸಂದರ್ಭದಲ್ಲಿ ನಮ್ಮಲ್ಲಿ ಪ್ರವಾಸೋದ್ಯಮ ಬೆಳೆಯುತ್ತಿಲ್ಲ ಎನ್ನುವ ಭಾವನೆ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ನಾನು ಈಗಾಗಲೇ ಒಂದೆರಡು ಬಾರಿ ಹೇಳಿದಂತೆ, ನಮ್ಮ ರಾಜ್ಯದ ಪ್ರವಾಸೋದ್ಯಮವನ್ನು don't compare it with Goa Tourism and don't compare it with Kerala Tourism. ದೇಶೀಯ ಪ್ರವಾಸೋದ್ಯಮ ಆ ರೀತಿಯಲ್ಲಿ ಬೆಳೆಯುತ್ತಿಲ್ಲ ಎನ್ನುವುದು ಸದಸ್ಯರ ನೋವಾಗಿದೆ.

**ಸಭಾಪತಿಯವರು:-** ಕಾರವಾರ ಭಾಗದ್ದನ್ನೂ ನೋಡಿ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ದೇಶೀಯ ಪ್ರವಾಸೋದ್ಯಮವು ಬಹುತೇಕವಾಗಿ ದ್ವಿಗುಣಗೊಂಡಿದ್ದು, ಇದನ್ನೂ ಸಹ ಸದಸ್ಯರು ಗಮನಿಸಬೇಕು. ಶಕ್ತಿ ಯೋಜನೆಯ ಫಲವಾಗಿಯೇ ದೇಶೀಯ ಪ್ರವಾಸೋದ್ಯಮ ದುಪ್ಪಟ್ಟಾಗಿದೆ. ದೇಶೀಯ ಪ್ರವಾಸೋದ್ಯಮದ ಶೇಕಡಾ 50 ರಷ್ಟು ಶ್ರೇಯಸ್ಸು ಶಕ್ತಿ ಯೋಜನೆಗೆ ಹೋಗುತ್ತದೆ. ಪ್ರವಾಸೋದ್ಯಮ ಎಂದ ತಕ್ಷಣ ನಮ್ಮ ಲಕ್ಷ್ಯ ಮೈಸೂರು ದಸರಾ, ಸಮುದ್ರ ತೀರ, ಫೈವ್ ಸ್ಟಾರ್ ಹೋಟೆಲ್‌ಗಳೆಡೆಗೆ ಹೋಗುತ್ತದೆ. ಇದು ಪ್ರವಾಸೋದ್ಯಮದ ಕೇವಲ ಐದು ಪ್ರತಿಶತ ಮಾತ್ರವೇ ಆಗಿದೆ. ಇನ್ನುಳಿದ 95 ಪ್ರತಿಶತ ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ, ಉತ್ತರ ಕರ್ನಾಟಕ ಭಾಗದವರಿಗೆ ಎಲ್ಲಾ ತಿಳಿದಿದೆ. ಅದೇನೆಂದರೆ, ಅಲ್ಲಿನವರು ಬಸ್ ಹತ್ತಿಕೊಂಡು ಹೊರಟರೆ, ಮೈಸೂರಿಗೆ ಹೋಗುತ್ತಾರೆ. ಮೈಸೂರಿಗೆ ಹೋಗಿ ತಲುಪುವವರೆಗೆ ಅವರು ಯಾವ ದೇವಸ್ಥಾನ, ಸಮುದ್ರ ಮತ್ತು ಗುಡ್ಡಗಳನ್ನು ಸಹ ನೋಡುತ್ತಾರೆ. ಅಲ್ಲಿನ ಯಾಣದಂತಹ ವಿಶೇಷವಾದ ಕ್ಷೇತ್ರಗಳನ್ನೂ ಸಹ ನೋಡುತ್ತಾರೆ. ಈ ಎಲ್ಲಾ ತಾಣಗಳನ್ನು ನೋಡಿಕೊಂಡು ಮೈಸೂರಿಗೆ ಬಂದಾಗ ಅಲ್ಲಿ ಅವರುಗಳು ಛಹಾದ ಅಂಗಡಿಗೆ ಹಾಗೂ ಊಟಕ್ಕಾಗಿ ಕಮರ್ಷಿಯಲ್ ಫುಡ್ ಕೋರ್ಟ್‌ಗಳಿಗೆ ಹೋಗುತ್ತಾರೆ. ನಮ್ಮ ರಾಜ್ಯದಲ್ಲಿ ಧಾರ್ಮಿಕ ಮತ್ತು ತಮ್ಮ ತತ್ವಜ್ಞಾನ ಕಾರಣಗಳಿಗಾಗಿ ಪ್ರವಾಸಿ ತಾಣಗಳಿಗೆ ಭೇಟಿ ನೀಡುತ್ತಾರೆ. ಉಚಿತವಾಗಿ ಎಲ್ಲರಿಂದಲೂ ಪ್ರವಾಸ ಮಾಡಿಸುವ ಕೆಲಸಗಳನ್ನು ಸರ್ಕಾರವು

ಮಾಡುತ್ತಿದೆ. ಅಲ್ಲಿನ ಪ್ರವಾಸಿ ತಾಣಗಳಲ್ಲಿನ ಸೌಕರ್ಯಗಳೆಲ್ಲವೂ ದುಪ್ಪಟ್ಟು ಆಗಿರುವುದನ್ನು ನಾವು ನೋಡಬಹುದು. The facilities are not enough. ದೇವಸ್ಥಾನಗಳಲ್ಲಿ ಈ ಮೊದಲು ಹತ್ತು ಸಾವಿರ ಭಕ್ತಾದಿಗಳಿಗೆ ಊಟದ ವ್ಯವಸ್ಥೆ ಇತ್ತು; ಆದರೆ, ಈಗ ಅವರು ಇಪ್ಪತ್ತು ಸಾವಿರ ಭಕ್ತಾದಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡಬೇಕಾಗಿದೆ. This is what the increase of Domestic Tourism. ನಮ್ಮ ರಾಜ್ಯದಲ್ಲಿನ ದೇಶೀಯ ಪ್ರವಾಸೋದ್ಯಮವು ಬಹಳ ದೊಡ್ಡ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಇದರ ಆದಾಯ ಎಷ್ಟರ ಮಟ್ಟಿಗೆ ಹೆಚ್ಚಿಗೆಯಾಗಿದೆ ಎಂದು ಕೇಳಿದರೆ, ಅದು ಬಹಳ ಕಡಿಮೆ ಪ್ರಮಾಣದಲ್ಲಿದೆ; ಅಂದರೆ ಶೇಕಡಾ 5 ರಿಂದ ಶೇಕಡಾ 10 ರಷ್ಟು ಆಗಿರಬಹುದು. ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ಮಾತನಾಡುವಾಗ ಆದಾಯ ಹೆಚ್ಚಳವಾಗುವುದರ ಬಗ್ಗೆ ಉದಾಹರಣೆಯೊಂದನ್ನು ಹೇಳಿದರು. ನಮ್ಮಲ್ಲಿ ಬಹಳ ಹೆಚ್ಚಿನ ಪ್ರಮಾಣದ ಆದಾಯವಾಗುವುದಿಲ್ಲ. ಬೇರೆ ದೇಶಗಳಲ್ಲಿ ಪ್ರವಾಸೋದ್ಯಮವು second economy ವಲಯವಾಗಿದ್ದು, ಆ ದೇಶಕ್ಕೆ ಭಾರಿ ಪ್ರಮಾಣದಲ್ಲಿ ಆದಾಯ ಹರಿದು ಬರುತ್ತದೆ ಎಂದು ಹೇಳಿದರು. ಆ ದೇಶಗಳ ಸಂಸ್ಕೃತಿ, ಪರಂಪರೆ, ನೀತಿ ಹಾಗೂ ಅವರ ಉದ್ದೇಶಗಳು ಬೇರೆಯಾಗಿವೆ. ಆ ದೇಶಗಳಲ್ಲಿ ನೈಟ್ ಕ್ಲಬ್‌ಗಳಿದ್ದು, ಅವುಗಳೇ ಬಹಳಷ್ಟು ವರಮಾನವನ್ನು ತರುತ್ತವೆ. It is not this temple tourism which will bring you the money. ದೇವಸ್ಥಾನಗಳಿಗೆ ಭೇಟಿ ನೀಡಿದ ಭಕ್ತಾದಿಗಳು ಅಲ್ಲಿನ ಹುಂಡಿಗಳಿಗೆ ರೊಕ್ಕವನ್ನು ಹಾಕುತ್ತಾರೆ. ಇದೇ ವರಮಾನವಾಗಿದೆ ಅಷ್ಟೇ. ನಮ್ಮ ಪಕ್ಷದ ಸರ್ಕಾರವು ಅಸ್ತಿತ್ವಕ್ಕೆ ಬಂದ ಮೇಲೆ, ನಮ್ಮ ಸಚಿವ ಸಂಪುಟದ ಸದಸ್ಯರುಗಳೆಲ್ಲರೂ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಒಂದು ನಿರ್ಣಯಕ್ಕೆ ಬಂದಿದ್ದೇವೆ. We will not look at the tourism department only as a department for getting revenue. No, it is not the motto. ನಾವು ನಮ್ಮ ರಾಜ್ಯವನ್ನು ಜನರಿಗೆ ಅದರಲ್ಲೂ ನಮ್ಮ ರಾಜ್ಯದ ಪ್ರಜೆಗಳಿಗೆ, ಅವರ ಮಕ್ಕಳಿಗೆ ತೋರಿಸಬೇಕು ಎಂದು ಅಂದುಕೊಂಡಿದ್ದೇವೆ. ನಂತರದಲ್ಲಿ ಉಳಿದವರಿಗೆ ಆದ್ಯತೆಯನ್ನು ನೀಡಲಾಗುವುದು. ನಮ್ಮ ರಾಜ್ಯದೊಳಗೆ ಒಂದೊಂದು ಕ್ಷೇತ್ರಗಳು ಹೇಗಿವೆ ಮತ್ತು ಎಲ್ಲಿವೆ ಎಂಬುದರ ಬಗ್ಗೆ ನಮ್ಮಲ್ಲಿನ ಬಹಳ ಮಂದಿಗೆ ಪರಿಚಯವೇ ಇಲ್ಲ. ಇಲ್ಲಿನ ಬಹಳಷ್ಟು ಜನರು ತಾಯಿ ಯಲ್ಲಮ್ಮನ ಭಕ್ತರಿದ್ದಾರೆ. ಯಲ್ಲಮ್ಮ ಕ್ಷೇತ್ರಕ್ಕೆ ಒಂದು ವರ್ಷಕ್ಕೆ 1 ಕೋಟಿ 25 ಲಕ್ಷ ಭಕ್ತಾದಿಗಳು ಭೇಟಿ ನೀಡುತ್ತಾರೆ. (ಮುಂದು)

(935) 22-08-2025/10-50/bkp-vk (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ. ಪಾಟೀಲ್(ಮುಂದು)**

ನಾನು ಮಂತ್ರಿಯಾಗುವವರೆಗೂ ಮಾತೆ ಯಲ್ಲಮ್ಮ ದೇವಿ ಕ್ಷೇತ್ರಕ್ಕೆ ಒಂದು ವರ್ಷಕ್ಕೆ 1,25,00,000 ಜನರು ಬರುತ್ತಾರೆ. On some occasions, in three days more than 10 lakh people visit this place. ಅದು ಒಂದೇ ಅಲ್ಲ. ಹುಲಿಗೆಮ್ಮ ದೇವಿ ಕ್ಷೇತ್ರ ಏನಿದೆ, ಅಲ್ಲಿಗೆ ಎಷ್ಟು ಜನರು ಬರುತ್ತಾರೆಂದು ಕೇಳಿ.

ಅಂಜನಾದ್ರಿಗೆ ಎಷ್ಟು ಜನರು ಬರುತ್ತಾರೆ? ಅಲ್ಲಿಗೆ ಬಂದವರು ಕೆಳಗಡೆಯೇ ನಿಂತು ಮಾತೆ ಹುಲಿಗೆಮ್ಮನಿಗೆ ನಮಸ್ಕಾರ ಮಾಡಬೇಕು. ಏಕೆಂದರೆ, ಆ ದೇವಾಲಯ ಅಷ್ಟೊಂದು ಎತ್ತರದಲ್ಲಿರುತ್ತದೆ. 40 ವರ್ಷಗಳ ಮೇಲ್ಪಟ್ಟವರಿಗೆ ಮೇಲ್ಭಾಗಕ್ಕೆ ಹತ್ತಲಿಕ್ಕೆ ಆಗುವುದಿಲ್ಲ. ಇಲ್ಲಿಯವರೆಗೆ ಅದಕ್ಕಾಗಿ ನಾವು ಯಾವುದೇ ಒಂದು ವ್ಯವಸ್ಥೆಯನ್ನು ಮಾಡಿರುವುದಿಲ್ಲ. Now we have started to develop it. ಈಗ ಮಾತೆ ಯಲ್ಲಮ್ಮನ ಗುಡ್ಡಕ್ಕೆ 230 ಕೋಟಿ ರೂಪಾಯಿಗಳ ಯೋಜನೆಯನ್ನು ಈಗಾಗಲೇ ಅನುಷ್ಠಾನ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಅಲ್ಲಿಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ಮಾಡಿದ್ದೇವೆ. ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ. ಈಗಾಗಲೇ ಕೇಂದ್ರ ಸರ್ಕಾರಕ್ಕೂ ನಮ್ಮ ನಮ್ಮ ವಿಷಯದ ಗಂಭೀರತೆಯನ್ನು ತಿಳಿಸಿದ್ದೇವೆ. ಈ 230 ಕೋಟಿ ರೂಪಾಯಿಗಳನ್ನು 2026ರ ಡಿಸೆಂಬರ್ ಒಳಗಾಗಿ ಸದ್ವಿನಿಯೋಗ ಮಾಡಿ ನಾವು ನಮ್ಮ ಯೋಜನೆಯನ್ನು ಪೂರ್ಣಗೊಳಿಸುತ್ತೇವೆ.

ಅಂಜನಾದ್ರಿ ಬೆಟ್ಟದ ಮೇಲೆ ಹತ್ತಬೇಕಾದರೆ ಹೇಗೆ ಮಾಡಬೇಕೆಂದು ಹೇಳಿ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. 11 ಕಡೆ ನಾವು ಈಗಾಗಲೇ rope way cable car ಮಾಡಲಿಕ್ಕೆ PPP (Public Private Partnership) model ಮಾಡಲಿಕ್ಕೆ ಇಷ್ಟರಲ್ಲಿಯೇ ನಮ್ಮ tender float ಆಗುತ್ತದೆ. ಇನ್ನೊಂದು ವರ್ಷದೊಳಗೆ ಇವುಗಳು ಏನು domestic important places ಇವೆ, ಅವುಗಳು ನಮ್ಮ ಕರ್ನಾಟಕದ ಮಹತ್ವದ ಕೆಲಸಗಳು ಯಾವುವು ಇವೆ ಎಂದರೆ, ಅವುಗಳಿಂದ ರೆವಿನ್ಯೂ ಬರುತ್ತದೆ ಎಂದು ನಾವು ನೋಡುವುದಿಲ್ಲ. ನೋಡಿ, ಅಂಜನಾದ್ರಿಯಿಂದ you may not get more revenue. ಹುಲಿಗೆಮ್ಮ ದೇವಸ್ಥಾನದಿಂದ ಸರ್ಕಾರಕ್ಕೆ ಏನೂ ರೆವಿನ್ಯೂ ಬರುವುದಿಲ್ಲ. ಅದು ಜನರ ಸೇವೆ. ಈಗ ಯಲ್ಲಮ್ಮನ ಗುಡ್ಡದಿಂದ ಏನು ರೆವಿನ್ಯೂ ಬರುತ್ತದೆ? ಅಲ್ಲಿ ನಾವು fee ಕೊಡುತ್ತೇವೆ, ಅದು ಬರುತ್ತದೆ. ಶ್ರೀಮಾನ್ ಎಸ್.ವ್ಹಿ. ಸಂಕನೂರರವರು ಹೋದರು. ನಾನು ಅವರಿಗೆ ಒಂದು ವಿಚಾರವನ್ನು ಹೇಳಬೇಕೆಂದು ಇದ್ದೆ. ಏಕೆಂದರೆ, ಅವರು ಸಾಕ್ಷೀಕರಿಸಬೇಕಾಗಿತ್ತು. ಈಗ ನಮ್ಮ ಗದಗನಲ್ಲಿ Bhishma Tank ಎನ್ನುವ ಸಣ್ಣ ಟ್ಯಾಂಕ್ ಇದೆ. ಮಾನ್ಯ ಶ್ರೀ ಎನ್.ಎಸ್.ಬೋಸರಾಜು ರವರು ಆ ಟ್ಯಾಂಕ್ ಅಭಿವೃದ್ಧಿಯೊಳಗೆ ಅವರು ಸಾಕಷ್ಟು ಬಲವನ್ನು ತುಂಬಿರುತ್ತಾರೆ. ಇವತ್ತು ನಾವು ಅಲ್ಲಿ ಬೋಟಿಂಗ್ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ್ದೇವೆ. ಶ್ರೀಯುತ ಪೂಜಾರ್‌ರವರೆ, ತಾವು ಇಲ್ಲಿ ಗಮನಿಸಬೇಕು. ನಿಮಗೆ ಅಶ್ಚರ್ಯವಾಗಬಹುದು, ಅಲ್ಲಿ ಏನು ಪ್ರವಾಸೋದ್ಯಮದ ಬಗ್ಗೆ ಕೆಲವರು ಆಸಕ್ತಿ ಹೊಂದಿದ್ದಾರೆ, ಅಲ್ಲಿ ಡಿ.ಸಿ.ಯವರು ಬಹಳ ಆಸಕ್ತಿಯನ್ನು ತೆಗೆದುಕೊಂಡು ಕೆಲಸ ಮಾಡಿದರು. ಈ ಬೋಟಿಂಗ್ ಪ್ರಾರಂಭ ಮಾಡಿದ ಮೇಲೆ ಅದರಿಂದ ಶನಿವಾರ, ಹಾಗೂ ಭಾನುವಾರಗಳಂದು ಅಲ್ಲಿ ಸುಮಾರು 50,000 ರೂ.ಗಳಷ್ಟು ಆದಾಯ ಬರುತ್ತದೆ. ನಮ್ಮ ಕಪ್ಪತ್ತಗುಡ್ಡವನ್ನು ತಾವು ನೋಡಿದ್ದೀರಿ. ಕಪ್ಪತ್ತಗುಡ್ಡದೊಳಗಡೆ ಪಾರ್ಕಿಂಗ್ ಅಂಡ್ ಎಂಟ್ರಿ ಫೀಸ್‌ನಿಂದ 4 ಲಕ್ಷ ರೂಪಾಯಿಗಳು ಸಂಗ್ರಹವಾಗುತ್ತದೆ. ಉಳಿಕೆ ಸಮಯದಲ್ಲಿ ಅದು ಕಡಿಮೆಯಾಗುತ್ತದೆ. ಸೋಮವಾರ 50,000 ರೂಪಾಯಿಗಳಾಗುತ್ತದೆ. ಮಂಗಳವಾರ 25,000

ರೂಪಾಯಿಗಳಾಗುತ್ತದೆ. ಭಾನುವಾರ parking fee and entry fee ನಿಂದ 4 ಲಕ್ಷ ರೂಪಾಯಿಗಳಷ್ಟು ಆದಾಯ ಬರುತ್ತದೆ. ನಮ್ಮ ಕಪ್ಪತ್ತಗುಡ್ಡ ಮತ್ತು ಸಾಲು ಮರದ ತಿಮ್ಮಕ್ಕನ ಸ್ಥಳವನ್ನು ಹಿಡಿದುಕೊಂಡರೆ ಬರುತ್ತದೆ. ನಾನು ಇದನ್ನು ಏತಕ್ಕೆ ಹೇಳುತ್ತೇನೆಂದರೆ ಬಹಳ ಹಣ ಬೇಕಾಗಿಲ್ಲ. ಕಪ್ಪತ್ತಗುಡ್ಡ ಮೊದಲನಿಂದಲೂ ಇದೆ. ಆದರೆ, ಅದಕ್ಕೆ ಹೇಗೆ ಹೋಗಬೇಕು, ಏನು ಅದರ ಮಹತ್ವ ಎನ್ನುವುದನ್ನು ತಿಳುವಳಿಕೆ ಕೊಡುವಂತಹ ಕೆಲಸವನ್ನು ನಾವು ಸರ್ಕಾರದವರು ಮಾಡಿದ್ದಕ್ಕೆ ಈ ಬದಲಾವಣೆಯನ್ನು ನಾವು ನೋಡುತ್ತಿದ್ದೇವೆ.

ಆ ಹಿನ್ನೆಲೆಯೊಳಗೆ ಈಗ ಏನು ಶ್ರೀಯುತ ಕೆ.ಎಸ್.ನವೀನ್ ರವರು ಹೇಳಿದರು, ನಿಮ್ಮ ಚಿತ್ರದುರ್ಗದ ಬಗ್ಗೆ ಮಾನ್ಯ ಅರಣ್ಯ ಸಚಿವರನ್ನು ಸೇರಿಸಿಕೊಂಡು ಒಂದು ಸಭೆಯನ್ನು ಮಾಡುತ್ತೇವೆ. ಅದು ಏನು ಜೋಗಿ ಮಠ ಇದೆ, ಅದಕ್ಕೆ ಏನು ಅಭಿವೃದ್ಧಿ ಮಾಡಬೇಕೋ ಅದನ್ನು ನಾವು ಮಾಡುತ್ತೇವೆ. ಚಿತ್ರದುರ್ಗದವರಾದ ನೀವು ಒನಕೆ ಓಬವ್ವ ಎಂದು ಹೇಳಿಕೊಂಡು ಅಲ್ಲಿಯೇ ಮನೆಯಲ್ಲಿಯೇ ಕುಳಿತಿರುತ್ತೀರಿ. ಚಿತ್ರದುರ್ಗದಲ್ಲಿ ಗುಡ್ಡದ ಕೆಳಗಡೆಯೇ ರೆಸಾರ್ಟ್ ಏನಿದೆ, ಅಲ್ಲಿ ಹೋಗಿ ನೀವು ನೋಡಬೇಕು. ನಮ್ಮ ಸರ್ಕಾರಿ ರೆಸಾರ್ಟ್ ಮಯೂರ ಏನಿದೆ, ಆ ಮಯೂರದ ಹತ್ತಿರ ಹೋಗಿ ನಿಂತರೆ ನಿಮಗೆ ಆ ಗುಡ್ಡದ ಬಗ್ಗೆ ಇರತಕ್ಕಂತಹ ಅಭಿಮಾನವೇ ಹೆಚ್ಚುತ್ತದೆ. ಆ ರೀತಿಯಾಗಿರತಕ್ಕಂತಹ ವ್ಯವಸ್ಥೆಗಳಿವೆ. ಇನ್ನು ತಾವು ಏನು ಈ ವಿಚಾರದಲ್ಲಿ ಸಲಹೆಗಳನ್ನು ಕೊಟ್ಟಿದ್ದೀರಿ ಮತ್ತು ಶ್ರೀಮತಿ ಹೇಮಲತಾ ನಾಯಕ್ ರವರು ಅಂಜನಾದ್ರಿ ಬೆಟ್ಟದ ಬಗ್ಗೆ ಹೇಳಿದ್ದಾರೆ. ಅಂಜನಾದ್ರಿಯ ಅಭಿವೃದ್ಧಿ ಬಗ್ಗೆ ನಾವು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಅಲ್ಲಿ ನಾವು ಒಂದು structure start ಮಾಡಿ, ಅದು ಪೂರ್ಣ ಆಗಬೇಕೆಂದು ಮಾಡಿದ್ದೇವೆ, ಅದು ಬಹುಶಃ ನವೆಂಬರ್‌ನೊಳಗೆ ಆಗಬೇಕೆಂದು ನಾನು ನಿರ್ದಿಷ್ಟವಾಗಿ ದಿನಾಂಕವನ್ನು ಸಹಿತ ಕೊಟ್ಟಿದ್ದೇನೆ. ಅದು ಆಗುತ್ತದೆ ಎಂದು ಭಾವಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ವಿಶ್ವನಾಥ್‌ರವರು Royal Regional Tourism Development Board ಮಾಡಬೇಕು, ಅದನ್ನು ನಮ್ಮ ಆಯವ್ಯಯದಲ್ಲೂ ಹೇಳಿದ್ದೇವೆಂದು ಹೇಳಿ ಪ್ರಸ್ತಾಪ ಮಾಡಿದ್ದಾರೆ. ಅವರ ಸಲಹೆಯನ್ನು ನಾವು ಅತ್ಯಂತ ಗಂಭೀರವಾಗಿ ಗಮನಿಸಿ, ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಪಿ.ಹೆಚ್.ಪೂಜಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, Monitoring Committee ಯಲ್ಲಿ ಜನಪ್ರತಿನಿಧಿಗಳನ್ನು ಸೇರಿಸುವಂತಹ ಕೆಲಸವಾಗಬೇಕು. ನನ್ನ ದೃಷ್ಟಿಯಲ್ಲಿ ಅದು better ಆಗುತ್ತದೆ. ಆಗ ಸಲಹೆಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ.

**Sri H.K.PATIL:-** It is not policy making.

**Sri P.H.PUJAR:-** I do agree with you that it is not a policy making. ನಾನು ಪಾಲಿಸಿ ಮೇಕಿಂಗ್ ಬಗ್ಗೆ ಮಾತನಾಡುತ್ತಿಲ್ಲ. ಸಲಹೆಗಳನ್ನು ಕೊಡಲು ಅವರನ್ನು ಕರೆಯಬೇಕು ಎನ್ನುವಂತಹದ್ದು ಇರಬೇಕು. ಅಲ್ಲಿನ ಸ್ಥಳೀಯ ಜನಪ್ರತಿನಿಧಿಗಳಿಗೆ ಇದರ ಬಗ್ಗೆ ಜ್ಞಾನ ಜಾಸ್ತಿ ಇದ್ದು, we will discuss on this ಎಂದರೆ, ಅವರುಗಳ ಸಲಹೆಗಳನ್ನು ಸಹ ಪಡೆದುಕೊಳ್ಳಬಹುದಾಗಿದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಇಷ್ಟೇ ವಿಚಾರ ಮಾಡುತ್ತೇನೆ; ಈ ಕಮಿಟಿಗಳಿಗೆ ಅವರುಗಳನ್ನು ಸೇರಿಸುವ ಬಗ್ಗೆ ತಾವು ಮತ್ತೊಮ್ಮೆ ವಿಚಾರ ಮಾಡಿ ನೋಡಿ. Ex-Officio Legislators ಮಾಡಬೇಕೆಂದರೆ ನಾನು ಮಾಡುತ್ತೇನೆ. ಆದರೆ, ಅದು ನಮ್ಮ ಕೆ.ಡಿ.ಪಿ. ಮೀಟಿಂಗ್ ಅದಂತೆ ಆಗುತ್ತದೆ, ನೋಡಿ. ಇದರ ಬಗ್ಗೆ ವಿಚಾರ ಮಾಡಿ, ನೋಡಿ. ನಾನು ಸಹ ಇದರ ಬಗ್ಗೆ ವಿಚಾರ ಮಾಡುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

ಸಭಾಪತಿಯವರು:- ಪ್ರಸ್ತಾವ ಏನೆಂದರೆ, "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ-1**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

## ಪ್ರಸ್ತಾವದ ಅಂಗೀಕಾರ

**ಶ್ರೀ ಹೆಚ್.ಕೆ.ಪಾಟೀಲ್(ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯ ಸಚಿವರು:-** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ____ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೆ.ವೆಂಕಟೇಶ್(ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಶ್ರೀ ಡಿ.ಟಿ ಶ್ರೀನಿವಾಸ್(ಡಿ.ಟಿ.ಎಸ್)(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ,...

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಇಲ್ಲಿ ಗಮನಿಸಬೇಕು. ಇಂದು ಅಧಿವೇಶನದ ಕೊನೆಯ ದಿನವಾಗಿರುವುದರಿಂದ ಎಲ್ಲಾ ಬಿಲ್‌ಗಳು ಪಾಸ್ ಆಗಬೇಕಾಗಿದ್ದು, ಇದರ ಬಗ್ಗೆ ಮಾತನಾಡಲು 20 ಮಂದಿಗೆ ಅವಕಾಶ ಕೊಡುವುದಿಲ್ಲ.

**ಶ್ರೀ ಡಿ.ಟಿ ಶ್ರೀನಿವಾಸ್(ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025 ಅನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತಾ, ಇದು ನಾಲ್ಕು-ನಾಲ್ಕೂವರೆ ವರ್ಷಗಳ ಹಿಂದೆಯೇ ಇದರ ಬಗ್ಗೆ ಚಿಂತನೆಯಾಗಿತ್ತು. ಈ ವಿಚಾರದಲ್ಲಿ ತೆಲಂಗಾಣ ರಾಜ್ಯದವರು ಯಾವ ರೀತಿಯಲ್ಲಿ ಅಳವಡಿಸಿದ್ದರು, ಅದನ್ನು ಇಲ್ಲಿಯೂ ಅಳವಡಿಸಬೇಕೆಂದು ಹೇಳಿ, ಹಿಂದೆ ನಾವುಗಳು ಸಹ ಪ್ರಸ್ತಾಪವನ್ನಿಟ್ಟು, ಇದರ ಬಗ್ಗೆ ಒತ್ತಾಯ ಮಾಡಿದ್ದೆವು. ಆದರೆ, ಆ ಕನಸು ಆಗ ಈಡೇರಲಿಲ್ಲ. ಈಗ ನಮ್ಮ ಸಚಿವರು ಈಡೇರಿಸುತ್ತಿದ್ದಾರೆ. ಅವರಿಗೆ ಧನ್ಯವಾದಗಳನ್ನು

ಹೇಳುತ್ತಾ, ಇದನ್ನು ಪೂರ್ಣ ಪ್ರಮಾಣದಲ್ಲಿ ಓದಿದಂತಹ ಸಂದರ್ಭದಲ್ಲಿ ಒಂದೆರಡು-ಮೂರು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ.

ಮೊದಲನೆಯದಾಗಿ, ಕೃಷಿ ಮಾರುಕಟ್ಟೆಯಲ್ಲಿ ಅವಕಾಶವನ್ನು ಕಲ್ಪಿಸಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ. ಆದರೆ, ಅಲ್ಲಿ ಒಂದು ಕುರಿಗೆ ಎಷ್ಟು ಶುಲ್ಕವನ್ನು ನಿಗದಿಪಡಿಸುತ್ತಾರೆ ಎನ್ನುವುದರ ಬಗ್ಗೆ ಯಾವುದೇ ರೀತಿಯಲ್ಲಿ ನಿಖರವಾದ ಮಾಹಿತಿ ಇರುವುದಿಲ್ಲ. ಮತ್ತೆ, ಏನು ಕುರಿಗಾಹಿಗಳನ್ನು ನೋಂದಣಿ ಮಾಡುವ ವಿಚಾರದಲ್ಲಿ ಸಾಂಪ್ರದಾಯಿಕ ಕುರಿಗಾಹಿಗಳನ್ನು ನೋಂದಣಿ ಅಧಿನಿಯಮದಲ್ಲಿ ಫಲಾನುಭವಿಗಳನ್ನು ನೋಂದಣಿ ಮಾಡುವುದಕ್ಕೆ ಹಾಗೂ 3ನೇ ಅಂಶದಲ್ಲಿ ತಿಳಿಸಿದ್ದು, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ನೋಂದಣಿ ಇದನ್ನು 4ನೇ ಅಂಶದಲ್ಲಿ ನಮೂದಿಸಿದ್ದಾರೆ.

**(ಮುಂದು.)**

(936) 22.08.2025 11.00 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ್ (ಮುಂದು):-**

ಆದರೆ ಇಲ್ಲಿ ಒಂದು ಕುಟುಂಬದಲ್ಲಿ 100-150 ಕುರಿ ಇದ್ದಂಥ ಸಂದರ್ಭದಲ್ಲಿ ಕುರಿಯನ್ನು ಮೇಯಿಸಲಿಕ್ಕೆ ಕರೆದುಕೊಂಡು ಹೋಗುವವರು ಕುಟುಂಬದ ಇಬ್ಬರೋ ಮೂರು ಜನವೋ ಇರುತ್ತಾರೆ. ಆದರೆ ಅವರು ಕುರಿ ಜೊತೆಯಲ್ಲಿಯೇ ಇರುತ್ತಾರೆ. ಜೊತೆಯಲ್ಲಿರುವಂಥ ಸಂದರ್ಭದಲ್ಲಿ ಒಮ್ಮೆ ಕುರಿ ಜೊತೆಯಲ್ಲಿ ಹೋದರೆ ಅವರು ಹಬ್ಬ-ಹರಿದಿನ ಅಥವಾ ಚುನಾವಣೆಗಳಿಗೆ ಬರುತ್ತಾರೆ. ಇದು ಬಿಟ್ಟರೆ ಬೇರೆ ಸಮಯದಲ್ಲಿ ಅವರು ವಾಪಸ್ ಬರುವುದಿಲ್ಲ. ಅಂಥ ಸಂದರ್ಭದಲ್ಲಿ ತಾವು ಕೊಟ್ಟಿರುವ 1 ತಿಂಗಳು 30 ದಿನಗಳ ಕಾಲಾವಕಾಶ ಇರುವುದರ ಬಗ್ಗೆ ಸ್ವಲ್ಪ ವ್ಯತ್ಯಾಸಗಳಾಗಬಹುದು ಎಂದು ನಾನು ಭಾವಿಸಿದ್ದೇನೆ. ಕುರಿಗಾಹಿಗಳು ಅವರ ಫೋಟೋ ಸಮೇತ ಆನ್‌ಲೈನ್ ಮೂಲಕ ಅವರ ವಿವರಗಳನ್ನು ಸಲ್ಲಿಸಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಏಕೆ ಈ ವಿಚಾರ ಹೇಳುತ್ತಿದ್ದೇನೆಂದರೆ ಈಗ ಎಲ್ಲವೂ ಡಿಜಿಟಲೀಕರಣವಾಗಿದ್ದು, ಪ್ರತಿಯೊಬ್ಬರ ಬಳಿಯೂ ಆಂಡ್ರಾಯ್ಡ್ ಮೊಬೈಲ್ ಇರುತ್ತದೆ. ಏಕೆಂದರೆ ಅವರು ಕುರಿಯನ್ನು ಬಿಟ್ಟು ಬಂದು ಅರ್ಜಿಯನ್ನು ಸಲ್ಲಿಸಿ, ಅರ್ಜಿ ತಿರಸ್ಕಾರ ಆಗುತ್ತದೆಯೇ ಇಲ್ಲವೇ ಎಂದು ನೋಡಲಾಗುವುದಿಲ್ಲ. ಎಲ್ಲರ ಅರ್ಜಿಗಳನ್ನು ಒಪ್ಪಲೇಬೇಕು ಎಂದು ನಿಯಮದಲ್ಲಿ ಹೇಳಲಾಗಿದೆ. ಆದರೂ ಸಹ ಕುರಿಯನ್ನು ಬಿಟ್ಟು ಬಂದು ನೋಂದಣಿ ಮಾಡಿಕೊಳ್ಳಲು ಅವರ ಬಳಿ ಹೆಚ್ಚಿನ ಕಾಲಾವಕಾಶ ಇರುವುದಿಲ್ಲ.

ಅಲೆಮಾರಿ ಕುರಿಗಾಹಿಗಳ ಕುಟುಂಬಗಳನ್ನು ನೋಂದಣಿಯಲ್ಲಿ ಯಾವ ರೀತಿ consider ಮಾಡುತ್ತೀರಿ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಕುರಿ ಜೊತೆಯಲ್ಲಿರುವವರನ್ನು ಮಾತ್ರ consider ಮಾಡುತ್ತೀರೋ ಅಥವಾ

ಕುಟುಂಬದ ಸದಸ್ಯರು ಪಹರೆಯಲ್ಲಿ ಹೋಗುತ್ತಾರೆ. ನಾಲ್ಕು ಜನ ಬರುತ್ತಾರೆ, ನಾಲ್ಕು ಜನ ಹೋಗುತ್ತಾರೆ. ಅವರನ್ನು consider ಮಾಡುತ್ತಾರೆಯೋ ಎನ್ನುವುದರ ಬಗ್ಗೆ ಸ್ಪಷ್ಟತೆ ಇಲ್ಲ.

ಇಲಾಖೆಯಿಂದ ಇವರಿಗೆ ನೀಡುತ್ತಿರುವ ಗುರುತಿನ ಚೀಟಿ ಖಂಡಿತಾ ಸ್ವಾಗತಾರ್ಹ. ವೃತ್ತಿಯಲ್ಲಿರುವ ಕುರಿಗಾಹಿಗಳನ್ನೇ consider ಮಾಡುತ್ತೇವೆ, ಅವರ ಕುಟುಂಬದ ಸದಸ್ಯರನ್ನೂ consider ಮಾಡುತ್ತೇವೆ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಅದಕ್ಕೆ ಕಾಲಮಿತಿಯನ್ನು ನಿಗದಿ ಪಡಿಸಿರುವುದು ಅಷ್ಟು ಸರಿಯಲ್ಲ. ಇಷ್ಟೇ ನಿಯಮಿತ ಕಾಲದಲ್ಲಿ ಅವರಿಗೆ ಏನಾದರೂ ದೂರಿದ್ದರೆ ಹೇಳಬೇಕು ಎನ್ನುವುದು ಸರಿಯಲ್ಲ. ಕುರಿ ಜೊತೆಯಲ್ಲಿ ಹೋದವನಿಗೆ ಅಲ್ಲಿ ದೌರ್ಜನ್ಯವಾದಾಗ..

**ಸಭಾಪತಿಯವರು:-** ಎಲ್ಲಾ ಇತಿಹಾಸ ಹೇಳಬೇಡಪ್ಪ.. ಸಾಕು. ಬಿಲ್ ಮಾಡಿದೆ ಎಂದರೆ ತಿಳಿದುಕೊಳ್ಳಬೇಕು. ಬೇಗ ಮುಗಿಸಿ.

**ಶ್ರೀ ಡಿ.ಟಿ.ಶ್ರೀನಿವಾಸ್:-** ಹಾಗಾಗಿ ಇದೊಂದು ಸ್ವಾಗತಾರ್ಹ ಬಿಲ್. ಸಾಕಷ್ಟು ವರ್ಷಗಳಿಂದ ಕುರಿಗಾಹಿಗಳ ಮೇಲೆ ಆಗುತ್ತಿರುವ ದೌರ್ಜನ್ಯಕ್ಕೆ ನಿಗದಿ ಪಡಿಸಿರುವ ಶಿಕ್ಷೆ ಸ್ವಾಗತಾರ್ಹ. ನಾನು ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

**ಶ್ರೀ ಶಾಂತಾರಾಮ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು.

ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಅಭಿವೃದ್ಧಿಯ ಕ್ರಮಗಳು ಮತ್ತು ದೌರ್ಜನ್ಯದ ವಿರುದ್ಧ ರಕ್ಷಣೆ ವಿಧೇಯಕ, 2025ನ್ನು ತಂದಿದ್ದು, ಅದರ ಬಗ್ಗೆ ಒಂದೆರಡು ಸ್ಪಷ್ಟೀಕರಣವನ್ನು ನಾನು ಕೇಳಬಯಸುತ್ತೇನೆ. ಮೊದಲನೆಯದಾಗಿ ಜಾನುವಾರು ವಿವರಗಳನ್ನು ನಮೂದಿಸಲು ಸಾಕಷ್ಟು ಸ್ಥಳದೊಂದಿಗೆ ಗುರುತಿನ ಚೀಟಿ ಒದಗಿಸುವುದಕ್ಕಾಗಿ ಎನ್ನುವ ಶಬ್ದವನ್ನು ಬರೆದಿದ್ದಾರೆ. ಒಮ್ಮೆ ಅವನು ತನ್ನ ಕುರಿಗಳ ಸಂಖ್ಯೆಯನ್ನು ದಾಖಲು ಮಾಡಿದ ನಂತರ ಕುರಿಗಳ ಸಂಖ್ಯೆ ಹೆಚ್ಚಾಗುತ್ತಿರುತ್ತದೆ. ಆಗ ಅದಕ್ಕೆ ಏನು ವ್ಯವಸ್ಥೆ ಎನ್ನುವುದು ಒಂದು ಪ್ರಶ್ನೆ. ಇನ್ನೊಂದು ಜೀವವಿಮೆ, ಆರೋಗ್ಯವಿಮೆ, ಪಶುವಿಮೆ ಮತ್ತು ವಿಕಲತೆಯ ವ್ಯಾಪ್ತಿ ಎಂಬುದನ್ನು ಇಲ್ಲಿ ಉಲ್ಲೇಖ ಮಾಡಿದ್ದಾರೆ. ಈ ಜೀವವಿಮೆಯಲ್ಲಿ ಕೇವಲ ಒಬ್ಬ ವ್ಯಕ್ತಿಗಾಗಿಯೇ ಅಥವಾ ಇಡೀ ಕುಟುಂಬಕ್ಕಾಗಿಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಇನ್ನು ಕೌಶಲ್ಯ ಉನ್ನತೀಕರಣ ಎನ್ನುವ ಶಬ್ದವನ್ನು ಉಲ್ಲೇಖ ಮಾಡಿದ್ದಾರೆ. ಕುರಿ ಕಾಯುವಂಥ ತರಬೇತಿಯು ಯಾವ ಕೌಶಲ್ಯದಡಿ ಬರುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಉತ್ಪನ್ನಗಳಿಗೆ ಮಾರಾಟ ಬೆಂಬಲ ಎನ್ನುವುದು ಒಂದು ಇದ್ದು, ಅದರ ಮಾರುಕಟ್ಟೆ ಎಲ್ಲಿ ಎನ್ನುವುದನ್ನು ಉಲ್ಲೇಖ ಮಾಡಿದರೆ ಸ್ವಲ್ಪ ಸರಳವಾಗುತ್ತದೆ.

ಬಹಳ ಮಹತ್ವವಾದುದು ಏನೆಂದರೆ ನಷ್ಟದ ಸಂದರ್ಭದಲ್ಲಿ ಹಣಕಾಸು ಅಥವಾ ಪರಿಹಾರ ಎಂದು ಕೊಟ್ಟಿದ್ದಾರೆ. ಮೂರು ಸಂದರ್ಭಗಳಲ್ಲಿ ಕುರಿಗಾಹಿಗೆ ನಷ್ಟವಾಗುತ್ತದೆ. ಒಂದು ಆತ ಅಲೆಮಾರಿಯಾಗಿರುವುದರಿಂದ

ಬೆಳೆ ಕಟಾವಾದ ಮೇಲೆ ರೈತರ ಹೊಲದಲ್ಲಿ ಕುರಿ ಮೇಯಿಸಲಿಕ್ಕೆ ಹೋಗುತ್ತಾನೆ. ಅಲ್ಲಿ ಆ ರೈತರ ನಾಯಿಗಳಿಂದ ಅಥವಾ ಬೇರೆ ಬೇರೆ ಪ್ರಾಣಿಗಳಿಂದ ಅಥವಾ ಸ್ವತಃ ಆ ರೈತನೇ ಕುರಿಗಳಿಗೆ ಹಾನಿ ಮಾಡಿದರೆ ಅದಕ್ಕೇನು ಪರಿಹಾರ? ಎರಡನೆಯದಾಗಿ ಕುರಿಗಳು ರಸ್ತೆ ದಾಟುವಾಗ ವಾಹನಗಳಿಂದ ಅಪಘಾತಕ್ಕೀಡಾಗುತ್ತವೆ. ಅದಕ್ಕೆ ಪರಿಹಾರವೇನು? ಮೂರನೆಯದಾಗಿ ಅರಣ್ಯ ಪ್ರದೇಶಗಳಲ್ಲಿ ಕುರಿಗಳು ಹೋದಾಗ ಅಲ್ಲಿದ್ದಂಥ ಕ್ರೂರ ಪ್ರಾಣಿಗಳಿಗೆ ಆಹಾರವಾದರೆ ಅಥವಾ ಸಿಡಿಲಿಗೆ ಆಹುತಿಯಾದರೆ ಅದಕ್ಕೆ ಪರಿಹಾರವೇನು ಎನ್ನುವುದಕ್ಕೆ ಆತ ದಾಖಲೆ ಕೊಡಬೇಕೆ ಎನ್ನುವುದು ನನ್ನ ಪ್ರಶ್ನೆ. ಏಕೆಂದರೆ ಅರಣ್ಯ ಪ್ರದೇಶಗಳಿಗೆ ಹೋದಾಗ ರೈತರ ಜಾನುವಾರುಗಳಿಗೆ ಪರಿಹಾರ ಸಿಗುವುದಿಲ್ಲ. ಆ ರೀತಿ ಇದಕ್ಕೆ ಏನು ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟೀಕರಿಸಬೇಕೆಂದು ಹೇಳುತ್ತಾ, ನಾನು ಈ ಬಿಲ್‌ನ್ನು ಸ್ವಾಗತಿಸುತ್ತೇನೆ.

**ಡಾ: ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿಯ ಕ್ರಮಗಳು ಮತ್ತು ದೌರ್ಜನ್ಯದ ವಿರುದ್ಧ ರಕ್ಷಣೆ ವಿಧೇಯಕ, 2025ನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಮಾನ್ಯ ಸಭಾಪತಿಯವರೆ, ನಮಗೆ ತಿಳಿದಿರುವಂತೆ ಕುರಿಗಾಹಿಗಳಿಗೆ ನಿರಂತರವಾಗಿ ಒಂದೇ ಕಡೆ ಇದ್ದು ಜೀವನ ಮಾಡುವ ಅವಕಾಶವಿರುವುದಿಲ್ಲ. ಹಳ್ಳಿಗಳ ಹೊಲಗಳ ಬದಿಯಲ್ಲಿ, ಕಾಡಿನಂಚಿನಲ್ಲಿ ಹೀಗೆ ಕುರಿಗಳನ್ನು ಮೇಯಿಸುತ್ತಿರುತ್ತಾರೆ. ಇಂಥ ಸಂದರ್ಭದಲ್ಲಿ ಅವರ ಜೀವಕ್ಕೆ, ಅವರ ಬದುಕಿಗೆ ಕೂಡ ರಕ್ಷಣೆಯಿರುವುದಿಲ್ಲ.

ಕುರಿಗಳಿಗಷ್ಟೇ ಅಲ್ಲ, ಅವರ ಜೀವಕ್ಕೂ ಕೂಡ ರಕ್ಷಣೆಯಿರುವುದಿಲ್ಲ. ತಮಗೆ ಗೊತ್ತಿದೆ. ಮೊನ್ನೆ ಮೊನ್ನೆ ಬಾಗಲಕೋಟೆಯಲ್ಲಿ ಕುರಿಗೆ ಸಂಬಂಧಪಟ್ಟಹಾಗೆ ದುಷ್ಟರು ಅದನ್ನು attack ಮಾಡಲು ಬಂದಾಗ ತಡೆಯಲು ಹೋದವನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಆತ ಮರಣಕ್ಕೀಡಾಗಿದ್ದಾನೆ ಎನ್ನುವುದನ್ನು ನಾವು ಕೇಳಿದ್ದೇವೆ. ಹೀಗೆ ಅನೇಕ ಬಾರಿ ಮರಣಕ್ಕೆ ಗುರಿಯಾದ ಕುರಿಗಳಿರಬಹುದು ಅಥವಾ ಕುರಿಗಾಹಿಯಿರಬಹುದು ಅವರ ರಕ್ಷಣೆಗೆ ಯಾವುದೇ ಕಾನೂನು ಇರಲಿಲ್ಲ. ಅವರ ರಕ್ಷಣೆಗೆ ಕಾನೂನು ತಂದಿರುವುದು ಸೂಕ್ತವಾಗಿದೆ ಎನ್ನುವಂಥದ್ದು ನನ್ನ ಒಂದು ಅಭಿಪ್ರಾಯ. ಅದರದ್ದೇ ಆದಂಥ ಒಂದು ಮಂಡಳಿ, ಅದಕ್ಕೇ ಆದಂಥ ನಿಧಿಯನ್ನು ಸ್ಥಾಪನೆ ಮಾಡಿರುವುದು ಕೂಡ ಸೂಕ್ತ. ನಿಧಿಯನ್ನು ಸ್ಥಾಪನೆ ಮಾಡಿರುವ ಉದ್ದೇಶ ಚೆನ್ನಾಗಿದೆ. ಆದರೆ ಸೆಕ್ಷನ್ 8(6)ರಲ್ಲಿ "ನಿಧಿಯನ್ನು ಈ ಅಧಿನಿಯಮದ 6ನೇ ಪ್ರಕರಣದಡಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಸ್ಕೀಮ್‌ಗಳ ಅನುಷ್ಠಾನಕ್ಕಾಗಿ ಮತ್ತು ನಿಯಮಿಸಬಹುದಾದ ಯಾವುದೇ ಇತರ ಉದ್ದೇಶಕ್ಕಾಗಿಯೂ ಸಹ ಬಳಸಿಕೊಳ್ಳಬಹುದು" ಎಂದು ಹೇಳಿದ್ದಾರೆ. ಅಂದರೆ ಲಕ್ಷಾಂತರ ಜನರೇನು ಕುರಿಗಾಹಿಗಳಿಲ್ಲ. ಇದ್ದರೆ ಕೈಬೆರಳೆಣಿಕೆಯಷ್ಟು. ಸಾವಿರಾರು ಸಂಖ್ಯೆಯಲ್ಲಿರಬಹುದೇನೋ. ಆ ಸಾವಿರಾರು ಜನರ ಎಣಿಕೆಯಲ್ಲಿರುವಂಥವರಿಗೆ ಎಪಿಎಂಸಿಯಲ್ಲಿ ಮಾರಾಟ ಮಾಡಿದಂಥ ಶುಲ್ಕವನ್ನು ನಿಧಿಯಾಗಿ ತೆಗೆದುಕೊಂಡು, ಅದರ ಮೂಲಕ ಸ್ಕೀಮ್‌ಗಳನ್ನು ಕೊಡುತ್ತೀರಿ. ಬಹಳ ಅಂದರೆ ರೂ. 10 ರಿಂದ 15 ಕೋಟಿಗಳು ಸಂಗ್ರಹವಾಗಬಹುದು. ಅದನ್ನು ನಿಯಮಿಸಬಹುದಾದ ಇತರ

ಉದ್ದೇಶಗಳಿಗೆ ಸರ್ಕಾರ ಬಳಸಬಹುದು ಎನ್ನುವುದು ಸರಿಯಾದುದಲ್ಲ. ಅದನ್ನು ಬಳಸಿಕೊಳ್ಳಬಾರದು. ಅವರಿಗಾಗಿಯೇ ಅದನ್ನು ಇಡಬೇಕು. ಅವರು ಬಹಳಷ್ಟು ಸಂಖ್ಯೆಯಲ್ಲಿಲ್ಲ. ಅವರ ವಿದ್ಯೆ, ಚಿಕಿತ್ಸೆ, ಆರೋಗ್ಯ ಏನೇನು ಹೇಳಿದಿರಿ, ಅದಕ್ಕೆ continuous ಆಗಿ ಅಲ್ಲಿಯೇ ಇರುವ ಹಾಗೆ ಮಾಡಿ. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಅವರ ಕ್ಷೇಮವನ್ನು ಪಡೆಯುವ ನಿಟ್ಟಿನಲ್ಲಿ ಅಧಿಕಾರಿಗಳಿಂದ ಏನಾದರೂ ತೊಂದರೆಯಾದರೆ, ಹಾನಿಯಾದರೆ, ಆರ್ಥಿಕ ನಷ್ಟವುಂಟಾದರೆ ಅಂಥ ಸಂದರ್ಭಗಳಲ್ಲಿ ಅಧಿಕಾರಿಗಳನ್ನು ಸಹ ಗುರಿ ಮಾಡಲಾಗುತ್ತದೆ ಎನ್ನುವುದನ್ನು ಹೇಳಿದಿರಿ. ಆಯಿತು, ಅವರಿಂದ ತಪ್ಪಾಗಿದ್ದರೆ ಅವರು ಆ ಶಿಕ್ಷೆಗೆ ಗುರಿಯಾಗಲಿ. ಆದರೆ ಇಲ್ಲಿ ಸೆಕ್ಷನ್ 16ರಲ್ಲಿ contradictory ಯಾಗಿ ಸದ್ಭಾವನೆಯಿಂದ ಅಧಿಕಾರಿ ಏನಾದರೂ ಕೆಲಸ ಮಾಡಿದ್ದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳುವಂತಿಲ್ಲ ಎಂದು ಹೇಳಿದ್ದೀರಿ. ಮಾಡುವುದೇ ಸರ್ಕಾರಿ ವೃತ್ತಿ. ಕರ್ತವ್ಯ ಅವರ ಕೆಲಸ. ಆ ಕರ್ತವ್ಯವನ್ನು ಆತ ಮಾಡುತ್ತಿರುತ್ತಾನೆ. ಅಂದಾಗ ಇದರಲ್ಲಿ ಆತನಿಗೆ ಯಾವುದೇ ಶಿಕ್ಷೆ ಮಾಡಬಾರದು ಎಂಬುದು ನನಗೆ ಅರ್ಥವಾಗಲಿಲ್ಲ. ಹಾನಿ ಮಾಡಿದ್ದರೆ ಒಂದು ಕಡೆ ಶಿಕ್ಷೆಯಾಗಬೇಕು ಎಂದು ಹೇಳುತ್ತೀರಿ. ಒಳ್ಳೆಯ ಕೆಲಸ ಮಾಡಿದ್ದರೆ ಅವನಿಗೇಕೆ ಅದರಿಂದ ಶಿಕ್ಷೆಯಾಗಬಾರದು ಎನ್ನುವುದನ್ನು ಹೇಳುವ ಅಗತ್ಯವೇ ಇರುವುದಿಲ್ಲ ಎನ್ನುವುದು ನನ್ನ ಒಂದು ಭಾವನೆ.

ಕಾಲಮಿತಿ, ಗುರುತಿನ ಚೀಟಿ; ಸ್ವಾಮಿ, ಈಗಾಗಲೇ ನಿಮ್ಮ ಬಳಿ ಡೇಟಾ ಇದೆ. ನಿಮ್ಮ ಇಲಾಖೆಯಲ್ಲಿಯೇ ಅವರೆಷ್ಟು ಜನರಿದ್ದಾರೆ ಎನ್ನುವ ಡೇಟಾ ಇದೆ. ಅವರು ವಿದ್ಯಾವಂತರಲ್ಲ, ಬುದ್ಧಿ ಇಲ್ಲ. ಅವರಿಗೆ ಆನ್‌ಲೈನ್‌ನಲ್ಲಿ ಹೇಗೆ ಹಾಕಬೇಕೆಂದು ಗೊತ್ತಿಲ್ಲ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲ. ಇಂಥ ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ಬದುಕಿನವರಿಗೆ ತಾವು ಅವನು ಅರ್ಜಿ ಹಿಡಿದುಕೊಂಡು ಬಂದು ಕೊಡಬೇಕೆಂದು ಒಂದು ಅಭಿಯಾನ ಮಾಡಿ. ತಮಗೆ ಗೊತ್ತಿದೆ. ಯಾವ ಯಾವ ಊರಿನಲ್ಲಿ ಎಷ್ಟು ಜನರಿದ್ದಾರೆ, ಏನಿದ್ದಾರೆಂದು ಒಂದು ಅಭಿಯಾನ ಮಾಡಿ. ಅರ್ಜಿಗಳನ್ನು ತೆಗೆದುಕೊಂಡು ನೀವೇ ಅವರ ಮನೆ ಬಾಗಿಲಿಗೆ ಹೋಗಿ ಈ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ಮುಂದೆ ಬನ್ನಿ ಎನ್ನುವುದನ್ನು ನಾನು ಸಲಹೆ ರೂಪದಲ್ಲಿ ಹೇಳಲಿಕ್ಕೆ ಈ ಸಂದರ್ಭದಲ್ಲಿ ಇಷ್ಟ ಪಡುತ್ತೇನೆ. ಈ ದಂಡನೆಗಳು ಮುಂತಾದವು ನಿಜವಾಗಿಯೂ ಒಳ್ಳೆಯ ಕೆಲಸಗಳನ್ನೇ ಮಾಡಿದ್ದೀರಿ. ಹಾಗಾಗಿ ಅವರಿಗೆ ರಕ್ಷಣೆ ಬಹಳ ಅಗತ್ಯ. ಈ ಕಾನೂನನ್ನು ನಾನು ಸ್ವಾಗತ ಮಾಡುತ್ತೇನೆ. ನಮಸ್ಕಾರ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಸರ್ಕಾರ ತಂದಿರತಕ್ಕಂಥ ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ, ಇವತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಕೋಟಿಗೂ ಮೀರಿ ಕುರಿ ಮತ್ತು ಮೇಕೆಗಳ ಸಂಖ್ಯೆಯಿದೆ. ಇದು ಒಂದು ಬಹಳ ದೊಡ್ಡ ಉದ್ಯೋಗ. ಸರ್ಕಾರ ಎಲ್ಲಿಯೋ ಒಂದು ಕಡೆ ಉದ್ದಕ್ಕೂ ಕೂಡ ಇದನ್ನು neglect ಮಾಡುತ್ತಾ ಬರುತ್ತಿದೆ. ಏಕೆಂದರೆ ಇದು ಹಳ್ಳಿಗಾಡಿನಲ್ಲಿ ತರುಣರಿಗೆ ಉದ್ಯೋಗ ಸೃಷ್ಟಿ ಮಾಡುವಂಥದ್ದಾಗಿದೆ. ನಿಜ, ಇವತ್ತು ಅಲೆಮಾರಿ ಕುರುಬರು ಅವರ ಜೊತೆಗೆ ಒಂದು ಕತ್ತೆ, ಒಂದು ನಾಯಿ, ಅವನ ಹೆಂಡತಿ ಮಕ್ಕಳೊಂದಿಗೆ ಹೋಗುತ್ತಾರೆ. ಅದು ಇತ್ತೀಚೆಗಂತೂ ಜಾಸ್ತಿಯಾಗಿದೆ.

ಅವರ ಜೊತೆಗೆ ಅಡಿಗೆ ಮಾಡಿಕೊಡಲು ಹೋಗುವ ಹೆಣ್ಣುಮಕ್ಕಳನ್ನು ಅಲ್ಲಿಯೇ ಅಡ್ಡಹಾಕಿ ರೇಪ್ ಮಾಡುವಂಥದ್ದು, ಕಳ್ಳತನ ಮಾಡುವಂಥದ್ದು, ಕುರಿ ಕಳ್ಳತನ ಮಾಡುವುದು ನಡೆಯುತ್ತಿದ್ದು, ಅವರಿಗೆ ಯಾವುದೇ ವಿಧವಾದ ರಕ್ಷಣೆಯಿಲ್ಲ. ಆ ರಕ್ಷಣೆ ಕೊಡುವುದಕ್ಕೆ ತಾವು ಕಾನೂನು ಮಾಡುತ್ತಿರುವುದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ.

(ಮುಂದು)

(937) 22-08-2025 (11.10) ಕೆಜಿ: ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ವಿಶ್ವನಾಥ್ (ಮುಂದು):-**

ಇದರ ಜೊತೆಗೆ ನಾನು ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ mobile school ಗಳನ್ನು ಮಾಡಿದ್ದೆ. ಕೆಎಸ್‌ಆರ್‌ಟಿಸಿ ಹಳೆಯ ಬಸ್‌ಗಳಲ್ಲಿ ಸೀಟುಗಳನ್ನು ತೆಗೆದು ಶಾಲೆಗಳ ರೀತಿ ಮಾಡಿಕೊಂಡು ಸಂಚಾರಿ ಶಾಲೆಗಳ ರೀತಿ ಹೋಗುತ್ತಿತ್ತು. ಏಕೆಂದರೆ ಯಾರ ಮಕ್ಕಳು ಶಿಕ್ಷಣದಿಂದ ವಂಚಿತರಾಗದೇ, ಶಿಕ್ಷಣ ಮತ್ತು ಆರೋಗ್ಯ ಕೊಡುವಂತಹ ಕ್ರಮ ಆಗಬೇಕಾಗಿದ್ದು, ಅದು ಇಲ್ಲೆಲ್ಲಿಯೂ ಕಂಡು ಬಂದಿಲ್ಲ. ಅಲೆಮಾರಿ ಕುರುಬರು ಇರಬಹುದು ಅಥವಾ ಮತ್ತೊಬ್ಬರು ಇರಬಹುದು ಅವರನ್ನು ಕರೆದು ಸಭೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಎಲ್ಲಾ ಮಂತ್ರಿಗಳು ಸಂಬಂಧಪಟ್ಟ ಇಲಾಖೆಗಳ ಫಲಾನುಭವಿಗಳನ್ನು ಕರೆದು ಅವರ ಸಮಸ್ಯೆಗಳ ಬಗ್ಗೆ ಸಭೆ ಮಾಡಬೇಕೆಂದು ವಿನಂತಿ ಮಾಡಿರುತ್ತೇನೆ. ಆಗ ನೇರವಾಗಿ horse mouth ನಿಂದ ಸಮಸ್ಯೆಗಳನ್ನು ಕೇಳಿದಂತಾಗುತ್ತದೆ. ಆದರೆ ಬಹಳ ಮಂತ್ರಿಗಳು ಸಭೆ ಮಾಡುತ್ತಿಲ್ಲ, ಈ ಕೆಲಸ ಮಾಡಬೇಕಾಗಿದ್ದು, ಅವರ ಕಷ್ಟ-ಸುಖ: ಕೇಳಬೇಕಾಗುತ್ತದೆ. ಕುರಿಗಾಹಿ ಸಮಸ್ಯೆಯೂ ಬಹಳ ದೊಡ್ಡದಾಗಿದೆ.

ಮಾನ್ಯ ಸಭಾಪತಿಯವರೇ, New York ನ ಪಕ್ಕ Newark ಎಂದಿದ್ದು ಆ ಸ್ಥಳಕ್ಕೆ ನಾನು ಹೋಗಿದ್ದೆನು. ಅಲ್ಲಿ ಮೂರು ವರ್ಷಗಳಿಗೆ ಒಮ್ಮೆ ಕುರಿಗಳ ಜಾತ್ರೆ ನಡೆಯಲಿದ್ದು, ಕುರಿಗಳನ್ನು ಸಾಕುವುದು, ಮಾರ್ಕೆಟಿಂಗ್ ಮಾಡುವುದು, ಪ್ರಾಸಾದ, ಬೆಣ್ಣೆ ತಯಾರಿಕೆ ಎಲ್ಲವೂ ನಡೆಯುತ್ತದೆ. ಕುರಿ ತುಪ್ಪಟ ಹೇಗೆ ತೆಗೆಯಬೇಕು, ಅದನ್ನು ಏನು ಮಾಡಬೇಕು ಎಂಬಿತ್ಯಾದಿ ಬಗ್ಗೆಯೂ ನಡೆಯುತ್ತದೆ. ಇಡೀ ಪ್ರಪಂಚಕ್ಕೆ ಕುರಿಗಳಿಂದ ದೊಡ್ಡ ಮಾರುಕಟ್ಟೆ ಹೇಗಾಗುತ್ತದೆ ಎಂಬುದು ತಿಳಿಯುತ್ತದೆ. ನಾನು ಮಾನ್ಯ ಲಾಲೂ ಪ್ರಸಾದ್ ಯಾದವ್ ಅವರನ್ನು ಅಭಿನಂದಿಸುತ್ತೇನೆ. ಏಕೆಂದರೆ ಅವರು ರೈಲ್ವೆ ಮಂತ್ರಿಯಾಗಿದ್ದಾಗ ಕುರಿಗಾಹಿಗಳಿಗೆ ಆಶ್ರಯ ಕೊಟ್ಟರು. ರೈಲುಗಳಲ್ಲಿ ಹಾಸಿಕೊಳ್ಳಲು ಕುರಿಯ ಉಣ್ಣೆಯ ಕಂಬಳ ಉಪಯೋಗಿಸಲು ಆದೇಶ ಮಾಡಿದ್ದು, ಬಹಳಷ್ಟು ಕುರಿಗಾರರಿಗೆ ಅದರಿಂದ ಅನುಕೂಲವಾಯಿತು. ಹಾಗಾಗಿ ಯಾರೋ ಒಬ್ಬರು ಮಂತ್ರಿ ಯಾವುದೋ ಕಾಲದಲ್ಲಿ ಸಹಾಯ ಮಾಡಿದ್ದನ್ನು ನೆನಸಿಕೊಳ್ಳಬೇಕಾಗುತ್ತದೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ದೆಹಲಿಗೆ ಕರೆದುಕೊಂಡು ಹೋಗಿದ್ದಾಗ ನಬಾರ್ಡ್ ಜೊತೆ ಮಾತನಾಡಿ ರೂ.450 ಕೋಟಿಗಳನ್ನು ನಬಾರ್ಡ್‌ನಿಂದ ತಂದೆವು. ನಮ್ಮ ಸ್ನೇಹಿತರೊಬ್ಬರು ತೆಲಂಗಾಣ ಪದ್ಧತಿ ಬಗ್ಗೆ ಹೇಳಿದ್ದು, ಅಲ್ಲಿ 20 ಕುರಿ ಮತ್ತು ಒಂದು ಟಗರನ್ನು ಒಂದು ಕುಟುಂಬಕ್ಕೆ ಕೊಡುತ್ತಾರೆ. ನಮ್ಮ ಕೆಎಂಎಫ್ ರೀತಿ ಅಲ್ಲಿ ಮಾಂಸ ಮತ್ತಿತರ ವಸ್ತುಗಳನ್ನು ಸರ್ಕಾರವೇ

ತೆಗೆದುಕೊಳ್ಳುತ್ತದೆ. ಆದ್ದರಿಂದ, ಕೆಎಂಎಫ್ ರೀತಿ ಇದನ್ನೂ ನಡೆಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಏಕೆಂದರೆ marketing ಬಹಳ ಮುಖ್ಯವಾಗಿದೆ. ಏಕೆಂದರೆ, ಕುರಿ ವ್ಯಾಪಾರದಲ್ಲಿ ಖರೀದಿ ಮಾಡುವವನು ಕುರಿಯನ್ನು ಹಿಡಿದು ನೋಡಿ, ಇದು ರೂ.6,000/- ಎಂದು ಹೇಳುತ್ತಾನೆ. ಇವತ್ತು ಕುರಿಯ ಮಾಂಸ ಒಂದು ಕೆ.ಜಿ.ಗೆ ರೂ.800 ಇದ್ದು, ಅದೂ ಸಹ ಒಳ್ಳೆಯ ಕುರಿ ಮಾಂಸ ಸಿಗುವುದಿಲ್ಲ. ಹಾಗಾಗಿ ಬೃಹತ್ ಮಾರುಕಟ್ಟೆ ಮತ್ತು ಆದಾಯವೂ ಇದೆ. Marketing ನಲ್ಲಿ ಅವರಿಗೆ ಸೆಸ್ ಹಾಕಿ ವಾಪಸ್ಸು ಕೊಡುವ ವಿಚಾರ ಹೇಳಿದ್ದರಿಂದ ನನಗೆ ಬಹಳ ಸಂತೋಷವಾಯಿತು. It is a good move.

ಮಾನ್ಯ ಸಭಾಪತಿಯವರೇ, ಒಂದು ಸಭೆ ಕರೆದು ಚರ್ಚಿಸಬೇಕು. ಜಂತು ಹುಳುಗಳು ಹೆಚ್ಚಾದಾಗ ಅನೇಕ ಕುರಿಗಳು ಸಾಯುತ್ತಿದ್ದು, ಅದಕ್ಕೆ ಔಷಧಿ ಕೊಡುವವರು ಇಲ್ಲದಂತಹ ಪರಿಸ್ಥಿತಿಯಾಗಿದೆ. ಇಲಾಖೆಗಳಲ್ಲಿ ಸಹಾಯಕ ನಿರ್ದೇಶಕರು ಎಂದು ಕೊಟ್ಟಿದ್ದು, ಇಲ್ಲಿ ಅದೂ ಇಲ್ಲದಂತಾಗಿದೆ. ಇದು ಒಂದು ಜನಾಂಗವಲ್ಲ, it is a community. Shepherds is a community not a caste. ಹಾಗಾಗಿ ನಮ್ಮ ಹಳ್ಳಿಗಳಲ್ಲಿ ಬ್ರಾಹ್ಮಣರಿಂದ ಹಿಡಿದು ಎಲ್ಲಾ ಜಾತಿಯವರು ಎರಡೆರಡು ಕುರಿಗಳನ್ನು ಮನೆಯಲ್ಲಿ ಇಟ್ಟುಕೊಂಡಿರುತ್ತಾರೆ. ಆ ಕುರಿಗಳು ಮನೆಯವರ ಹಿಂದೆಯೇ ಹೋಗುತ್ತವೆ. ಆರು ತಿಂಗಳಿಗೆ ಬಲಿತ ನಂತರ ಕುರಿಗಳನ್ನು ಮಾರಿ ಆದಾಯ ಗಳಿಸುತ್ತಾರೆ. ಇದೆಲ್ಲಾ ಆದ ನಂತರ ವಿರಾಮವಿದ್ದಾಗ ಒಂದು ಸಭೆ ಮಾಡಬೇಕು, ನನ್ನನ್ನೂ ಕರೆದರೆ ನಾನೂ ಬರುತ್ತೇನೆ. ಸಭೆಗೆ ಯಾರೆಲ್ಲರನ್ನು ಕರೆದು ಇದನ್ನು ಹೇಗೆ ಬಲಪಡಿಸಿ ಜನರಿಗೆ ಅನುಕೂಲ ಮಾಡಬಹುದು. Particularly the young Shepherds ಆದವರಿಗೆ ಯಾವರೀತಿ ಸಹಾಯ ಮಾಡಬಹುದು ಎಂಬ ಬಗ್ಗೆ ಚರ್ಚಿಸಲು ಒಂದು ಸಭೆ ಕರೆಯಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

**ಡಾ: ಡಿ.ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕವು ಬಹಳ ಅತ್ಯುತ್ತಮವಾಗಿದ್ದು, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಕುರಿಗಾಹಿಗಳಲ್ಲಿ ಎರಡು ರೀತಿಗಳಿದ್ದು, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶ ಅಥವಾ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಕುರಿಗಳನ್ನು ಮೇಯಿಸಿಕೊಂಡು ಹೋಗುತ್ತಲೇ ಇರುತ್ತಾರೆ. ಕೇವಲ ಒಂದು ದಿನ ಅಥವಾ ಒಂದು ವಾರ ಅಥವಾ ಒಂದು ವರ್ಷವಲ್ಲದೇ ಕುರಿಗಳನ್ನು ಮೇಯಿಸಿಕೊಂಡು ಹೋಗುತ್ತಲೇ ಇರುತ್ತಾರೆ. ಇದೊಂದು ರೀತಿ ಅಲೆಮಾರಿ ಕುರಿಗಾಹಿಗಳು. ಇನ್ನು ಕೆಲವು ಕಡೆ ಸ್ಥಳೀಯವಾಗಿ ಕುರಿಗಳನ್ನು ಸಾಕುತ್ತಿದ್ದು, ಇದು ಸಾಂಪ್ರದಾಯಿಕವಾಗಿ ಕೇವಲ ಒಂದು ಜನಾಂಗ ಅಥವಾ ಜಾತಿಗೆ ಸೀಮಿತವಾಗಿರದೇ ಎಲ್ಲಾ ಜಾತಿಯವರು ಆಯಾ ಊರುಗಳಲ್ಲಿ ಕುರಿಗಳನ್ನು ಸಾಕುತ್ತಾರೆ. ಕುರಿಗಳನ್ನು ಮನುಷ್ಯನಿಗೋಸ್ಕರವೇ ಸಾಕುತ್ತಾರೆ. ಮನುಷ್ಯನು ಕೋಳಿ ಮತ್ತು ಕುರಿಗಳ ಮೇಲೆ ಅವಲಂಬಿತನಾಗಿ ಮಾಂಸಹಾರಿಯಾಗಿದ್ದಾನೆ. ಕುರಿ ಮತ್ತು ಕೋಳಿಗಳಿಂದ ಪ್ರೊಟೀನ್ ಅಂಶ ಬರುವುದರಿಂದ ಕುರಿಗಳನ್ನು ಸಾಕುವವರ ಕ್ಷೇಮವನ್ನು ಕಾಪಾಡುವುದು ಸಹ ಸರ್ಕಾರದ ಆದ್ಯ ಕರ್ತವ್ಯವಾಗಿದೆ.

(ಈ ಹಂತದಲ್ಲಿ ವೈಸ್ ಛೇರ್ಮನ್‌ರವರು ಪೀಠವನ್ನು ಅಲಂಕರಿಸಿದರು)

ಮಾನ್ಯ ಸಭಾಪತಿಯವರೇ, ಇದರಲ್ಲಿ ಎರಡು ವಿಷಯಗಳ ಬಗ್ಗೆ ಹೇಳುವುದಾದರೆ, ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಗಮವು ಕೇವಲ ಅಲೆಮಾರಿ ಕುರಿಗಾಹಿಗಳಿಗೆ ಅನ್ವಯಿಸುತ್ತದೆಯೇ ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳೀಯವಾಗಿ ಕುರಿ ಸಾಕಾಣಿಕೆ ಮಾಡುವವರಿಗೆ ಅನ್ವಯಿಸುತ್ತದೆಯೇ ಎಂಬದನ್ನು ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ಜೊತೆಗೆ ಅವರಿಗೆ life insurance, education, ಇತ್ಯಾದಿ ವಿಷಯಗಳ ಬಗ್ಗೆ ಮಾನ್ಯ ಹೆಚ್. ವಿಶ್ವನಾಥ್‌ರವರು ಹೇಳಿದ್ದಾರೆ. ಈ ಕುರಿಗಾಹಿಗಳಿಗೆ ಸಾಮಾಜಿಕ ಭದ್ರತೆ ಇಲ್ಲದೇ, ವಲಸೆ ಜನರಾಗಿದ್ದು, ಹೋಗುತ್ತಲೇ ಇರುತ್ತಾರೆ. ಅವರ ಮಕ್ಕಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಆದ್ಯತೆ ಕೊಡಬೇಕು ಎಂದು ಹೇಳುತ್ತಾ, ಇದೊಂದು ಒಳ್ಳೆಯ ವಿಧೇಯಕ ಎಂದು ನಾನು ಸ್ವಾಗತಿಸುತ್ತೇನೆ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಕರ್ನಾಟಕ ಸಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025 ಅನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ಇದೊಂದು ವಿಶೇಷವಾದ ವಿಧೇಯಕ ಎಂದು ಭಾವಿಸಿದ್ದೇನೆ. ಏಕೆಂದರೆ, ಕುರಿಗಾಹಿಗಳು ಎಂದರೆ ಅಲೆಮಾರಿಗಳು ಎಂಬ ವಿಚಾರ ಬರುತ್ತದೆ. ಅವರು ಊರಿಂದ ಊರಿಗೆ ಕುರಿಗಳನ್ನು ಮೇಯಿಸಿಕೊಂಡು ವರ್ಷಾನುಗಟ್ಟಲೆ ಜೀವನ ನಡೆಸುತ್ತಾರೆ. ಅವರ ಜೀವನೋಪಾಯಕ್ಕೆ, ರಕ್ಷಣೆ ಮತ್ತು ಅವರ ಕುಟುಂಬದ ಏಳಿಗೆಗೆ ಸರ್ಕಾರ ಕಟಿಬದ್ಧವಾಗಿ ಕೆಲಸ ಮಾಡಲು ಸರ್ಕಾರ ಈ ಬಿಲ್ ತಂದಿದೆ ಎಂದು ನನಗನಿಸುತ್ತಿದೆ. ಏಕೆಂದರೆ, ಅಲೆಮಾರಿಗಳಿಗೆ ಮೂಲಭೂತ ಸೌಕರ್ಯ ಸಿಗದೇ ವರ್ಷಾನುಗಟ್ಟಲೆ ಕಾಡಿನಲ್ಲಿ ಅಥವಾ ಕಾಡಂಚಿನಲ್ಲಿ ಅಥವಾ ಊರಿನ ಹೊರಗೆ ಕುರಿ ಮತ್ತು ಪಶುಗಳನ್ನು ಮೇಯಿಸಿಕೊಂಡು ಬದುಕುವ ಸ್ಥಿತಿ ಬಹಳ ಹೀನಾಯವಾಗಿರುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಅಂತಹವರ ಬಗ್ಗೆ ಗಮನಹರಿಸಿ ಅವರನ್ನು ರಕ್ಷಿಸಿ, ಅವರ ಹಕ್ಕುಗಳನ್ನು ಪ್ರತಿಪಾದನೆ ಮಾಡಿಕೊಂಡು ಅವರಿಗೋಸ್ಕರವೂ ಸರ್ಕಾರ ಇದೆ ಎನ್ನುವ ರೀತಿ ಈ ಕಾಯಿದೆ ತಂದಿರುವುದಕ್ಕೆ ನಾನು ತುಂಬು ಹೃದಯದ ಸ್ವಾಗತ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಪಶುಪಾಲನಾ ಸಮುದಾಯದಿಂದ ಬಂದವನಾಗಿದ್ದು, ಹಳ್ಳಿಗಾಡುಗಳಲ್ಲಿ ಅವರು ಮೂಲತಃ ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಈ ಬಗ್ಗೆ ಮಾಜಿ ಶಿಕ್ಷಣ ಸಚಿವರಾದ ಶ್ರೀ ಹೆಚ್. ವಿಶ್ವನಾಥ್ ರವರು ಮಾತನಾಡಿದ್ದಾರೆ. ಇದಲ್ಲದೇ ಆರೋಗ್ಯದಿಂದಲೂ ವಂಚಿತರಾಗುತ್ತಿದ್ದು, ಹಲವಾರು ಬಾರಿ ವಿನಾಃಕಾರಣ ಅವರ ಮೇಲೆ ದೌರ್ಜನ್ಯ ಆಗುತ್ತಿದೆ. ಕುರಿಗಾಹಿಗಳಾಗಿ ಕೇವಲ ಗಂಡು ಮಕ್ಕಳಲ್ಲದೇ ಹೆಣ್ಣು ಮಕ್ಕಳು ಹೋಗುತ್ತಿದ್ದು, ಅವರ ಮೇಲಾಗುವ ದೌರ್ಜನ್ಯ, ಅತ್ಯಾಚಾರಗಳನ್ನು ನೋಡಿದಾಗ ಅವರಿಗೆ ರಕ್ಷಣೆ ಕೊಡುವ ಕಾಯಿದೆ ಬಹಳ ಅನಿವಾರ್ಯವಾಗಿದ್ದು, ಅದನ್ನು ತಂದಿರುವ ಮಾನ್ಯ ಸಚಿವರನ್ನು ನಾನು ಅಭಿನಂದಿಸುತ್ತೇನೆ. ನಮ್ಮ ರಾಜ್ಯದಲ್ಲಿ ಎಷ್ಟು ಕುರಿಗಾಹಿಗಳು ಇದ್ದಾರೆ, ಅಲೆಮಾರಿಗಳು ಎಷ್ಟು ಜನ ಇದ್ದಾರೆ, ಅವರಿಗೆ ವಸತಿ, ಆರೋಗ್ಯ, ಶಿಕ್ಷಣದ

ಸೌಲಭ್ಯಗಳೇನು? ಇವುಗಳನ್ನು ಯಾವ ರೀತಿ ಪರಿಗಣನೆ ಮಾಡುತ್ತಾರೆ ಎಂಬ ಮಾಹಿತಿಯನ್ನು ಸದನಕ್ಕೆ ಕೊಡಬೇಕು. ಕೆಲವರು ನಿರ್ದಿಷ್ಟವಾಗಿ ಯಾದವ ಸಮುದಾಯಕ್ಕೆ ಸೇರಿರುತ್ತಾರೆ, ಗೊಲ್ಲ ಸಮುದಾಯಕ್ಕೆ ಸೇರಿರುತ್ತಾರೆ, ಕಾಡುಗೊಲ್ಲ ಸಮುದಾಯಕ್ಕೆ ಸೇರಿರುತ್ತಾರೆ. ಕುರುಬ ಸಮುದಾಯಕ್ಕೆ ಸೇರಿರುತ್ತಾರೆ. ಒಕ್ಕಲಿಗ ಸಮುದಾಯದವರು ಸಹ ಎಷ್ಟೋ ಜನರು ಕುರಿಗಳನ್ನು ಸಾಕಿ ಅವರು ಜೀವನ ಕಟ್ಟಿಕೊಂಡಿರುವುದನ್ನು ನೋಡಿದ್ದೇವೆ.

(ಮುಂದು)

(938) 22-08-2025/11.20/ಎಂವಿ-ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು):-**

ಲಿಂಗಾಯತ ಸಮುದಾಯದಲ್ಲಿ ಇರುವುದನ್ನು ನೋಡಿದ್ದೇವೆ. ಹಾಗಾಗಿ, ಅಲೆಮಾರಿಗಳು ಎಂದು ಅದಕ್ಕೆ ಕೆಲವು ಜಾತಿಗಳನ್ನು ಸೇರಿಸಿ, ಅಲೆಮಾರಿ ಸಮುದಾಯಗಳೆಂದು ಮಾಡಿರತಕ್ಕಂಥದ್ದನ್ನು ನೋಡಿದ್ದೇವೆ. ಅವರಲ್ಲಿ ಕೆಲವು ಜನರಿಗೆ ಸೌಲಭ್ಯಗಳು ಸಿಗುತ್ತವೆ. ಆದರೆ, ಕೆಲವು ಜನರು ಆ ಸೌಲಭ್ಯಗಳಿಂದ ವಂಚಿತರಾಗಿರುವಂತಹ ಕುರಿಗಾಹಿಗಳು ಇರುತ್ತಾರೆ. ಅವರಿಗೆ ಯಾವ ರೀತಿ ಮೀಸಲಾತಿಗಳನ್ನು ಕೊಡುತ್ತಿದ್ದಾರೆ? ಅವರಿಗೆ ರಕ್ಷಣೆ ಕೊಡುವುದರ ಜೊತೆಗೆ, ಅವರಿಗೆ ಮೀಸಲಾತಿಯ ಹಕ್ಕುಗಳನ್ನು ಕೊಡುವಂತಹ ಕೆಲಸ ಆಗಬೇಕಾಗುತ್ತದೆ. ಶೈಕ್ಷಣಿಕ ಸೌಲಭ್ಯಗಳನ್ನು ಕೊಡುವಂಥದ್ದು ಆಗಬೇಕು. ವಸತಿ ಸೌಲಭ್ಯಗಳನ್ನು ಕೊಡುವಂಥದ್ದು ಆಗಬೇಕು. ಈ ಎಲ್ಲದಕ್ಕೂ ಸಹ ಗಮನ ಹರಿಸುವಂಥದ್ದು. ಮುಂದುವರೆದ ಭಾಗವಾಗಿ ವಿಧೇಯಕದಲ್ಲಿ ಈ ವಿಚಾರಗಳನ್ನು ಮಾನ್ಯ ಸಚಿವರು ಪ್ರಸ್ತಾಪ ಮಾಡಬೇಕೆಂಬ ವಿಚಾರಗಳನ್ನು ಹೇಳುತ್ತೇನೆ. ಏಕೆಂದರೆ, this section in our community is the most deserving section and we have to address it. ಇದರಲ್ಲಿ ಕೇವಲ ಒಂದು ಜಾತಿಗೆ ಸೇರಿರುವಂತಹ ಜನರು ಇರುವಂಥದ್ದು ಅಲ್ಲ. ವಿಶೇಷವಾಗಿ ಕುರಿಗಾಹಿಗಳಲ್ಲಿ ಮಹಿಳೆಯರು ಸಹ ಇದ್ದಾರೆ. ಅವರಿಗೆ ಬಡತನವಿರುತ್ತದೆ. ಇದರಿಂದ ಸಣ್ಣಸಣ್ಣ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಹಾಗಾಗಿ, ಎಷ್ಟೋ ಹೆಣ್ಣುಮಕ್ಕಳು ಕುರಿಗಳನ್ನು ಕಾಯುವುದು, ಸಣ್ಣ ವಯಸ್ಸಿನಲ್ಲಿಯೇ ಬಾಲ್ಯ ವಿವಾಹ ಮಾಡಿಕೊಂಡು ಅವರ ಜೀವನವೇ ತೊಂದರೆಗೆ ಒಳಪಟ್ಟಿರುವುದನ್ನು ನೋಡಿದ್ದೇವೆ. ಈಗ ತೀರಾ ಬಡತನದಲ್ಲಿರುವ ಸಮುದಾಯಗಳು ಯಾವುದಾದರೂ ಇದ್ದರೆ, ಅದು ಈ ಕುರಿಗಾಹಿ ಸಮುದಾಯಗಳು ಎಂಬ ವಿಚಾರವನ್ನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ಇದರ ಬಗ್ಗೆ ಇನ್ನೂ ಹೆಚ್ಚಿನ ಜನರು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇ ಆದರೆ ಅದನ್ನು ನಾನು ಕೂಡ ಸ್ವಾಗತ ಮಾಡುತ್ತೇನೆ. ಈ ಒಂದು ವಿಚಾರವನ್ನು ಮಾತನಾಡುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ಮಾನ್ಯ ಸಚಿವರು ಮತ್ತು ರಾಜ್ಯ ಸರ್ಕಾರಕ್ಕೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಇಂತಹ ವಿಚಾರಗಳಿಗೆ ಹೆಚ್ಚು ಮಹತ್ವ ಕೊಟ್ಟಿರುವುದಕ್ಕೋಸ್ಕರ ಎಂದು ಹೇಳುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಚಿವರು ಈ ವಿಧೇಯಕದಲ್ಲಿ 'Definition' ಅನ್ನು ನೀಡಿದ್ದಾರೆ. ಅಂದರೆ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳು ಎಂದರೆ ಏನೆಂದು ಕೊಟ್ಟಿದ್ದಾರೆ. ಅಂದರೆ, ಸಾಂಪ್ರದಾಯಿಕ ಮಾರ್ಗಗಳ ಮೂಲಕ ಮೇವು, ನೀರು ಮತ್ತು ಜೀವನಾಧಾರಕದ ಹುಡುಕಾಟದಲ್ಲಿ ಕುರಿ, ಮೇಕೆ ಅಥವಾ ಅಂತಹ ಜಾನುವಾರುಗಳ ಸಾಂಪ್ರದಾಯಿಕ, ಅಲೆಮಾರಿ ಅಥವಾ ಹಂಗಾಮಿ ಸಾಕಾಣಿಕೆಯಲ್ಲಿ ಮೂಲವಾಗಿ ತೊಡಗಿಸಿಕೊಂಡ ಯಾರೇ ವ್ಯಕ್ತಿ ಎಂದು ಹೇಳುತ್ತಿದ್ದಾರೆ. ಈಗ ಯಾರೇ ಅದರಲ್ಲಿ ತೊಡಗಿಸಿಕೊಂಡಿರುವಂತಹವರು; ಮಾನ್ಯ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ರವರು ಹೇಳಿದ ಹಾಗೆ, Caste ಅನ್ನುವಂಥದ್ದು ಹೋಗಿ Community ಎಂದು ಆಗಿದೆ. ಈ ಮೊದಲು ನಮ್ಮ ಪ್ರದೇಶಗಳಲ್ಲಿ ಕುರಿಗಾಹಿಗಳು ಎಂದರೆ, ಒಂದು ಸಮುದಾಯಕ್ಕೆ ಮತ್ತು ಒಂದು ಜಾತಿಗೆ ಸೇರಿದಂತಹವರು ಇರುತ್ತಿದ್ದರು. ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜುರವರು ಹೇಳಿದ ಹಾಗೆ ಎಲ್ಲಾ ಕಡೆಗಳಲ್ಲಿ ಎಲ್ಲಾ ವರ್ಗದ ಜಾತಿಯವರು ಸಹ ಕುರಿಗಾಹಿಗಳಾಗಿದ್ದಾರೆ. ಗ್ರಾಮೀಣ ಭಾಗದಲ್ಲಿ ಒಕ್ಕಲುತನದ ನಂತರ ಅದಕ್ಕಿಂತ ಹೆಚ್ಚಿಗೆ ಆದಾಯ ಬರುವಂತಹ ಉದ್ಯೋಗ ಯಾವುದಾದರೂ ಇದ್ದರೆ ಅದು ಕುರಿಸಾಕಾಣಿಕೆ ಎನ್ನುವಂಥದ್ದು. ಮಲೆನಾಡು ಮತ್ತು ಬಯಲುಸೀಮೆಗಳಲ್ಲಿ ಬೇರೆ ರೀತಿ ಇದೆ. ಅಲ್ಲಿ ಬಹಳಷ್ಟು ಸಮಸ್ಯೆಗಳು ಆಗುವಂಥದ್ದು ಇರುತ್ತದೆ. ಅವರಿಗೆ ಏನು ಯೋಜನೆಗಳ ಅನುಕೂಲತೆಗಳನ್ನು ಕಲ್ಪಿಸಿದ್ದಾರೆ, ಅದು ಬಹಳ ಸ್ವಾಗತಾರ್ಹವಾದುದು. ಅವರ ಉಪ ಜೀವನಕ್ಕೆ ಏನು ಬೇಕೆಂದು ಇನ್ನಷ್ಟು ಯೋಜನೆಗಳನ್ನು ಕೊಡುವಂಥದ್ದಕ್ಕೆ, ಅಂದರೆ ಅವರ ವಿದ್ಯಾಭ್ಯಾಸ ಮತ್ತು ಮನೆ ಕಟ್ಟಿ ಕೊಡುವುದಕ್ಕೆ ಯಾರೂ ಏನು ತೊಂದರೆ ಮಾಡುವುದಿಲ್ಲ. ಆದರೆ, ಇಲ್ಲಿ ಶಿಕ್ಷಾರ್ಹ ಅಪರಾಧವೆಂದು ಏನು ತೋರಿಸಿದ್ದಾರೆ, ಅದನ್ನು ಅತಿಯಾಗಿ ಹಾಕಿದ್ದಾರೆ. ಈಗ ಒಬ್ಬರಿಗೆ ಸಣ್ಣದಾಗಿ ಬೈದಿರುವುದಕ್ಕೆ ಮರಣದಂಡನೆ ಕೊಟ್ಟಂತೆ ಆಗುತ್ತದೆ. ಈಗ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧದ ಅಪರಾಧಗಳು ಎಂದು ಏನು ಇದೆ, ಇದನ್ನು ಸದ್ಯಕ್ಕೆ ಹಾಕಬಾರದಾಗಿತ್ತು. ಆದರೆ, ಮುಂದೆ ಅವಕಾಶಗಳು ಇದ್ದರೆ ಹಾಕಲಿ. ಮಾನ್ಯ ಸಚಿವರು ಇದರ ಬಗ್ಗೆ ಯೋಚನೆ ಮಾಡಬೇಕು. ಈಗ ಇದರಲ್ಲಿ ಏನಾಗುತ್ತದೆಂದರೆ, 'ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಯಾವುದೇ ಕಾನೂನಾತ್ಮಕ ಆಧಾರವಿಲ್ಲದೇ ಯಾವುದೇ ಸಾರ್ವಜನಿಕ ಸ್ವತ್ತು, ಸರ್ಕಾರಿ ಭೂಮಿ ಅಥವಾ ಅರಣ್ಯ ಭೂಮಿಗೆ (ಮೀಸಲು ಅರಣ್ಯವನ್ನು ಹೊರತುಪಡಿಸಿ) ಪ್ರವೇಶಿಸುವುದನ್ನು ನಿರಾಕರಿಸಿದಲ್ಲಿ, ಅಂಥ ವ್ಯಕ್ತಿಯು ಒಂದು ವರ್ಷದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು' ಎಂದು ಇದೆ.

ಅದೇ ರೀತಿ ಯಾರೇ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯನ್ನು ಉದ್ದೇಶಪೂರ್ವಕವಾಗಿ ಅವಮಾನಿಸಿದಲ್ಲಿ ಅಥವಾ ಮೌಖಿಕವಾಗಿ ನಿಂದಿಸಿದಲ್ಲಿ ಅಂಥ ವ್ಯಕ್ತಿಯು ಆರು ತಿಂಗಳ ಅವಧಿಯ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. ಈಗ ನಮ್ಮಲ್ಲಿ *The Scheduled Castes and the Scheduled Tribes*

*(Prevention of Atrocities) Act*'ಗೆ ಸರಿಸಮಾನವಾದ ಅಪರಾಧಗಳನ್ನು ಹಾಕಿದ್ದಾರೆ. ಈಗ ನಾನು ಮತ್ತು ನಮ್ಮ ಸಮುದಾಯದವರು ಅಂದರೆ ಲಿಂಗಾಯತರು ಮತ್ತು ಎಲ್ಲಾ ಜಾತಿ ಸಮುದಾಯದವರು ಸಾಂಪ್ರದಾಯಿಕವಾಗಿ ಕುರಿಗಾಹಿಗಳಾಗಿದ್ದಾರೆ. ಅವರು ರಿಜಿಸ್ಟ್ರೇಷನ್ ಮಾಡಿಕೊಂಡ ನಂತರ ಅವರಿಗೆ ನಮ್ಮ ಬಗ್ಗೆ ದ್ವೇಷದ ಭಾವನೆ ಇದ್ದಾಗ ಅವರು ಪೂರ್ವಾಗ್ರಹಪೀಡಿತನಾಗಿದ್ದರೆ ನನಗೆ ಬೈದಿದ್ದಾರೆಂದು ದೂರು ನೀಡುತ್ತಾರೆ. ಇದಕ್ಕೆ ಐದು ವರ್ಷಗಳ ಕಾಲ ಶಿಕ್ಷೆ ನೀಡುವಂಥದ್ದು; ಇದು cognizance, ಇದಕ್ಕೆ ಈ ರೀತಿಯ ಶಿಕ್ಷೆ ಮಾಡುವಂಥದ್ದು; ಈಗ ಏನು ಶಿಕ್ಷೆಗಳ ಬಗ್ಗೆ ಹಾಕಿದ್ದಾರೆ, ದಯಮಾಡಿ ಇವುಗಳನ್ನು ಪುನರ್ ಪರಿಶೀಲನೆ ಮಾಡಬೇಕು. ಇದು ಒಳ್ಳೆಯದಲ್ಲ. ಇದನ್ನು ಸದ್ಯಕ್ಕೆ ತೆಗೆದು ಹಾಕಲಿ. ಅವರಿಗೆ ಅನುಕೂಲತೆ ಕಲ್ಪಿಸಿ ಇದನ್ನು ತೆಗೆದುಕೊಂಡು ಹೋಗಲಿ.

**ಶ್ರೀ ಅಡಗೂರು ಹೆಚ್. ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಯಾವುದೋ ಕಾಲದಲ್ಲಿ ಹೇ ಕುರುಬ, ಹೇ ಹೊಲೆಯ, ಹೇ ಮಾದಿಗ ಎಂದು ಇತ್ತು. ಆದರೆ, ಈಗ ಅದೆಲ್ಲಾ ಇಲ್ಲ. ಆದರೆ, ಸರ್ಕಾರ ಮತ್ತೆ introduce ಮಾಡುತ್ತಿದೆ. ಮತ್ತೆ ಜನರಿಗೆ ಹೇ ಕುರುಬ ಅನ್ನು ಎಂದು. ಈಗ ‘ಕುರುಬ’ ಎಂದರೆ ಒಂದು ವರ್ಷದಿಂದ ಐದು ವರ್ಷದವರೆಗೆ ಶಿಕ್ಷೆ ಎಂದರೆ, what is this? ಆದುದರಿಂದ, ಮಾನ್ಯ ಮಂತ್ರಿಗಳೆ ಇದನ್ನು ತೆಗೆದುಹಾಕಬೇಕು.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಈ ಶಿಕ್ಷಾರ್ಹ ಅಪರಾಧಗಳನ್ನು ಪೂರ್ಣ ತೆಗೆದು ಹಾಕಲಿ.

**ಶ್ರೀ ಅಡಗೂರು ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಈಗ ಶಿಕ್ಷಾರ್ಹ ಅಪರಾಧಗಳು ಎಂದರೆ, ಅವರು ಹೋಗುತ್ತಿರುವಾಗ ಅವರ ಜೊತೆಯಲ್ಲಿ ಹೆಂಡತಿ ಇರುತ್ತಾಳೆ. ಆಗ rape ಎನ್ನುವುದರ ಬಗ್ಗೆ ಶಿಕ್ಷೆ ಇರಲಿ. ಈಗ ಜಾತಿ ಹಿಡಿದು ಮಾತನಾಡುವುದು ಹೋಗಿದೆ. ಆದುದರಿಂದ, ದಯವಿಟ್ಟು ಅದನ್ನು ತೆಗೆಯಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025 ಅನ್ನು ಮಾನ್ಯ ಸಚಿವರು ಮಂಡಿಸಿದ್ದಾರೆ. ಇವತ್ತಿನ ದಿವಸ ಸಾಂಪ್ರದಾಯಿಕವಾಗಿ ಕುರಿ ಮೇಯಿಸುವಂತಹವರು ಎಲ್ಲಾ ಜಾತಿಗಳಲ್ಲೂ ಇದ್ದಾರೆ ಎನ್ನುವಂಥದ್ದು ಎಲ್ಲರ ಅಭಿಪ್ರಾಯವಾಗಿದೆ. ಅದಕ್ಕೆ ಏನು ಜಾತಿ ಇಲ್ಲ. ಈ ರೀತಿ ಆಗುವಾಗ ಅವರಿಗೆ ರಕ್ಷಣೆ ಬೇಕು. ಸವಲತ್ತುಗಳು ಬೇಕು. ಆದರೆ, ಕೇವಲ ಕುರಿಗಾಹಿಗಳಿಗೆ ಮಾತ್ರವಲ್ಲ, ಮೇಕೆಗಳನ್ನು ಮೇಯಿಸುವಂತಹವರು ಇದ್ದಾರೆ, ದನಗಳನ್ನು ಮೇಯಿಸುವಂತಹವರು ಇದ್ದಾರೆ, ಕತ್ತೆಗಳನ್ನು ಮೇಯಿಸುವಂತಹವರು ಇದ್ದಾರೆ. ಈಗ ಎಲ್ಲರಿಗೂ ರಕ್ಷಣೆ ಮತ್ತು ಸವಲತ್ತುಗಳು ಬೇಕು. ಇವತ್ತಿನ ದಿವಸ ಜೀವ ವಿಮೆ, ಆರೋಗ್ಯ ವಿಮೆ, ಪಶು ವಿಮೆ, ವಿಕಲತೆ, ಆರೋಗ್ಯ ಸೌಲಭ್ಯಗಳು, ಶೈಕ್ಷಣಿಕ ಸೌಲಭ್ಯಗಳು, ಕೌಶಲ್ಯತೆ, ಆಹಾರ ಬದ್ಧತೆ ಈ ರೀತಿ ಪ್ರತಿಯೊಬ್ಬರಿಗೂ ಸಹ ಬೇಕಾಗಿದೆ. ಈಗ ನಿಂದಿಸುವಾಗ ‘ಹೇ ಕುರಿ ಕಾಯುವವನೆ’ ಎಂದು ಹೇಳಬಹುದು. ಆದರೆ, ಈಗ ‘ದನ ಕಾಯುವವನೆ’ ಎಂದು ಹೇಳುವವರು ಇದ್ದಾರೆ. ಹೆಚ್ಚು

ಜನರು ಮಾತನಾಡುವಂತಹ ಸಂದರ್ಭದಲ್ಲಿ ಬೈಯುವಾಗ, 'ಹೇ ಕತ್ತೆ ಕಾಯಿ ಹೋಗು' ಎನ್ನತಕ್ಕಂತಹವರನ್ನು ಸಹ ನೋಡಿದ್ದೇವೆ. ಆದರೆ, ಇವುಗಳಿಗೂ ಸಹ ರಕ್ಷಣೆ ಬೇಕಲ್ಲವೇ? ಅವರಿಗೂ ರಕ್ಷಣೆ ಕೊಡಬೇಕು. ಈಗ ನನಗೆ ಅನಿಸುವಂಥದ್ದು, ಇದು ಕೇವಲ ಕುರಿಗಾಹಿ ಎನ್ನುವುದಕ್ಕಿಂತ ದನಗಾಹಿಗಳು ಎಂದು ಇದ್ದರೆ, ಆಗ ಸರ್ವವೂ ಸೇರುತ್ತಿದ್ದವೇನೋ? ಆ ಕಾರಣದಿಂದ ಎಲ್ಲರಿಗೂ ರಕ್ಷಣೆ ಬೇಕಲ್ಲವೇ? ಎರಡನೆಯ ವಿಷಯವೇನೆಂದರೆ, ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್ ಮತ್ತು ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಐವತ್ತು ಸಾವಿರ ಜುಲ್ಮಾನೆ ಮತ್ತೆ ಒಂದು ವರ್ಷದ ಅವಧಿಗೆ ಕಾರಾವಾಸ. ಅದೇ ರೀತಿ ನಿಂದಿಸಿದವರಿಗೆ ಐದು ವರ್ಷಗಳವರೆಗೆ ಎಂದು ಇದೆ. ಇದು ಬಹಳ ಅತಿರೇಖಕ್ಕೆ ಹೋದಂತೆ ಆಗುತ್ತದೆ. ನನಗೆ ಅನಿಸುವಂಥದ್ದು ಏನೆಂದರೆ, ಈಗ ಯಾರು ಅವರಿಗೆ ನಿಂದಿಸುತ್ತಾರೆ ಮತ್ತು ತೊಂದರೆ ಕೊಡುತ್ತಾರೆ ಅವರಿಗೆ ಭಯ ಬರಬೇಕು ಎನ್ನುವಂಥದ್ದು ಇರಬೇಕು. ಅವರಿಗೆ ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆ ಹಾಕಲಿ. ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. ಆದರೆ, ನಾವು ಯಾವಾಗಲೂ ಕೂಡ ದಂಡನೆಗಳನ್ನು ಮಾಡುವಂಥದ್ದರಲ್ಲಿ ಮಾನ್ಯ ಅಡಗೂರ್ ಹೆಚ್. ವಿಶ್ವನಾಥ್‌ರವರು ಹೇಳಿದಂತೆ, ಜಾತಿ ನಿಂದನೆಯ ಪದಗಳನ್ನು ಬಳಸಿದಾಗ, ಹೆಚ್ಚು ಕಡಿಮೆ ಅದನ್ನು ಸದುಪಯೋಗಪಡಿಸುವುದರ ಬದಲಾಗಿ, ದುರುಪಯೋಗಪಡಿಸಿಕೊಂಡಿರುವುದನ್ನೇ ಹೆಚ್ಚಿನದಾಗಿ ಕಂಡಿದ್ದೇವೆ. ಈಗ ನಮಗೆ ಯಾರ ಮೇಲೋ ಬೇಸರವಿದ್ದರೆ, ಅವರ ಮೇಲೆ ನಿಂದನೆಗಳನ್ನು ಮಾಡತಕ್ಕಂತಹ ಪ್ರಕ್ರಿಯೆ ಸಹಜವಾಗಿ ನಡೆಯುತ್ತದೆ. ಇದರ ದುರುಪಯೋಗ ಕೂಡ ಆಗಬಾರದು. ಆ ಕಾರಣದಿಂದ ದಯವಿಟ್ಟು ಕಾರಾಗೃಹ ವಾಸಗಳನ್ನು 5, 3 ಮತ್ತು 2 ವರ್ಷಗಳು ಬೇಡ. ಅದಕ್ಕೆ 6 ತಿಂಗಳು ಎಂದು ಮಾಡಲಿ. ಅದಕ್ಕೆ ದಂಡ ಹಾಕಲಿ. ಆದರೆ, ಈ ರೀತಿ ಇದು ಹೆಚ್ಚು ದುರುಪಯೋಗವಾಗತಕ್ಕಂಥದ್ದು. ಆದುದರಿಂದ, ಇದರ ಬಗ್ಗೆ ಮಾನ್ಯ ಸಚಿವರು rethink ಮಾಡಬೇಕು. ಇದರ ಜೊತೆಗೆ ಕುರಿಗಾಹಿಗಳಿಗೆ ಮಾತ್ರವಲ್ಲ, ಪ್ರತಿಯೊಂದು ಸಹ ಅದು ಎಮ್ಮೆ ಕಾಯುವವರು ಇರಬಹುದು. ಒಟ್ಟಿನಲ್ಲಿ animals. ಮಾನ್ಯ ಸಚಿವರು ಪಶು ಸಂಗೋಪನಾ ಸಚಿವರಾಗಿದ್ದಾರೆ, ಅವರು ಪೂರ್ತಿ ಪಶುಗಳ ಬಗ್ಗೆ ಯೋಚನೆ ಮಾಡಬೇಕು. ಕೇವಲ ಕುರಿಗಳ ಬಗ್ಗೆ ಯೋಚನೆ ಮಾಡುವುದು ಅಲ್ಲ. ಈ ವಿಧೇಯಕವನ್ನು ಈ ರೀತಿಯಾಗಿ ಪರಿವರ್ತನೆ ಮಾಡಿದರೆ, ಎಲ್ಲರಿಗೂ ಅನುಕೂಲವಾಗುತ್ತದೆ. ಯಾರೋ ಒಬ್ಬರಿಗೆ ಅನುಕೂಲವಾಗುವುದು ಅಲ್ಲ. ಇಲ್ಲಿ ಪ್ರತಿಯೊಬ್ಬರೂ ಒಂದೇ. ಈಗ ಪಶುಗಳನ್ನು ಕಾಯುವಂತಹವರು ಯಾರು ಯಾವ ಜಾತಿಗೆ ಸೀಮಿತವಲ್ಲ. ಆದುದರಿಂದ, ಪ್ರತಿಯೊಬ್ಬರಿಗೂ ಸಹ ಇದರ ಅವಕಾಶಗಳನ್ನು, ವಿಮೆಗಳನ್ನು ಈ ಎಲ್ಲವನ್ನೂ ಕೂಡ ಅವರಿಗೂ ಕೂಡ extend ಮಾಡುವುದಕ್ಕೆ ಮಾನ್ಯ ಸಚಿವರು ದೊಡ್ಡ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಒಬ್ಬ ಸದಸ್ಯರಿಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ.

**ವೈಸ್ ಛೇರ್ಮನ್‌ರವರು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡಿದ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನಾನು ಏನೂ ಜಾಸ್ತಿ ಕೇಳುವುದಿಲ್ಲ. ನನ್ನದು ಎರಡು ಪ್ರಶ್ನೆ ಇದೆ.

(ಮುಂದು)

(939) 22.08.2025 11.30 LL-KS (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಗೋವಿಂದರಾಜು(ಮುಂದು):-**

ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ಯಾವ ಹಣದಿಂದ ನಿಧಿಯನ್ನು ಸ್ಥಾಪನೆ ಮಾಡುತ್ತೀರಿ? ಅಥವಾ ಆ ನಿಧಿಗೆ ಸರ್ಕಾರದಿಂದ ಏನಾದರೂ ವಾರ್ಷಿಕವಾಗಿ ನಿಧಿ ಕೊಡುತ್ತಾರೆಯೇ? ಮಾರುಕಟ್ಟೆ ಶುಲ್ಕಗಳ ವಿಧಿಸುವಿಕೆ ಎಂದು ಹೇಳಿರುತ್ತೀರಿ. ಮಾರುಕಟ್ಟೆ ಶುಲ್ಕ ಎಂದರೆ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಏನು ಕುರಿ ಅಥವಾ ಮೇಕೆಗಳನ್ನು ಮಾರುತ್ತಾರೆ, ಅದಕ್ಕೆ ಶುಲ್ಕವನ್ನು ವಿಧಿಸುತ್ತಾರೆ. ಈ ಕುರಿ ಮೇಯಿಸುವಂತಹವರು ಅಲೆಮಾರಿ ಕುರಿಗಾಹಿಗಳು. ಅಂದರೆ, ವರ್ಷ ಪೂರ್ತಿ ಊರಿಂದ ಊರಿಗೆ ಕುರಿಗಳನ್ನು ಮೇಯಿಸಿಕೊಂಡು ಹೋಗುತ್ತಿರುತ್ತಾರೆ. ಈ ಮೊದಲು ನಮ್ಮ ಭಾಗಕ್ಕೂ ಸಹ ಅಲೆಮಾರಿ ಕುರಿಗಾಹಿಗಳು ಬರುತ್ತಿದ್ದು, ನಮ್ಮ ತೋಟಗಳಿಗೂ ಬಂದು ಕುರಿಗಳನ್ನು ನಿಲ್ಲಿಸುತ್ತಿದ್ದರು. ಆದರೆ, ನನ್ನ ಪ್ರಕಾರ ಇತ್ತೀಚೆಗೆ ಈ ಅಲೆಮಾರಿ ಕುರಿಗಾಹಿಗಳು ಬಹಳ ಕಡಿಮೆಯಾಗಿರುತ್ತಾರೆ. ನಮ್ಮಲ್ಲಿ ಅಲ್ಲಲ್ಲಿ ಈಗಲೂ ಕುರಿಗಳನ್ನು ಮೇಯಿಸುವವರು ಇದ್ದಾರೆ. ಆದರೆ, ಈ ಅಲೆಮಾರಿ ಕುರಿಗಾಹಿಗಳು ಇತ್ತೀಚೆಗೆ ಬಹಳ ಕಡಿಮೆಯಾಗಿರುತ್ತಾರೆ. ಹಾಗಾಗಿ, ರಾಜ್ಯದ 31 ಜಿಲ್ಲೆಗಳಲ್ಲಿ ಅಲೆಮಾರಿ ಕುರಿಗಾಹಿಗಳು ಇರುವುದಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಂತೂ ಇಲ್ಲವೇ ಇಲ್ಲ. ಅಂದರೆ, ಹೆಚ್ಚಿಗೆ ಅಲೆಮಾರಿ ಕುರಿಗಾಹಿಗಳು ಇರುವುದು ಚಿತ್ರದುರ್ಗ ಭಾಗದಲ್ಲಿ ಇದ್ದಾರೆ ಎನ್ನುವುದು ನನಗಿರುವ ಮಾಹಿತಿಯಾಗಿದೆ. ಹಾಗಾಗಿ, ಈ ಅಲೆಮಾರಿ ಕುರಿಗಾಹಿಗಳಿಗೆ ಯಾವ ರೀತಿ ಹಣಕಾಸನ್ನು ಒದಗಿಸುತ್ತಾರೆ? ಎಪಿಎಂಸಿ ಶುಲ್ಕದಲ್ಲಿ ಅವರಿಗೆ ಹಣಕಾಸನ್ನು ಒದಗಿಸುವುದಾದರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಬಹಳಷ್ಟು ಎಪಿಎಂಸಿಗಳಲ್ಲಿ ವ್ಯವಹಾರಗಳೇ ನಡೆಯುತ್ತಿರುವುದಿಲ್ಲ. ಆದರೆ, ಬೆರಳೆಣಿಕೆಯಷ್ಟು ಎಪಿಎಂಸಿ ಗಳಲ್ಲಿ ಮಾತ್ರ ವ್ಯವಹಾರ ಆಗುತ್ತಿದ್ದು, ಆ ಎಪಿಎಂಸಿ ಗಳಲ್ಲಿಯೇ ಸ್ವಲ್ಪ ಮಟ್ಟಿಗೆ ಮಾರುಕಟ್ಟೆ ಶುಲ್ಕ ಸಂಗ್ರಹವಾಗುತ್ತಿರುತ್ತದೆ. ಹಾಗಾಗಿ, ಈ ಎಪಿಎಂಸಿ ಶುಲ್ಕದಲ್ಲಿ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸುವುದಾದರೆ, ಇವೊತ್ತಿನ ದಿವಸ ಈ ಅಲೆಮಾರಿ ಕುರಿಗಾಹಿಗಳಿಗೆ 13 ಸೌಲಭ್ಯಗಳನ್ನು ಕೊಡುತ್ತೇವೆಂದು ಏನು ಹೇಳಿದ್ದಾರೆ. ಅದನ್ನು ಕೊಡುವುದಕ್ಕೆ ಆಗುವುದಿಲ್ಲ. ಜೊತೆಗೆ, ಇದಕ್ಕೆ ಸಿಬ್ಬಂದಿಗಳನ್ನು ಕೊಡಬೇಕಾಗಿರುತ್ತದೆ. ಈಗಾಗಲೇ, ಈ ಕುರಿ ಅಭಿವೃದ್ಧಿ ನಿಗಮ ಹಾಗೂ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಎಂದು ಎರಡೆರಡು ಅಭಿವೃದ್ಧಿ ನಿಗಮಗಳು ಈಗಾಗಲೇ ಇದ್ದು, ಅವುಗಳು ನಿಷ್ಪ್ರಯೋಜಕವಾಗಿರುತ್ತದೆ. ಏಕೆಂದರೆ, ಆ ನಿಗಮಗಳಿಗೆ

ಸರ್ಕಾರದಿಂದ ಹಣವನ್ನೇ ಕೊಡುತ್ತಿಲ್ಲ. ಆದಾಗ್ಯೂ, ತಾವು ಈಗ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಮಂಡಳಿ ಸ್ಥಾಪಿಸಿದರೆ, ಈ ಕುರಿ ಮೇಯಿಸುವಂತಹವರಿಗಾಗಲಿ ಅಥವಾ ಪಶುಗಳನ್ನು ಮೇಯಿಸುವವರಿಗಾಗಲಿ ಈ ನಿಧಿಗೆ ಸರಿಯಾದ ಹಣವನ್ನು ಸರ್ಕಾರ ಸರಿಯಾಗಿ ಒದಗಿಸದೇ ಹೋದರೆ, ಸರ್ಕಾರ ಮಾಡಿದಂತಹ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತವೆ. ಆದುದರಿಂದ, ಈ ನಿಧಿಯನ್ನು ಯಾವ ರೀತಿ ಸ್ಥಾಪನೆ ಮಾಡುತ್ತಾರೆ ಎಂಬುದನ್ನು ವಿವರಿಸಬೇಕೆಂದು ಕೋರುತ್ತೇನೆ.

**ಶ್ರೀ ಕೆ. ವೆಂಕಟೇಶ್(ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಈ ವಿಧೇಯಕದ ಮೇಲೆ ಒಳ್ಳೊಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಆದರೆ, ನಾವು ಈ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025 ಅನ್ನು ತರಬೇಕಾದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಲೆಮಾರಿ ಕುರಿಗಾಹಿಗಳನ್ನು ಕರೆಯಿಸಿ, ಅವರ ಜೊತೆ ಈಗಾಗಲೇ ಒಂದು ಸಭೆ ಮಾಡಿರುತ್ತೇವೆ. ಆ ಸಭೆಯಲ್ಲಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದು, ಈಗ ಕಾಯಿದೆಯನ್ನು ಜಾರಿ ಮಾಡುತ್ತಿದ್ದೇವೆ. ಕಳೆದ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಕಾಯಿದೆ ಜಾರಿ ಮಾಡುತ್ತೇವೆಂದು ಹೇಳಿ ಘೋಷಣೆ ಮಾಡಿದ್ದರು. ಅದರಂತೆ, ಈಗ ನಾವು ಈ ಕಾಯಿದೆಯನ್ನು ಜಾರಿ ಮಾಡತಕ್ಕಂತಹ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರಿಗೆ ಬಹಳ ಚೆನ್ನಾಗಿ ಅನುಭವ ಇದ್ದು, ಇದು ಅವರಿಗೆ ಗೊತ್ತಿದೆ ಎಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದ ಎಲ್ಲಾ ಭಾಗಗಳಲ್ಲಿ ಅಲೆಮಾರಿ ಕುರಿಗಾಹಿಗಳು ಇರುವುದಿಲ್ಲ. ಬದಲಾಗಿ, 6-7 ಜಿಲ್ಲೆಗಳಲ್ಲಿ ಮಾತ್ರ ಈ ಅಲೆಮಾರಿ ಕುರಿಗಾಹಿಗಳು ಇದ್ದಾರೆ. ಅವುಗಳೆಂದರೆ, ಬೆಳಗಾವಿ, ತುಮಕೂರು ಜಿಲ್ಲೆಯ ಶಿರಾ ಭಾಗದಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆ ಈ ರೀತಿ 6-7 ಜಿಲ್ಲೆಗಳಲ್ಲಿ ಮಾತ್ರ ಅಲೆಮಾರಿ ಕುರಿಗಾಹಿಗಳು ಇದ್ದಾರೆ. ಈ ಅಲೆಮಾರಿ ಕುರಿಗಾಹಿಗಳು ಎಂದರೆ, ಇದರಲ್ಲಿ ಈಗ ಎರಡು ವಿಧಗಳಾಗಿವೆ. ಈ ಅಲೆಮಾರಿ ಕುರಿಗಾಹಿಗಳು ಎಂದರೆ, ಕುರಿ ಸಾಕಾಣಿಕೆ ವೃತ್ತಿಯನ್ನು ಸಾಂಪ್ರದಾಯಿಕವಾಗಿ ತಲೆ-ತಲಾಂತರಗಳಿಂದ ಮಾಡಿಕೊಂಡು ಬಂದಿರುತ್ತಾರೆ. ಆದರೆ, ಇನ್ನು ಕೆಲವರು ಲಾಭದಾಯಕ ದೃಷ್ಟಿಯಿಂದ ಈಗ ಕುರಿಗಳನ್ನು ಸಾಕುವ ಮೂಲಕ ಕುರಿಗಾಹಿಗಳು ಆಗಿರುತ್ತಾರೆ. ಅಂದರೆ, ಇವರು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ರೀತಿ ಹಳ್ಳಿ-ಹಳ್ಳಿಗೆ ಹೋಗಿ, ಜಿಲ್ಲೆ-ಜಿಲ್ಲೆಗಳಲ್ಲಿ ವರ್ಷ ಪೂರ್ತಿ ಸುತ್ತಾಡಿ ಕುರಿಗಳನ್ನು ಮೇಯಿಸುವುದಿಲ್ಲ. ಬದಲಾಗಿ, ಎಲ್ಲಿ ತಮಗೆ ಜಾಗ ಲಭ್ಯವಿದೆ, ಅಲ್ಲಿ ಶೆಡ್ ನಿರ್ಮಾಣ ಮಾಡಿ, ಕುರಿ ಸಾಕಾಣಿಕೆ ಮಾಡಿ, ಲಾಭಕ್ಕೋಸ್ಕರ ಅವುಗಳನ್ನು ಮಾರಾಟ ಮಾಡುತ್ತಾರೆ. ಆದರೆ, ಈಗ ನಮ್ಮ ರಾಜ್ಯದಲ್ಲಿ 15,000 ಅಲೆಮಾರಿ ಕುರಿಗಾಹಿ ಕುಟುಂಬಗಳು ಇವೆ ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿ ಈಗಾಗಲೇ ಸುಮಾರು 4,000 ಅಲೆಮಾರಿ ಕುರಿಗಾಹಿ ಕುಟುಂಬಗಳು ನೋಂದಾಯಿಸಿಕೊಂಡಿದ್ದು, ಇನ್ನು 1,000 ಅಲೆಮಾರಿ ಕುರಿಗಾಹಿಗಳು ನೋಂದಣಿಗೆ ಅರ್ಜಿ ಹಾಕಿರುತ್ತಾರೆ. ಮಾನ್ಯ ಸದಸ್ಯರೊಬ್ಬರು ಆಗಲೇ ಮಾತನಾಡುತ್ತಾ, ಈ ಅಲೆಮಾರಿ

ಕುರಿಗಾಹಿಗಳಿಗೆ ನೋಂದಣಿ ಮಾಡಿಸಿಕೊಳ್ಳುವುದು ಕಷ್ಟವಾಗುತ್ತದೆ ಎಂದು ಹೇಳಿರುತ್ತಾರೆ. ಅದಕ್ಕೆ ನಾವು ಏನು ಮಾಡುತ್ತಿದ್ದೇವೆಂದರೆ, ಆಯಾ ಜಿಲ್ಲೆಗಳಲ್ಲಿ ನಮ್ಮ ಇಲಾಖೆಯ ಡಿ.ಡಿ. (ಉಪ ನಿರ್ದೇಶಕರು) ಇರುತ್ತಾರೆ ಮತ್ತು ತಾಲ್ಲೂಕುಗಳಲ್ಲಿ ಎ.ಡಿ. (ಸಹಾಯಕ ನಿರ್ದೇಶಕರು) ಗಳು ಇರುತ್ತಾರೆ. ಅವರಿಗೆಲ್ಲಾ ನಾವು ಸೂಚನೆ ಕೊಟ್ಟು, ಈ ಅಲೆಮಾರಿ ಕುರಿಗಾಹಿಗಳು ಎಲ್ಲೆಲ್ಲಿ ಇದ್ದಾರೆ,.. ಅಂದರೆ, ಅವರಿಗೆ ಈ ಅಲೆಮಾರಿ ಕುರಿಗಾಹಿಗಳು ಎಲ್ಲೆಲ್ಲಿ ಇದ್ದಾರೆಂಬುದು ಗೊತ್ತಿರುತ್ತದೆ. ಅದರಂತೆ, ನಮ್ಮ ಇಲಾಖೆಯ ಅಧಿಕಾರಿಗಳು ಅಲ್ಲಿಗೆ ಹೋಗಿ, ಅವರನ್ನೆಲ್ಲಾ ಕಂಡು, ಅವರ ಪರಿಚಯ ಮಾಡಿಕೊಂಡು ಅವರು ನೋಂದಾಯಿಸಿಕೊಳ್ಳಲು ಅನುವಾಗುವಂತೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ಸೂಚನೆ ಕೊಡುವಂತಹ ಕೆಲಸ ಮಾಡುತ್ತೇವೆ. ಹಾಗಾಗಿ, ಈ ಅಲೆಮಾರಿ ಕುರಿಗಾಹಿಗಳು ನೋಂದಣಿ ಮಾಡಿಕೊಳ್ಳಲು ಕಷ್ಟವಾಗುವುದಿಲ್ಲ.

ಇನ್ನು ಅನೇಕ ಮಾನ್ಯ ಸದಸ್ಯರು, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧದ ಅಪರಾಧ ಕಾಯಿದೆಗಳ ಬಗ್ಗೆ ಮಾತನಾಡಿರುತ್ತಾರೆ. ಅದರಂತೆ, ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಾವು ಪೊಲೀಸ್ ಇಲಾಖೆಯಿಂದ ಈ ಅಲೆಮಾರಿ ಕುರಿಗಾಹಿಗಳಿಗೆ ಸಂಬಂಧಿಸಿದ ಪ್ರಕರಣಗಳ ಮಾಹಿತಿಯನ್ನು ತರಿಸಿಕೊಂಡಿರುತ್ತೇವೆ. ಅದರಂತೆ, ಕಳೆದ ಮೂರು ವರ್ಷಗಳಲ್ಲಿ ಈ ಅಲೆಮಾರಿ ಕುರಿಗಾಹಿಗಳು ಮೇಲಿನ ದೌರ್ಜನ್ಯ, ಅತ್ಯಾಚಾರ, ಹೊಡೆದಾಟ, ಬಡಿದಾಟ, ಕುರಿಗಳನ್ನು ಹೊತ್ತುಕೊಂಡು ಹೋಗುವುದು ಹಾಗೂ ಅವರ ಜಮೀನುಗಳ ಮೇಲೆ ದೌರ್ಜನ್ಯ ಮಾಡುವಂತಹ ಒಟ್ಟು 242 ಪ್ರಕರಣಗಳು ದಾಖಲಾಗಿರುತ್ತವೆ. ಕೇವಲ ಮೂರು ವರ್ಷಗಳಲ್ಲಿ 242 ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ, ಶಿಕ್ಷೆಯ ಪ್ರಮಾಣ ಯಾವರೀತಿ ಮಾಡಬೇಕೆಂದು ನಾವು ಬಹಳ ಯೋಚನೆ ಮಾಡಿ, ಸ್ವಲ್ಪ ಭಯ ಬರುವ ರೀತಿಯಲ್ಲಿ ಕಾಯಿದೆ ಮಾಡಬೇಕೆಂದು ನಾವು ಈ ಶಿಕ್ಷೆಯ ಪ್ರಮಾಣಗಳನ್ನು ವಿಧಿಸಿರುತ್ತೇವೆ. ಇದರಲ್ಲಿ ನಾವು ಅವರಿಗೆ ಶಿಕ್ಷೆ ಕೊಡಬೇಕು ಎನ್ನುವ ಉದ್ದೇಶಕ್ಕಿಂತಲೂ ಹೆಚ್ಚಾಗಿ...

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಈ ಅಲೆಮಾರಿ ಕುರಿಗಾಹಿಗಳು ನಮ್ಮ ಭಾಗಕ್ಕೆ ಬಂದು, ನಮ್ಮ ಜಮೀನುಗಳಲ್ಲಿ ಕುರಿಗಳನ್ನು ನಿಲ್ಲಿಸುವುದು ಅಥವಾ ಮೇಯಿಸುವುದು ಮಾಡುತ್ತಾರೆ. ಆ ಸಂದರ್ಭದಲ್ಲಿ ಅಲೆಮಾರಿ ಕುರಿಗಾಹಿಗಳು ಪಕ್ಕದ ಜಮೀನಿನ ಬದುವಿನಲ್ಲಿ ತಮ್ಮ ಕುರಿಗಳನ್ನು ಮೇಯಿಸುತ್ತಾರೆ. ಆ ಸಂದರ್ಭದಲ್ಲಿ ಪಕ್ಕದ ಜಮೀನಿನ ಮಾಲೀಕರಿಗೂ ಹಾಗೂ ಕುರಿಗಾಹಿಗಳು ಗಲಾಟೆಗಳು ಪ್ರಾರಂಭ ಆಗುತ್ತವೆ. ಇಂತಹ ಪ್ರಕರಣಗಳೇ ಹೆಚ್ಚಾಗಿ ಇರುತ್ತವೆ.

**ಶ್ರೀ ಕೆ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಗ್ರಾಮೀಣ ಭಾಗದಿಂದ ಬಂದಂತಹವನು. ಈ ಬಗ್ಗೆ ನನಗೂ ಸಹ ಬಹಳ ಚೆನ್ನಾಗಿ ಗೊತ್ತಿದೆ. ತುಮಕೂರು ಜಿಲ್ಲೆಯ ಅಲೆಮಾರಿ ಕುರಿಗಾಹಿಗಳು ನಮ್ಮ ಜಮೀನುಗಳ ಬಳಿ ಕುರಿ ಮೇಯಿಸುವುದಕ್ಕೆ ಹಾಗೂ ನಿಲ್ಲಿಸುವುದಕ್ಕೆ ಬರುತ್ತಾರೆ. ನಾವು ಕೂಡ ಅನೇಕ ಬಾರಿ ನಮ್ಮ ಜಮೀನುಗಳಲ್ಲಿ ಕುರಿಗಳನ್ನು ಮೇಯಿಸುವುದಕ್ಕೆ ಹಾಗೂ ನಿಲ್ಲಿಸುವುದಕ್ಕೆ ಬಿಟ್ಟಿರುತ್ತೇವೆ. ಸಾಮಾನ್ಯವಾಗಿ ಈ ಅಲೆಮಾರಿ ಕುರಿಗಾಹಿಗಳಿಗೆ ಯಾವ ರೈತರು ತಮ್ಮ ಜಮೀನುಗಳನ್ನು ಕೊಡುತ್ತಾರೆ, ಅವರಿಂದ ದೌರ್ಜನ್ಯ

ಆಗುವುದಿಲ್ಲ. ಆದರೆ, ದುರುದ್ದೇಶ ಇಟ್ಟುಕೊಂಡು ಬಂದು, ಕುರಿಗಳನ್ನು ಹೊತ್ತುಕೊಂಡು ಹೋಗುವಂಥ ದೌರ್ಜನ್ಯ ಪ್ರಕರಣಗಳೇ ಜಾಸ್ತಿ ಇರುತ್ತವೆ. ಆ ರೀತಿ ದುರುದ್ದೇಶದಿಂದ ಕುರಿಗಳನ್ನು ಹೊತ್ತುಕೊಂಡು ಹೋಗಲು ಬಂದು, ಅವರ ಮೇಲೆ ಗಲಾಟೆ ಮಾಡುವುದು; ಅವರಿಗೆ ಹೊಡೆಯುವುದು; ಬಡಿಯುವುದು; ಮಾರಣಾಂತಿಕ ಹಲ್ಲೆ ಮಾಡುವುದು; ಆ ಕುರಿಗಾಹಿ ಗುಂಪಿನಲ್ಲಿ ಮಹಿಳೆಯರು ಇದ್ದರೆ ಅವರ ಮೇಲೆ ದೌರ್ಜನ್ಯ ಮಾಡುವುದು ಮತ್ತು ಅವರ ಮೇಲೆ ಅತ್ಯಾಚಾರ ಮಾಡುವಂತಹ ಪ್ರಯತ್ನ ಮಾಡುವಂಥದ್ದು; ಇಂತಹ ಪ್ರಕರಣಗಳೇ ಬಹಳ ಜಾಸ್ತಿ ಇರುತ್ತವೆ. ನಾನು ಆಗಲೇ ಹೇಳಿದಂತೆ, ಕಳೆದ ಮೂರು ವರ್ಷಗಳಲ್ಲಿ 242 ಪ್ರಕರಣಗಳು ದಾಖಲಾಗಿರುವುದರಿಂದ, ಕಠಿಣವಾದ ಶಿಕ್ಷೆಯನ್ನೇ ವಿಧಿಸಬೇಕೆಂದು ಕಾಯಿದೆ ಮಾಡಿರುತ್ತೇವೆ. ಇದು ಬಹಳ ಕಠಿಣವಾಗಿದೆ ಎಂದು ನಮಗೂ ಸಹ ಗೊತ್ತಿದೆ. ಆದರೆ, ಇಂತಹ ಅಪರಾಧಗಳಿಗೆ ಕಠಿಣವಾದ ಶಿಕ್ಷೆಯೇ ಇರಬೇಕೆಂದು ನಾವು ಈ ಕಾಯಿದೆ ಮಾಡಿದ್ದೇವೆ.

**ಶ್ರೀ ಡಿ.ಟಿ. ಶ್ರೀನಿವಾಸ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಪೂರಕವಾಗಿ ಹೇಳುವುದಾದರೆ, ಕಡೂರು ತಾಲ್ಲೂಕು ಗೊಲ್ಲರಹಟ್ಟಿಯಲ್ಲಿ ಬೇರೆಯವರ ಜಮೀನಿಗೆ ಕುರಿ ಹೋದ ಕಾರಣಕ್ಕಾಗಿ, ಕುರಿ ಮೇಯಿಸುವವನ ಕಾಲು ಕತ್ತರಿಸಿ ಹಾಕಿರುತ್ತಾರೆ. ಇದರಿಂದಾಗಿ, ಆತನ ಸಾವು ಆಗಿರುತ್ತದೆ. ಈ ಪ್ರಕರಣ ನಡೆದು ಕೇವಲ ಮೂರು ದಿನಗಳಾಗಿರುತ್ತದೆ. ಈ ಬಗ್ಗೆ ಅನೇಕ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

**ಶ್ರೀ ಕೆ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಎರಡು-ಮೂರು ಸಾವುಗಳು ಸಹ ಆಗಿರುತ್ತವೆ. ಹಾಗಾಗಿ, ಇಂತಹ ಅಪರಾಧಗಳಲ್ಲಿ ಕಾನೂನು ಸ್ವಲ್ಪ ಕಠಿಣವಾಗಿರಬೇಕೆಂದು ನಾವು ಈ ಕಾಯಿದೆಯನ್ನು ಜಾರಿಗೆ ತಂದಿರುತ್ತೇವೆ. ಆದಾಗ್ಯೂ, ಅವರಿಗೆ ಕಠಿಣ ಶಿಕ್ಷೆ ಕೊಡಬೇಕೆಂದು ಅಲ್ಲ. ಬದಲಾಗಿ, ಅಂತಹ ಅಪರಾಧ ಮಾಡುವಂತಹ ಜನರಿಗೆ ಭಯ ಬರಲಿ ಎನ್ನುವ ಉದ್ದೇಶದಿಂದ ಈ ಕಠಿಣವಾದ ಕಾನೂನು ಅನ್ನು ಜಾರಿಗೆ ತಂದಿರುತ್ತೇವೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿಕ್ಷೆಯ ಅವಧಿ ಬಹಳ ದೊಡ್ಡದಾಗಿರುತ್ತದೆ.

**ಶ್ರೀ ಕೆ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈ ಅಲೆಮಾರಿ ಕುರಿಗಾಹಿಗಳಿಗಾಗಿ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಮಂಡಳಿಯನ್ನು ಸ್ಥಾಪನೆ ಮಾಡಿದ್ದು, ಅದಕ್ಕೆ ಹಣವನ್ನು ಎಲ್ಲಿಂದ ಕೊಡುತ್ತೀರಿ ಎಂದು ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜುರವರು ಕೇಳಿರುತ್ತಾರೆ. ಈ ಕಲ್ಯಾಣ ನಿಧಿಗೆ ನಾವು ಸರ್ಕಾರದಿಂದ ಬಜೆಟ್‌ನಲ್ಲಿ ಸುಮಾರು 15 ಕೋಟಿ ರೂಪಾಯಿಗಳ ಹಣವನ್ನು ನಿಗದಿ ಮಾಡಿರುತ್ತೇವೆ. ಬೇರೆ ಯಾವುದೇ ಹಣವನ್ನು ನಾವು ಉಪಯೋಗಿಸುತ್ತಿಲ್ಲ. ಅದರಂತೆ, ಈ ಅಲೆಮಾರಿ ಕುರಿಗಾಹಿಗಳಿಗೆ ಏನೇನು ಕಲ್ಯಾಣ ಕಾರ್ಯಕ್ರಮಗಳನ್ನು ಮಾಡಬೇಕೆಂದು ಹೇಳಿದ್ದೇವೆ, ಅದಕ್ಕೆ ಸರ್ಕಾರದ ಹಣದಿಂದಲೇ ಮಾಡುತ್ತೇವೆ. ಅಂದರೆ, ಆ ಅಲೆಮಾರಿ ಕುರಿಗಾಹಿ ಕುಟುಂಬಗಳಿಗೆ ವಿದ್ಯೆ ಇರಬಹುದು; ವಿಮೆ ಇರಬಹುದು; ಮನೆ ಕಟ್ಟಿಕೊಡುವುದು ಇರಬಹುದು ಹಾಗೂ ಈ ಕಾಯಿದೆಯಲ್ಲಿ ಏನೇನು ಸೌಲಭ್ಯಗಳನ್ನು

ಹೇಳಿದ್ದೇವೆ, ಅದೆಲ್ಲವನ್ನೂ ಸರ್ಕಾರದ ಹಣದಿಂದಲೇ ಮಾಡುವಂತಹ ಕೆಲಸ ಮಾಡುತ್ತೇವೆ. ಜೊತೆಗೆ, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ನೋಂದಣಿಗೆ ನಾವು ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ. ಎ..ಪಿ.ಎಂ.ಸಿ. ಮಾರುಕಟ್ಟೆಗೆ ಹೋದಾಗ, ನೋಂದಣಿ ಶುಲ್ಕವನ್ನು ತೆಗೆದುಕೊಳ್ಳದೇ, ನಮ್ಮ ಎ..ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ಅವರು ಉಚಿತವಾಗಿ ತಮ್ಮ ಕುರಿಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶ ಕಲ್ಪಿಸಿರುತ್ತೇವೆ. ಜೊತೆಗೆ, ಮಾನ್ಯ ಸದಸ್ಯರು ಹೇಳಿರುವಂತಹ ಇನ್ನು ಕೆಲವು ಅಂಶಗಳು ಏನಿವೆ, ಅವುಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ನಿಯಮಗಳನ್ನು ಮಾಡುವಂತಹ ಸಂದರ್ಭದಲ್ಲಿ ಅವುಗಳನ್ನು ಸೇರಿಸುವಂತಹ ಪ್ರಯತ್ನ ಮಾಡುತ್ತೇವೆ. ಇದು ಅಲೆಮಾರಿ ಕುರಿಗಾಹಿಗಳ ರಕ್ಷಣೆಗಾಗಿ ಮಾಡಿರುವಂತಹ ಕಾಯಿದೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಈ ವಿಧೇಯಕವನ್ನು ಕೇವಲ ಕುರಿಗಳಿಗೆ ಸೀಮಿತಗೊಳಿಸದೇ, ಹಸು ಮತ್ತು ಎಮ್ಮೆ ಹಾಗೂ ಎಲ್ಲಾ ಪ್ರಾಣಿಗಳಿಗೆ ಸೇರಿದಂತೆ ಮಾಡಿ ಎಂದು ಹೇಳಿರುತ್ತಾರೆ. ಮುಂದಿನ ದಿನಗಳಲ್ಲಿ ಅದಕ್ಕೋಸ್ಕರ ಬೇರೆ ರೀತಿಯಲ್ಲಿ ಪ್ರತ್ಯೇಕವಾದ ವಿಧೇಯಕ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ, ಇದು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಅವರ ರಕ್ಷಣೆಗಾಗಿ ಸರ್ಕಾರ ಹೋಗಬೇಕೆಂಬ ದೃಷ್ಟಿಯಿಂದ ಈ ವಿಧೇಯಕವನ್ನು ಜಾರಿಗೆ ತಂದಿರುತ್ತೇವೆ. ಹಾಗಾಗಿ, ಈ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಶಾಂತರಾಮ್ ಬುಡ್ನ ಸಿದ್ಧಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಅಲೆಮಾರಿ ಕುರಿಗಾಹಿಗಳ ಅಪಘಾತ ಪರಿಹಾರ ನಿಧಿ ಬಗ್ಗೆ ಹೇಳಿರುವುದಿಲ್ಲ.

**ಶ್ರೀ ಕೆ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅಪಘಾತ ಪರಿಹಾರದ ಬಗ್ಗೆ ಹೇಳುವುದಾದರೆ, ಅಪಘಾತದಲ್ಲಿ ಒಂದು ಹಸು ಸತ್ತರೆ ಎಷ್ಟು, ಒಂದು ಎಮ್ಮೆ ಸತ್ತರೆ ಎಷ್ಟು, ಒಂದು ಕುರಿ ಸತ್ತರೆ ಎಷ್ಟು ಪರಿಹಾರ ನೀಡಬೇಕೆಂದು ನಮ್ಮ ಸರ್ಕಾರದಲ್ಲಿ ಒಂದು ಘೋಷಣೆ ಮಾಡಿರುತ್ತೇವೆ. ಹಿಂದಿನ ಸರ್ಕಾರದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಒಂದು ಕುರಿ ಸತ್ತರೆ, ರೂ.5,000/- ಪರಿಹಾರ ನೀಡಬೇಕೆಂದು ಇತ್ತು ಮತ್ತು ಒಂದು ಹಸು ಸತ್ತರೆ ರೂ.10,000/- ಎಂದು ಇತ್ತು. ಈಗ ನಮ್ಮದೇ ಸರ್ಕಾರ ಪುನಃ ಅಧಿಕಾರಕ್ಕೆ ಬಂದ ನಂತರ, ಒಂದು ಹಸು ಸತ್ತರೆ ರೂ.10,000/- ಇದ್ದಂತಹ ಪರಿಹಾರವನ್ನು ರೂ.15,000/- ಮಾಡಿದ್ದೇವೆ. ಅದೇ ರೀತಿ, ಒಂದು ಕುರಿ ಸತ್ತರೆ ರೂ.5,000/- ಇದ್ದಂತಹ ಪರಿಹಾರ ಹಣವನ್ನು ರೂ.7,500/- ಮಾಡಿದ್ದೇವೆ ಮತ್ತು ಕುರಿ ಮರಿ ಸತ್ತರೆ ರೂ.3,500/- ಪರಿಹಾರ ಹಣ ಎಂದು ಘೋಷಣೆ ಮಾಡಿರುತ್ತೇವೆ. ಅದರಂತೆ, ನಷ್ಟ ಪರಿಹಾರವನ್ನು ಕೊಡಿಸುತ್ತೇವೆ.

**ಡಾ: ಉಮಾಶ್ರೀ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025 ರ ಸೆಕ್ಷನ್ 11 ರಲ್ಲಿ, "ಸರ್ಕಾರಿ ನೌಕರರಿಂದ ಎಸಗಲಾಗುವ ಅಪರಾಧಗಳು" ಎಂದು ಹೇಳಿರುತ್ತಾರೆ. ಈ ಕಾನೂನಿನ ಪ್ರಕಾರ, ಸಂಬಂಧಪಟ್ಟ ಸರ್ಕಾರಿ ನೌಕರರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದಿಲ್ಲವೆಂದರೆ ಅಥವಾ ನಿರ್ಲಕ್ಷ್ಯ ಮಾಡಿದರೆ

ಆತನಿಗೆ ಶಿಕ್ಷೆ ಇದೆ. ಅದು ಸರಿಯಾಗಿದೆ. ಆದರೆ, ಸೆಕ್ಷನ್ 16 ರಲ್ಲಿ, "ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ" ಎಂದು ಇದೆ. ಅದರಂತೆ, ಈ ಅಧಿನಿಯಮದಡಿ ಅಥವಾ ಅದರ ಅಡಿಯುಲ್ಲಿ ರಚಿಸಿದ ಯಾವುದೇ ನಿಯಮಗಳಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ರಾಜ್ಯ ಸರ್ಕಾರದ ಯಾವುದೇ ಅಧಿಕಾರಿ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ ಎಂದು ಇದೆ. ಇದು ಏತಕ್ಕೆ? ಏಕೆಂದರೆ, ಅವರು ಅವರ ಕರ್ತವ್ಯವನ್ನು ಮಾಡುತ್ತಿರುತ್ತಾರೆ. ಹಾಗಾಗಿ, ಇದು ಬೇಕೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸರ್ಕಾರಿ ಅಧಿಕಾರಿ/ನೌಕರರ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಏತಕ್ಕೆ ಮಾಡಬಾರದು?

(ಮುಂದು)

(940) 22.08.2025 11.40 ವೈಎಲ್-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಏತಕ್ಕೆ ಅದನ್ನು ವಿಧೇಯಕದಲ್ಲಿ ಸೇರಿಸಿದ್ದೇವೆ ಎಂದರೆ, ಬಹಳಷ್ಟು ಕಡೆ ಅಲೆಮಾರಿ ಕುರಿಗಾಹಿಗಳು ದೂರು ಕೊಟ್ಟಾಗ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ತಡೆಯುತ್ತಾರೆ. ಜೊತೆಗೆ, ಹೊರಗಿನವರು ಸಹ ಅದನ್ನು ತಡೆಯುತ್ತಾರೆ. ಅಧಿಕಾರಿಗಳು ಸಹ ಉದಾಸೀನ ಮಾಡುತ್ತಾರೆ. ಅಂತಹ ಕೇಸ್ ಬಂದಾಗ ಅವರ ಮೇಲೆ ಕ್ರಮಕೈಗೊಳ್ಳಬೇಕೆಂದು ಈ ಕಾಯ್ದೆ ತರಲಾಗಿದೆ.

**ಡಾ॥ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸೆಕ್ಷನ್ 16 ರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಅದು ಬೇಡವೆಂದು ನನಗನ್ನಿಸುತ್ತಿದೆ.

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆಯಿತು. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 16 ರವರೆಗೆ

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 16 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 16 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ವೈಸ್ ಛೇರ್ಮನ್:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಈ) ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆ) (ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ, ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆ) (ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಅಡಗೂರ್ ಹೆಚ್. ವಿಶ್ವನಾಥ್‌ರವರಿಗೂ ಬಹಳಷ್ಟು ವಿವರಗಳು ಗೊತ್ತಿದ್ದು, 2006 ರಿಂದ 2011-12ನೇ ಸಾಲಿನವರೆಗೂ ಕರ್ನಾಟಕವು ಬಹಳ ದೊಡ್ಡದಾಗಿ ನಡೆಯುತ್ತಿರುವಂಥ ಅಕ್ರಮ ವ್ಯವಹಾರಗಳನ್ನು ಗಮನಿಸಿದೆ. ಗಣಿಗಾರಿಕೆಯಲ್ಲಿ ಅದರಲ್ಲಿಯೂ ಕಬ್ಬಿಣದ ಅದಿರು ನಮ್ಮ ರಾಜ್ಯದಿಂದ ಊಹೆಗೂ ನಿಲುಕದಷ್ಟು ಪ್ರಮಾಣದಲ್ಲಿ ನಮ್ಮ ದೇಶದಿಂದ ಚೈನಾ, ಪಾಕಿಸ್ತಾನ, ಬೇರೆ ಬೇರೆ ಹಲವಾರು ದೇಶಗಳಿಗೆ ರಫ್ತಾಗಿರುವುದನ್ನು ನೋಡಿದ್ದೇವೆ. ಕೇವಲ ರಫ್ತಾಗಿ ಹೋಗಿದ್ದರೆ ಖುಷಿಪಡೋಣ. ಆದರೆ, ಅಕ್ರಮವಾಗಿ ನಮ್ಮ ದೇಶದ, ರಾಜ್ಯದ ಆಸ್ತಿಯಾದ ಕಬ್ಬಿಣ ಅದಿರನ್ನು ಲೂಟಿಯಂತೆ ಮಾಡಿ, ವಿದೇಶಗಳಿಗೆ ಹಾಗೂ ಬೇರೆ ಬೇರೆ ಕಡೆಗಳಿಗೆ ಕಳುಹಿಸಿರುವ ಕಾರಣದಿಂದಾಗಿ ನಮ್ಮ ರಾಜ್ಯಕ್ಕೆ ಬಹುದೊಡ್ಡ ಪ್ರಮಾಣದಲ್ಲಿ ಹಾನಿಯುಂಟಾಗಿದೆ. ಇದರ ಬಗ್ಗೆ ಸುಮಾರು ದಿವಸಗಳಿಂದ ಚರ್ಚೆ ನಡೆದಿದೆ. 2013 ರಿಂದ 2018ರ ಅವಧಿವರೆಗೂ ಸಚಿವ ಸಂಪುಟದ ಉಪ ಸಮಿತಿ ಅಸ್ತಿತ್ವದಲ್ಲಿತ್ತು. ಮತ್ತೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ನಮ್ಮ ರಾಜ್ಯದ ಆಸ್ತಿಯೂ ಲೂಟಿಯಾಗಿದ್ದು, ಅದನ್ನು ಏನಾದರೂ ಮಾಡಿ ವಾಪಸ್ಸು ಪಡೆಯಬೇಕೆಂಬ ದೃಷ್ಟಿಯಿಂದಾಗಿ ಮತ್ತೆ ಸಬ್ ಕಮಿಟಿಯನ್ನು ಮಾಡಿ, ಅದರ ವರದಿಯನ್ನು ಪಡೆದುಕೊಂಡಿದ್ದಾರೆ. ಆ ಸಬ್-ಕಮಿಟಿ ಕೊಟ್ಟಿರುವಂಥ ವರದಿಯೊಳಗೆ ರಿಕವರಿ ಕಮಿಷನರ್‌ರವರನ್ನು ನೇಮಕ ಮಾಡಲೇಬೇಕೆಂದು 'ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ' ವಿಧೇಯಕ ಜಾರಿಗೆ ತರಲಾಗಿದೆ. ಇದರ ಉದ್ದೇಶವೇನೆಂದರೆ, ನಮ್ಮ ರಾಜ್ಯದ ಆಸ್ತಿ ಅಕ್ರಮವಾಗಿ ಲೂಟಿಯಾಗಿದ್ದು, ಅದನ್ನು ರಾಜ್ಯ ಸರ್ಕಾರ ವಶಪಡಿಸಿಕೊಳ್ಳಬೇಕು. ಒಂದು ವೇಳೆ ಈಗಾಗಲೇ

ಇಷ್ಟು ವರ್ಷಗಳಾಗಿದ್ದು, ಅದು ಎಲ್ಲಿ ಹೋಗಿದೆಯೋ, ಏನೋ ಎನ್ನುವುದಾದರೆ, ಆ ಕಬ್ಬಿಣದ ಅದಿರು ಏನಿದೆ, ಅದನ್ನು ಯಾರಿಗಾದರೂ ಮಾರಾಟ ಮಾಡಿ, ಅದರಿಂದ ಹಣವನ್ನು ತೆಗೆದುಕೊಂಡಿರುತ್ತಾರೆ. ಆ ಹಣ, that is nothing but the state asset. ಅದು ನಮ್ಮ ರಾಜ್ಯದ ಪಾಲಾಗಬೇಕಾಗಿದೆ. ನಮ್ಮ ರಾಜ್ಯ ಸರ್ಕಾರಕ್ಕೆ ಬರಬೇಕು. ಇದರಲ್ಲಿ ಏನು ಅಕ್ರಮ ನಡೆದಿದೆ ಅಥವಾ ಆ crime ಏನು ನಡೆದಿದೆ, that crime proceeds. ಹಾಗಾಗಿ, ಆ ಗುನ್ಹೆ (ಅಪರಾಧ) ದಿಂದ ಯಾರೋ XYZ ರವರಿಗೆ ಲಾಭವಾಗಿರುತ್ತದೆ. ಆ ಗುನ್ಹೆ (ಅಪರಾಧ) ದಿಂದ ಬಂದಿರತಕ್ಕಂಥ ಆಸ್ತಿ, ಸ್ವತ್ತು ಅಥವಾ ಲಾಭ ಏನಿದೆ, ಅದನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಜಪ್ತಿ/ವಸೂಲು ಮಾಡಲು ಆಯುಕ್ತರ ನೇಮಕಾತಿ ಮಾಡಬೇಕು. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಇಂತಹದೇ ಒಂದು ದೊಡ್ಡ ಅಪರಾದ ನಮ್ಮ ರಾಷ್ಟ್ರದಲ್ಲಿ ನಡೆಯಿತ್ತು. ಮಾನ್ಯ ಪ್ರತಾಪ್‌ಸಿಂಹ ನಾಯಕ್.ಕೆ. ಮತ್ತು ಮಾನ್ಯ ಕೇಶವ ಪ್ರಸಾದ್.ಎಸ್. ರವರಿಗೆ ನೆನಪಿದೆಯೇ, ಇಲ್ಲವೇ ಗೊತ್ತಿಲ್ಲ. ಮಾನ್ಯ ಟಿ.ಎ.ಶರವಣನವರಿಗೆ ನೆನಪಿದ್ದರೆ ಸಾಕು. Sri Harshad S.Mehta was a Stockbroker in Bombay Stock Exchange. It was the biggest scam of that century. ಯಾರು ಏನು ಮಾಡಬೇಕೆಂಬುದು ಗೊತ್ತಾಗಲಿಲ್ಲ. ಕೇಂದ್ರ ಸರ್ಕಾರವು ಬಹಳಷ್ಟು ಸಮಯದ ನಂತರ Office of the Custodian ನೇಮಕ ಮಾಡಿದರು. In Harshad Mehta's case, the Office of the Custodian came into existence because of the Central Act.

(ಮುಂದು)

(941) 22.08.2025/11.50/ ಎಸ್‌ಕೆ-ಎಂ.ಡಿ. (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಹೆಚ್.ಕೆ. ಪಾಟೀಲ್ (ಮುಂದು):-**

ಒಂದು separate Central Act ಅನ್ನು ಮಾಡಿ, Commission ಅನ್ನು ಮಾಡಿದರು. ಆಗ Office of the Custodian ಎಂದು ಮಾಡಿದರು. ಅದರ ಪರಿಣಾಮವಾಗಿ ಸುಮಾರು ಸಾವಿರಾರು ಕೋಟಿ ರೂಪಾಯಿಗಳನ್ನು ಅಂದಿನ ಆ ಕಮಿಷನ್‌ನವರು ವಾಪಸ್ಸಾತಿ ಮಾಡಿಕೊಂಡರು ಮತ್ತು ಜಪ್ತಿ ಮಾಡಿಕೊಂಡರು. ಬ್ಯಾಂಕ್‌ಗಳಲ್ಲಿ ಅಕೌಂಟ್‌ಗಳನ್ನು ವಶ ಪಡಿಸಿಕೊಂಡರು. ಹಾಗಾಗಿ ಸುಮಾರು 7,000 ಕೋಟಿ ರೂಪಾಯಿಗಳನ್ನು ವಸೂಲಿ ಮಾಡುವುದಕ್ಕೆ ಸಾಧ್ಯವಾಯಿತು. ಅವೊತ್ತಿನ ಹರ್ಷದ್ ಮೆಹ್ತಾರವರ ರವರ ಪ್ರಕರಣದಲ್ಲಿ 15,000 ರಿಂದ 20,000 ಕೋಟಿ ರೂಪಾಯಿಗಳು ಇರಬೇಕು. ಅದು ಇರಲಿ, ನಮ್ಮ ರಾಜ್ಯದೊಳಗೆ ಈ ಕಬ್ಬಿಣದ ಅದಿರು ಮೂಲಕ 2006 ರಿಂದ 2011-12 ಸಾಲಿನವರೆಗೆ ಮಾನ್ಯ ಸಂತೋಷ್ ಹೆಗ್ಡೆಯವರು ಒಂದು ದೊಡ್ಡ ವರದಿಯನ್ನು ಕೊಟ್ಟರು. ಅವರು

ಕೊಟ್ಟಿರುವಂತಹ ವರದಿಯಲ್ಲಿ 2.98 ಕೋಟಿ ಅಕ್ರಮ ಅದಿರು export ಆಗಿದೆ ಎಂದು ಹೇಳಿ, ಅದಕ್ಕೆ ಬೆಲೆಯನ್ನು ಸಹ ಕಟ್ಟಿದರು. ಅವೊತ್ತಿನ ಸಂದರ್ಭದಲ್ಲಿ ಸುಮಾರು 12,000 ಕೋಟಿ ರೂಪಾಯಿಗಳಾಗಿತ್ತು. ತದನಂತರ ಅವರು ನೀಡಿರುವ ವರದಿಯ ನಂತರ ಅಥವಾ ವರದಿಯ ಯಾವ ವ್ಯಾಪ್ತಿಯೊಳಗೆ ಅದನ್ನು examine and verify ಮಾಡುವುದಕ್ಕಾಗಿದ್ದಲ್ಲ. ಅದೆಲ್ಲವನ್ನು ನೋಡಿ ನಂತರ ನಡೆದಿರುವಂತಹ ತನಿಖೆ ಹಾಗೂ ಸಬ್ ಕಮಿಟಿಯಲ್ಲಿ ಬಂದಿರುವ ಎಲ್ಲಾ ವಿವರದ ಹಿನ್ನೆಲೆಯೊಳಗೆ ಸುಮಾರು 20 ಕೋಟಿ ಮೆಟ್ರಿಕ್ ಟನ್ illegal mine ore has got transferred. It might have gone out of the state; it might have gone out of the country. ಇದರ ಬಹು ದೊಡ್ಡ ಬೆಲೆಯಾಗುತ್ತದೆ. ಈ 80,000 ಕೋಟಿಗಳಷ್ಟು ರಾಜ್ಯಕ್ಕೆ ನಷ್ಟ ಆಗಿದೆ. ಅದನ್ನು ವಸೂಲಾತಿ ಮಾಡುವ ಸಲುವಾಗಿ...

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಚಿವರೇ, ಎಷ್ಟು ಬಾರಿ ನಷ್ಟವಾಗಿದೆ ಎಂಬ ಇನ್ನೊಮ್ಮೆ ಬಾರಿ ಹೇಳಿ.

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಂತೋಷ್ ಹೆಗ್ಡೆಯವರು ಸಮಯದಲ್ಲಿ 20 ಕೋಟಿ ಮೆಟ್ರಿಕ ಟನ್ export ಆಗಿರುವ ಅವೊತ್ತಿನ ಮಾರುಕಟ್ಟೆಯ ಬೆಲೆ ರೂ.4,103 ರಂತೆ ಹಿಡಿದುಕೊಂಡಿದ್ದರು. ಇದನ್ನು ಲೆಕ್ಕ ಹಾಕಿದರೆ ಸುಮಾರು 80,000 ಕೋಟಿ ರೂಪಾಯಿಗಳಷ್ಟು ಅಕ್ರಮವಾಗಿರುವಂತಹ ನಮ್ಮ ರಾಜ್ಯದ ಸ್ವತ್ತನ್ನು ಹಲವು ಕಂಪನಿಗಳು, ಹಲವಾರು ವ್ಯಕ್ತಿಗಳು ಕೂಡಿ ಅದನ್ನು ವರ್ಗಾವಣೆ ಮಾಡಿದ್ದಾರೆ. ಇಷ್ಟು ದೊಡ್ಡ ಪ್ರಮಾಣ ರಾಜ್ಯಕ್ಕೆ ನಷ್ಟವಾದಾಗ, ಇದನ್ನು ವಸೂಲಾತಿ ಮಾಡುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಈಗಾಗಲೇ ಸಚಿವ ಸಂಪುಟ ಗಂಭೀರವಾಗಿ ಚರ್ಚೆ ಮಾಡಿದ್ದು, ಸಚಿವ ಸಂಪುಟದ ಉಪ ಸಮಿತಿ ಕೂಡ ಗಂಭೀರವಾಗಿ ಚರ್ಚೆ ಮಾಡಿದ್ದು, ಈ ರೀತಿಯಾಗಿರುವಂತಹದ್ದಕ್ಕೆ ಆಯುಕ್ತರ ನೇಮಕಾತಿಯನ್ನು ಮಾಡಲೇಬೇಕಾಗುತ್ತದೆ. ಆ Recovery Commissioner ಅನ್ನು ನೇಮಕ ಮಾಡುವಂತಹ ಕೆಲಸವನ್ನು ಮಾಡಿದರೆ, that Institution will start recovering. ನಮ್ಮ ರಾಜ್ಯದ ಬಗ್ಗೆ ಉದಾಹರಣೆಯಾಗಿ ಹೇಳುವುದಾದರೆ, IMA (Indian Bureau of Mines) ದೊಳಗೆ ಒಂದು ಆಯುಕ್ತರನ್ನು ನೇಮಕ ಮಾಡಿದ್ದೇವೆ. They were able to collect or mobilize or recover thousands of crores. ಸುಮಾರು ಆರೇಳು ಎಂಟು ನೂರು ಕೋಟಿ ರೂಪಾಯಿಗಳನ್ನು ಜನರಿಗೆ ಈಗ ವಾಪಸ್ಸು ಕೊಟ್ಟುಬಿಟ್ಟರು. ಯಾರಿಗೆ ಮೋಸವಾಗಿ ಹೋಗಿತ್ತೋ, ಅದನ್ನು

ತೆಗೆದುಕೊಂಡು ನಮ್ಮ ಅಧಿಕಾರಿಗಳು ಈಗಾಗಲೇ ವಾಪಸ್ಸು ಮಾಡಿದರು. ಈ Recovery Commissioner ಅನ್ನು ನೇಮಕ ಮಾಡುವಂತಹ ಪದ್ಧತಿ ಏನಿದೆ ಇದೊಂದು ಅನಿವಾರ್ಯದ ಪದ್ಧತಿ. ಇದಕ್ಕೆ ಸಾಕಷ್ಟು ಸದ್ಯದ ಕಾನೂನಿನೊಳಗೆ ಅವಕಾಶವಿತ್ತು ಎಂದರೆ loose ends ಬಹಳ ಇದ್ದವು. ಕೇಂದ್ರ ಸರ್ಕಾರದವರಿಗೆ ಈ ರೀತಿ ಮಾಡಬಹುದಾಗಿತ್ತು ಅಥವಾ ನಾವು Executive Order ನಲ್ಲಿ ಮಾಡಬಹುದು. ಆದರೆ ಈ ಪ್ರಕರಣಗಳಲ್ಲಿ ಬಹಳ ದೊಡ್ಡ ದೊಡ್ಡ ಜನರು ಇದ್ದಾರೆ, ಕಂಪನಿಗಳಿವೆ ಮತ್ತು wealthy companies ಏನಿವೆ ಇವರು ಇರುವಂತಹ ಹಲವಾರು weapons ಅಂದರೆ like going and bringing stay etc ಇವೆಲ್ಲವುಗಳನ್ನು ಹೇಗೆ ಸರಿದೂಗಿಸಬಹುದು ಎಂಬ ಬಗ್ಗೆ ಸ್ಪಷ್ಟವಾಗಿರುವಂತಹ ನಿರ್ದಿಷ್ಟವಾಗಿರುವಂತಹ ಉದ್ದೇಶದಿಂದ ನಾವು ಯಾವ ರೀತಿಯಾಗಿರುವಂತಹ ವಸೂಲಾತಿಗೆ ಪರಿಣಾಮಕಾರಿಯಾಗಿ ತೆಗೆದುಕೊಳ್ಳಬಹುದು ಎನ್ನುವ ದೃಷ್ಟಿಯಿಂದ .....ಮಾನ್ಯ ಶಿವರಾಜ ಎಸ್ ತಂಗಡಿಯವರಿಗೆ ಬಿಲ್ ಬಗ್ಗೆ ಉತ್ತರ ಕೊಡುವುದಕ್ಕೆ ಅನುಕೂಲವಾಗಲಿ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಇಷ್ಟೊಂದು ದೊಡ್ಡ ಸ್ವತ್ತು ಒಂದೇ ಒಂದು ಕೆಲವು ವರ್ಷಗಳ ಅವಧಿಯೊಳಗೆ ಅಕ್ರಮವಾಗಿ ಹೋಗಿರುವಂತಹದ್ದು, ಉತ್ತಮ ಆಡಳಿತಕ್ಕೆ ಹೆಸರಾಗಿರುವ ಕರ್ನಾಟಕದಲ್ಲಿ ಇನ್ನೊಂದು ಇರುವುದಕ್ಕೂ ಸಾಧ್ಯವಿಲ್ಲ. ತಾವು ಆಗ ಗಮನಿಸುತ್ತಿದ್ದೀರಿ. ಈ ಗೌರ್ನರ್ ಗಾಡಿಗಳು ಹೋಗುತ್ತಿದ್ದರೂ ಸಹಿತ illegal mine ore ತೆಗೆದುಕೊಂಡು ಟ್ರಕ್‌ಗಳು ಆ ಗೌರ್ನರ್ ಗಾಡಿಗೆ side ಹೊಡೆದುಕೊಂಡು ಹೋಗುತ್ತಿದ್ದರು. ಆ ಸಂದರ್ಭದೊಳಗೆ ನಮ್ಮ ರಾಜ್ಯದಲ್ಲಿ ಆ ರೀತಿಯ ಒಂದು ವ್ಯವಸ್ಥೆ ಸೃಷ್ಟಿಯಾಗಿತ್ತು. ಆ ಕಾರಣಕ್ಕೆ ಇಷ್ಟೊಂದು ದೊಡ್ಡ ಪ್ರಮಾಣ ಸುಮಾರು ೮೦,೦೦೦ ಕೋಟಿ ರೂಪಾಯಿಯ ಅಕ್ರಮ ಅದಿರು ನಮ್ಮ ರಾಜ್ಯದ ಸ್ವತ್ತು ಇದೇನೂ ಬೇರೆಯವರ ಪಾಲಾಗಿದೆ. ಅದು ಇವತ್ತು ಅದಿರು ಆಗಿ ಉಳಿದಿರುವುದಿಲ್ಲ. It may not be in the form of ore. It might have already been converted, it might have gone to other states or other countries. Wherever it is, ಅದು ಎಲ್ಲೋ ಒಂದು ರೂಪದಲ್ಲಿ ಹೋಗಿದೆ. ಆ ಒಂದು ಸ್ವತ್ತನ್ನು ವಸೂಲಾತಿ ಮಾಡುವುದಕ್ಕೆ ಈ ಒಂದು Recovery Commissioner ಅನ್ನು ಮಾಡಲಾಗುತ್ತದೆ. ಇದೊಂದು ಐತಿಹಾಸಿಕವಾದಂತಹ ಪ್ರಯತ್ನ. ಈ ಪ್ರಯತ್ನದ ಮೂಲಕ ರಾಜ್ಯದ ನಷ್ಟವಾಗಿರುವಂತಹ ಸ್ವತ್ತನ್ನು ವಾಪಸ್ಸು ಪಡೆದುಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯವೂ ಹೌದು. ಇದಕ್ಕೆ ಸ್ಪಷ್ಟವಾದಂತಹ ರಾಜಕೀಯ ಇಚ್ಛಾಶಕ್ತಿ ಅವಶ್ಯಕತೆ ಎಲ್ಲರಲ್ಲೂ ಇದೆ. ಈ ಸದನದ ಮೇಲೆ ವಿಶೇಷವಾಗಿರುವಂತಹ ಹೊಣೆಗಾರಿಕೆ ಇದೆ. ರಾಜ್ಯದ ಆಸ್ತಿ

ವಾಪಸ್ಸು ಪಡೆಯುವಂತಹ ಈ ಒಂದು ಮಹತ್ವದ ಬಿಲ್‌ನ್ನು ತಾವು ಮಂಜೂರು ಮಾಡಿಕೊಡಬೇಕು ಮತ್ತು ಬೆಂಬಲಿಸಬೇಕು. ರಾಜಕೀಯ ಇಚ್ಛಾಶಕ್ತಿಗಳನ್ನು ತೋರಿಸಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಐವನ್‌ಡಿಸೋಜಾರವರೇ, ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಐವನ್ ಡಿ'ಸೋಜಾರವರೇ, ಒಂದು ನಿಮಿಷವಿರಿ. ನಾನು ಪ್ರಾರಂಭಿಕವಾಗಿ ಪ್ರಸ್ತಾಪ ಮಾಡಬೇಕಾಗಿತ್ತು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 16.09.2013 ರಲ್ಲಿ

*"...in an interlocutory application number 198 of writ petition 562/2009 has permitted the CBI to refer the matters with respect to the exporters who had exported less than 50000 MTS and were not enquired into in the preliminary enquiry and also has permitted the CBI to refer the cases of exporters who had exported less than 50000 MTS of iron ore without valid permit to refer to the Government of Karnataka for taking for the necessary action under the relevant laws as recommended by the Central Empowered Committee...*

(ಮುಂದು)

(942) 22.08.2025 12.00 TCH-AK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು)**

ಅಂದರೆ ಆ ಸಂದರ್ಭದಲ್ಲಿ ಸುಮಾರು ರೂ.50,000 ಕ್ಕೂ ಹೆಚ್ಚು ಮೆಟ್ರಿಕ್ ಟನ್ ಇರತಕ್ಕಂಥ ಪ್ರಕರಣಗಳನ್ನು ಸಿ.ಬಿ.ಐ.ನವರು enquiry ಮಾಡಬೇಕು. ಅದಕ್ಕಿಂತ ಕಡಿಮೆ ಮೆಟ್ರಿಕ್ ಟನ್ ಇರತಕ್ಕಂಥ ಪ್ರಕರಣಗಳನ್ನು ಕರ್ನಾಟಕ ಸರ್ಕಾರ ಮಾಡಬೇಕು ಎನ್ನುವಂಥದ್ದನ್ನು ಹೇಳಿದ್ದರು. ಇದರ ಜೊತೆಗೆ ಅವೊತ್ತು ಏನು ಆದೇಶಗಳಾಗಿವೆ, ಆ ಆದೇಶಗಳ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಈ ಸಂದರ್ಭದಲ್ಲಿ CI 282 MM 2011 (p) dated 22.11.2013, CI 282 MM 2011 dated 06.06.2017, CI 282 MM dated 21.03.2018,

CI 18 MM 2019 dated 22.11.2024; ಈ ಸಂದರ್ಭದಲ್ಲಿ ವಿಶೇಷ ತನಿಖಾ ತಂಡಕ್ಕೆ ಆದೇಶ ಹೊರಡಿಸಿ ಇವುಗಳನ್ನು enquiry ಮಾಡಬೇಕೆಂದು ಕೂಡ ಹೇಳಿದರು. ಇವೆಲ್ಲಾ ಈ ಒಂದು ಆದೇಶಗಳಲ್ಲಿ ಯಾವ್ಯಾವ ಉದ್ಯಮಗಳು ಬರುತ್ತವೆ, ಯಾವ್ಯಾವ ವ್ಯಕ್ತಿಗಳು ಬರುತ್ತಾರೆ, ಯಾವ್ಯಾವ firm ಗಳು ಬರುತ್ತವೆಯೋ ಇವುಗಳೆಲ್ಲದರ ಮೇಲೆಯೂ ಕೂಡ ಒಬ್ಬರು Recovery Commissioner ರವರು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ ಎಂದು ನಾನು ಇಲ್ಲಿ ಸ್ಪಷ್ಟಪಡಿಸುತ್ತೇನೆ. ಇದರ ಜೊತೆಗೆ ಮುಂದೆ ಆಗಬಹುದಾಗಿರತಕ್ಕಂಥ ಯಾವುದಾದರೂ ಗುನ್ನೆಗಳಾದಲ್ಲಿ ಅವುಗಳನ್ನೂ ಕೂಡ ಇದರ ವ್ಯಾಪ್ತಿಯಲ್ಲಿ ತರುವುದಕ್ಕೆ ಅವಕಾಶವಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಒಂದು ನೂತನವಾಗಿರತಕ್ಕಂಥ ಬಿಲ್ ಅನ್ನು ತಂದಿದ್ದಾರೆ. ಇದು ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಕ್ರಮ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕ, 2025 ಅನ್ನು ತಂದಿದ್ದಾರೆ. ಒಬ್ಬರು officer ನೇಮಕ ಮಾಡಿ, ಎಲ್ಲೆಲ್ಲಿ ಬಾಕಿ ಇದೆಯೋ ಅದನ್ನು ವಸೂಲಿ ಮಾಡುವುದಕ್ಕೋಸ್ಕರವಾಗಿ ಈ ಒಂದು ಹೊಸ ಬಿಲ್‌ನ್ನು ತಂದಿದ್ದಾರೆ. ನನಗೆ ಮೊದಲು ಈ ಬಿಲ್ ಅನ್ನು ನೋಡಿದಾಗ ನನ್ನ ಮನಸ್ಸಿಗೆ ಅನಿಸಿದ್ದೇನೆಂದರೆ, ಇದು late thinking ಆಯಿತು. ಇದನ್ನು ಇಷ್ಟು ತಡವಾಗಿ ತಂದಿದ್ದೀರಿ ಎಂದು ನನಗೆ ಅನಿಸಿತು. ಏಕೆಂದರೆ, ಇದರಲ್ಲಿರುವಂಥ ಅನೇಕ ವಿಚಾರಗಳು ಮತ್ತು ರಾಜ್ಯದ ಒಟ್ಟಾರೆ ಗಣಿ ಸಂಪತ್ತನ್ನು ಇವತ್ತು ಬಳಕೆ ಮಾಡುವಂಥದ್ದು ಮತ್ತು ರಾಜ್ಯದ ಬೊಕ್ಕಸಕ್ಕೆ ಆಗಿರುವಂತಹ ನಷ್ಟವನ್ನು ನಾವು ತೆಗೆದುಕೊಂಡಾಗ ಬಹುಶಃ ಅದು ಎಷ್ಟು ದುಡ್ಡಾಗುತ್ತದೆ ಎಂದು count ಮಾಡುವುದಕ್ಕೂ ಕೂಡ ಕಷ್ಟ ಇದೆ. ಹಾಗಾಗಿ, ಇಷ್ಟು ತಡವಾಗಿ ಆದರೂ ಕೂಡ ಒಬ್ಬರು Recovery Commissioner ಬೇಕೆಂದು ನೇಮಕಾತಿ ಮಾಡುವುದು after the direction of the Court. ಕೋರ್ಟ್‌ಗಳು direction ಕೊಟ್ಟನಂತರ ತಾವು ಇಂತಹ ನೇಮಕಾತಿಗಳನ್ನು ಮಾಡುತ್ತಿದ್ದೀರಿ. ಕೊನೆಪಕ್ಷ ನಮ್ಮ ಸಂಪತ್ತನ್ನು ಉಳಿಸುವುದಕ್ಕೆ ಎಷ್ಟು ಸ್ವತ್ತು ಉಳಿಯುತ್ತದೋ ಅಷ್ಟಾದರೂ ಉಳಿಯಲಿ ಎಂಬ ದೃಷ್ಟಿಯಿಂದ ಮಾಡಿದ್ದೀರಿ. ಅದಕ್ಕೆ ನಾನು . . .

**ಶ್ರೀ ಹೆಚ್.ಕೆ.ಪಾಟೀಲ್ (ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ವಸೂಲಾತಿಗೆ this is not at the direction of the Court. This is at the

direction of our political will and not because of the court direction. The Court has not directed us.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರೇ, ತಾವು ಇದನ್ನು ಮಾಡಿರುವುದು ಸರಿಯಿದೆ. Court ನಿರ್ದೇಶನ ಕೊಡದಿದ್ದರೂ ಕೂಡ political will ನಿಂದ ನೀವು ಇದನ್ನು ತೆಗೆದುಕೊಂಡು ಬಂದಿದ್ದೀರಿ. ಇದನ್ನು ನಾನು ಸ್ವಾಗತಿಸುತ್ತೇನೆ. ನನ್ನದು ಎರಡು-ಮೂರು ಸಲಹೆಗಳಿವೆ. Mineral ಎಂದು ಹೇಳುವುದಕ್ಕೆ ಬೇರೆ ಬೇರೆ types ಇವೆ. ನಾವು ಈ mineral ಅನ್ನು test ಮಾಡುವುದಕ್ಕೆ ಆ testing authority ಎಲ್ಲಿದೆ? ಮಂಗಳೂರಿನ ಕರಾವಳಿ ಕಡೆ ಬಂದರೆ ನಾವು ಕೆಂಪು ಕಲ್ಲನ್ನು ತೆಗೆಯುತ್ತೇವೆ. ಈ ಕೆಂಪು ಕಲ್ಲನ್ನು ಮನೆಗಳನ್ನು ಕಟ್ಟುವುದಕ್ಕೆ use ಮಾಡುತ್ತೇವೆ. ಈ ಕೆಂಪು ಕಲ್ಲಿನ grade ಅನ್ನು fix ಮಾಡುವಂಥದ್ದು ಮತ್ತು test ಮಾಡತಕ್ಕಂಥದ್ದು. ಬೇರೆ ಬೇರೆ ವಿಧಗಳಲ್ಲಿ ಅದರ ಮೇಲೆ mineral ನ ಇಡೀ ಸಂಪತ್ತು ಇರುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗ ಕೆಂಪು ಜಾಸ್ತಿ ಬಂದು ಗಟ್ಟಿಯಾಗಿಬಿಟ್ಟರೆ ನಮ್ಮ ಕರಾವಳಿ ಭಾಗದಲ್ಲಿ ಅದನ್ನು ಬಾಕ್ಸೈಟ್ ಎಂದು ಹೇಳುತ್ತೇವೆ. ಆ ಬಾಕ್ಸೈಟ್ ಅನ್ನು ಬೇರೆ ಬೇರೆ ಕಂಪನಿಗಳಿಗೆ ಕಳುಹಿಸುತ್ತೇವೆ. ಆದರೆ ಅದರಿಂದ ಸಾಕಷ್ಟು revenue loss ಆಗುತ್ತದೆ ಎಂದು ಕೂಡ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈಗ ಮಾನ್ಯ ಸಚಿವರು ವಸೂಲಾತಿಗೆ ಆಯುಕ್ತರನ್ನು ನೇಮಕ ಮಾಡಲು ಹೊರಟಿದ್ದಾರೆ. ಇದು ಬಹಳ ಒಳ್ಳೆಯ ಒಂದು ಬಿಲ್. ಆದರೆ ತಾವು ಈ officer ರವರನ್ನು ನೇಮಕ ಮಾಡುವಾಗ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದವರು ಎಂದು ತಾವು ಹೇಳಿದ್ದೀರಿ. ಅಂದರೆ ಎ.ಸಿ.ಎಸ್. ಎಂದು ನನ್ನ ಅನುಭವದಲ್ಲಿ ಹೇಳುತ್ತೇನೆ. ಅದರಲ್ಲಿ ನಿವೃತ್ತ ಅಧಿಕಾರಿಯನ್ನು ನೇಮಕಾತಿ ಮಾಡುವುದು ಅಥವಾ ನಿವೃತ್ತ ಅಧಿಕಾರಿ ಎಂದು ಹೇಳಿದ್ದೀರಿ. ನಮ್ಮ ಸಲಹೆ ಏನೆಂದರೆ, it won't be successful. ಇಲ್ಲಿ ನೀವು ನಿವೃತ್ತಿ ಆದವರನ್ನು ನೇಮಿಸುತ್ತಿದ್ದೀರಿ ಎಂದರೆ normal human tendency is to go for a weaker section. ಅದು ಯಾವ ಸರ್ಕಾರ ಬರಬಹುದು. ಅದು ಯಾವ ಸರ್ಕಾರ ಯಾವ ಮಂತ್ರಿಗಳೋ ನಮಗೆ ಗೊತ್ತಿಲ್ಲ. ಆದರೆ ನೀವು ಕಾನೂನು ಮಾಡುವಾಗ ನಿವೃತ್ತಿಯಾದವರನ್ನೂ ಆ ಜಾಗಕ್ಕೆ ನೇಮಕ ಮಾಡಬಹುದು ಎಂದರೆ I think this is a great responsibility which you are giving. Because ನೀವು ಬೇರೆ ಕೋರ್ಟ್‌ಗಳಿಂದ ಕೇಸ್‌ಗಳನ್ನು ವಸೂಲಾತಿಗೆ withdraw ಮಾಡುತ್ತೀರಿ. Execution ಗೆ ಹಾಕತಕ್ಕಂಥದ್ದು. ಎಲ್ಲರೂ ಇವರ ತಲೆಯ ಮೇಲೆ ಇಡುತ್ತೇವೆಂದು ಈ ಬಿಲ್‌ನಲ್ಲಿ ಹೇಳಿದ್ದಾರೆ. You are also

giving power under the CPC (Civil Procedure Code). Civil Procedure Code ರ ಅಡಿಯಲ್ಲಿ ನೀವು ಅವರಿಗೆ power ಅನ್ನು ಕೊಡುತ್ತಿದ್ದೀರಿ. Civil Procedure Code ನಿಂದ ಮಾತ್ರ ನೀವು ವಸೂಲಾತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರೇ, ತಾವು ವಕೀಲರಾಗಿದ್ದವರು. ನಾನು ವಕೀಲನಾಗಿ practice ಮಾಡಿದ್ದೇನೆ. ಕೋರ್ಟ್‌ಗಳಲ್ಲಿ Civil Procedure Code ನೊಳಗೆ you have limited power to bring... ಆರೋಪಿಯಾಗಿಯೇ ಇರುತ್ತಾನೆ ಅಥವಾ ಬೇರೆ ಬೇರೆ ಸಂಗತಿಗಳು ಕೇಸ್‌ನ ಮಧ್ಯೆ ಬರುತ್ತದೆ. ಹಾಗಾಗಿ, ನನ್ನ ರಿಕ್ವೆಸ್ಟ್ ಏನೆಂದರೆ, Civil Procedure Codeನಿಂದ ಮಾತ್ರ ಅವರು ಮಾಡುವುದರಿಂದ successful ಆಗಿ ಆಯುಕ್ತರು ವಸೂಲಾತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಲ್ಲಿ ಬಿ.ಎನ್.ಎಸ್. ಅನ್ನೂ ಕೂಡ ತೆಗೆದುಕೊಳ್ಳಿ. I.P.C powers ಅನ್ನು ಕೊಡಿ. ಹಿಂದಿನ I.P.C. ಈಗಿನ B.N.S ಆಗಿದೆ. ಅದನ್ನಾದರೂ some limited powers ಕೊಟ್ಟರೆ summon ಮಾಡುವುದು, ಅವರನ್ನು ಕರೆಯುವುದು, ಸಾಕ್ಷಿಗಳನ್ನು ತೆಗೆದುಕೊಳ್ಳುವುದು ಅಥವಾ ಬೇರೆ ಏನಾದರೂ ವಸೂಲಿ ಮಾಡುವುದಕ್ಕೆ ಕೊಡತಕ್ಕಂಥ ಅಧಿಕಾರ ಕೊಟ್ಟರೆ this will be more powerful ಎಂದು ನನಗೆ ಅನಿಸುತ್ತಿದೆ.

ಮತ್ತೆ ನಾನು ಸೆಕ್ಷನ್ 17 ಕಡೆಗೆ ನಾನು ತಮ್ಮ ಗಮನಸೆಳೆಯಬಯಸುತ್ತೇನೆ. ಅದರಲ್ಲಿ ‘ಬಾಕಿ ಇರುವ ಪ್ರಕರಣಗಳ ವರ್ಗಾವಣೆ’ ಎಂದು ಹೇಳಿದ್ದಾರೆ. ಅದರಲ್ಲಿ ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಲೆಕ್ಕವಿಲ್ಲದಷ್ಟು ಸಂಖ್ಯೆಯ ಗುತ್ತಿಗೆದಾರರು, ಸಾಗಾಣಿಕೆದಾರರು, ರಫ್ತುದಾರರು, ದಾಸ್ತಾನುಧಾರಕರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಸೇರಿದಂತೆ ಬಹು-ವಹಿವಾಟುಗಳನ್ನು ಒಳಗೊಂಡ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ ಸಂಘಟಿತ ಒಳಸಂಚು ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು ಮತ್ತು ಜಪ್ತಿ ಮಾಡಲು ಮತ್ತು ಸಂಬಂಧಿಸಿದ, ಯಾವುದೇ ನ್ಯಾಯಾಲಯದ ಮುಂದೆ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ವಸೂಲಾತಿ ಆಯುಕ್ತರಿಗೆ ವರ್ಗಾಯಿಸತಕ್ಕದ್ದು” ಎಂದು ಹೇಳಿದ್ದಾರೆ. That means, either he is Head of the State or you are having region-wise cases ಅಥವಾ ಮೈಸೂರು, ಬೆಂಗಳೂರು ಮತ್ತು ಹೈದ್ರಾಬಾದ್ ನಲ್ಲಿ sub-division ಇವೆ. ಆ sub-division ಗಳಿಗೆ ಮಾಡುತ್ತೀರಾ ಎಂದು ಇದರಲ್ಲಿ ಎಲ್ಲಿಯೂ ಕೂಡ ಸ್ಪಷ್ಟನೆ ಇಲ್ಲ. ಆ ರೀತಿ ಮಾಡಬೇಕೆಂದು ಇದರಲ್ಲಿ ಎಲ್ಲೋ ಒಂದು ಕಡೆ ಓದಿದಂತಾಯಿತು. ಹಾಗಾಗಿ, ಬರೀ state level ಗೆ ಮಾಡಿದರೆ section 17 ಪ್ರಕಾರ ಎಲ್ಲಾ ಪ್ರಕರಣಗಳನ್ನು ನೀವು ತೆಗೆದುಕೊಂಡು

ಅದನ್ನು ಇತ್ಯರ್ಥ ಮಾಡುವುದಕ್ಕೆ you may have lot of time. ಹಾಗಾಗಿ, ಅದು quick disposal ಆಗಬೇಕು. ಏಕೆಂದರೆ ನೀವು ಮಾಡುವುದು ವಸೂಲಾತಿ. ಈಗಾಗಲೇ ಸರ್ಕಾರ ತೀರ್ಮಾನ ಮಾಡಿಬಿಟ್ಟಿದೆ. This much has been given to the government. ಸರ್ಕಾರಕ್ಕೆ ಇಷ್ಟು ಕೊಡಬೇಕೆಂದು ತೀರ್ಮಾನವಾಗಿದೆ. Execution ಮೂಲಕ ವಸೂಲಾತಿ ಮಾಡತಕ್ಕಂಥದ್ದು. ಸಿವಿಲ್ ಕೋರ್ಟ್‌ನಲ್ಲಿ ಮತ್ತು ಬೇರೆ ಬೇರೆ District Court ನಲ್ಲಿ ಬಿದ್ದಿರತಕ್ಕಂಥ ಎಲ್ಲಾ ಪ್ರಕರಣಗಳನ್ನು ತರುತ್ತೀರಿ. ಹಾಗಾಗಿ, ನನ್ನ ಕಳಕಳಿಯ ವಿನಂತಿ ಏನೆಂದರೆ, ಸರ್ಕಾರದ ಸಂಪತ್ತಿನಿಂದ ಸರ್ಕಾರಕ್ಕೆ ಗಳಿಕೆ ಸಿಗಬೇಕೆನ್ನುವುದು ಅವರ ನೈಜವಾದಂತಹ ಬೇಡಿಕೆ. ಹಾಗಾಗಿ ತಾವು region-wise ಇಂತಹ ಆಯುಕ್ತರನ್ನು ನೇಮಕ ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟರೆ ಬಹುಶಃ ತಾವು ಹೇಳಿದಂತೆ ಈ will of the government ಏನಿದೆ, ಅದು success ಆಗುವುದಕ್ಕೆ ಸಾಧ್ಯತೆ ಇದೆ. ಇದು ಆಗುವಂಥದ್ದು ಎಂದು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ಮತ್ತೆ ಈ ಬಿಲ್ ನಿಜವಾಗಿಯು ಕೂಡ ತಡವಾದರೂ ಕೂಡ ಒಳ್ಳೆಯ ಸಂದರ್ಭದಲ್ಲಿ ಬಂದಿದೆ. ಕೂಡಲೇ ಅವರ ನೇಮಕಾತಿಯನ್ನು ಮಾಡಿ ಏನು ವಸೂಲಾತಿ ಮಾಡುವುದು ಇದೆಯೋ ಅದನ್ನು ಮಾಡುವುದಕ್ಕೆ ಮುಂದಾಗಬೇಕೆಂದು ಹೇಳುತ್ತೇನೆ. ಮಾನ್ಯ ಸಚಿವರು ಈ ಬಿಲ್ ಅನ್ನು ತಂದು ಒಳ್ಳೆಯ explanation ಅನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ಮಾನ್ಯ ಸಚಿವರಿಗೆ ಕೃತಜ್ಞತೆಯನ್ನು ಅರ್ಪಿಸಿ, ಈ ಬಿಲ್ ಅನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಅಕ್ರಮ ಗಣಿಗಾರಿಕೆಗೆ ಅಪರಾಧ ಉತ್ಪತ್ತಿಗಳಿಂದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕೆ ಈ ಒಂದು ಮಸೂದೆಯನ್ನು ಮಾನ್ಯ ಕಾನೂನು ಸಚಿವರು ಮಂಡಿಸಿದ್ದಾರೆ. ನಾನು ಮಾನ್ಯ ಕಾನೂನು ಸಚಿವರಲ್ಲಿ ಕೇಳಬಯಸುವುದೇನೆಂದರೆ, ಕಳೆದ 2 ದಶಕಗಳ ಹಿಂದಿನಿಂದ ಪ್ರಾರಂಭವಾದಂತಹ ಅನೇಕ ವಿಷಯಗಳನ್ನು ನಾವು ಈಗ ಎಷ್ಟು ಹಣ ಹೋಗಿದೆ, ಎಷ್ಟು ಸ್ವತ್ತುಗಳು ಲೂಟಿಯಾಗಿವೆ. ಯಾವ್ಯಾವ ಸ್ವರೂಪದಲ್ಲಿ ಅವು ಹೋಗಿ ಶೇಖರಣೆಯಾಗಿವೆ, ಇವೆಲ್ಲವೂ ತಲುಪಿದೆ ಎನ್ನುವಂಥದ್ದಕ್ಕೆ ಒಬ್ಬರು Commissioner ರವರನ್ನು ನೇಮಕ ಮಾಡುವುದರ ಮೂಲಕ ಸರ್ಕಾರ ಮತ್ತೆ ಆ ಸ್ವತ್ತನ್ನು ವಾಪಸ್ಸು ಪಡೆಯುವುದಕ್ಕೆ ಚಾಲನೆಯನ್ನು ಕೊಡುತ್ತೇವೆ ಎಂದು ಮಾನ್ಯ ಸಚಿವರು ದೀರ್ಘವಾದ ವಿವರಣೆಯೊಂದಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ತಮ್ಮಲ್ಲಿ ಕೇಳುವುದೇನೆಂದರೆ, ದರ್ಜೆಯನ್ನು ಘೋಷಣೆ ಮಾಡಿದ್ದಾರೆ. ಅಂದರೆ ಎ.ಸಿ.ಎಸ್. ದರ್ಜೆಯ ಅಧಿಕಾರಿ ಅಥವಾ ನಿವೃತ್ತ ಅಧಿಕಾರಿ ಎಂದು ಕೂಡ ಹೇಳಿದ್ದಾರೆ. ಎ.ಸಿ.ಎಸ್. ಅಥವಾ ನಿವೃತ್ತ ಎ.ಸಿ.ಎಸ್ ರವರನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. **(ಮುಂದು)**

22.8.2025/12.10/ಎಂ.ಎಂ-ಎ.ಕೆ (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಕೆ.ಎಸ್. ನವೀನ್ (ಮುಂದು):-**

ನಾನು ಕೇಳಬಯಸುವುದೇನೆಂದರೆ, ಇದರಲ್ಲಿ ರೂ. 80,000 ಕೋಟಿಯಷ್ಟು ಅಂದಾಜು ಮೊತ್ತ ಲೂಟಿಯಾಗಿದೆ ಎಂದು ಕೂಡ ತಾವು ಹೇಳಿದಿರಿ. ಒಬ್ಬ ನಿವೃತ್ತ ಅಧಿಕಾರಿ ಅಥವಾ ಹಾಲಿ ಅಧಿಕಾರಿಯಿಂದ ಇಷ್ಟು ದೊಡ್ಡ ಮಟ್ಟದಲ್ಲಿ ಲೂಟಿಯಾಗಿರುವಂತಹ ಎಲ್ಲವನ್ನೂ ಕೂಡ ಪತ್ತೆ ಹಚ್ಚಿ, ಅದಕ್ಕೆ ಬೇಕಾಗಿರುವಂತಹ ಎಲ್ಲಾ ಆದೇಶಗಳನ್ನು ಮಾಡಿ ಮತ್ತು ಸರ್ಕಾರದಿಂದ ಅದಕ್ಕೆ ಅನುಮೋದನೆ ಪಡೆಯಬೇಕೆಂತಲೂ ಹೇಳಿದ್ದೀರಿ. ಏನೇ proceed ಮಾಡಬೇಕೆಂದರೂ ಕೂಡ ಅದಕ್ಕೆ ಸರ್ಕಾರದ ಮುಂದೆ ಪ್ರಸ್ತಾವನೆ ಇಟ್ಟು ಆದೇಶವನ್ನು ಪಡೆದುಕೊಳ್ಳಬೇಕು ಎಂದು ಕೂಡ ಇದರಲ್ಲಿದೆ. ನಾನು ಕೇಳುವುದೇನೆಂದರೆ, ತಾವು ಆ ತರಹದ ವ್ಯವಸ್ಥೆ ಮಾಡುವುದಕ್ಕಿಂತ ಹೆಚ್ಚಾಗಿ ಇದಕ್ಕೆ ಒಬ್ಬ judicial ಅಧಿಕಾರಿ, ಒಬ್ಬ ಕಂದಾಯ ಅಧಿಕಾರಿ ಮತ್ತೊಬ್ಬ ಗಣಿ ಇಲಾಖೆಯ ಅಧಿಕಾರಿ ಈ ಮೂರು ಜನರ ಒಂದು panel ಮಾಡಿದರೆ ಹೆಚ್ಚು ಸೂಕ್ತವಾಗಿರುತ್ತದೆ ಎನ್ನುವುದು ನನ್ನ ಭಾವನೆ. ಏಕೆಂದರೆ, ಯಾರೋ ಒಬ್ಬ ಕ್ರಿಮಿನಲ್ ಮಾಡಿದ್ದಾನೆ, ಆ ಕ್ರಿಮಿನಲ್‌ನ ಹಿಂದೆ ಹೋಗಿ ಅವನ ಹೆಜ್ಜೆಗುರುತನ್ನು ಪತ್ತೆ ಮಾಡಿ ಎಲ್ಲವನ್ನೂ ಮಾಡುತ್ತೇನೆ. ತಾವು ಹರ್ಷದ್ ಮೆಹ್ತಾ ಉದಾಹರಣೆ ಕೊಟ್ಟಿರಿ. Mr. Harshad Mehta was an individual. Harshad Mehta transaction was limited to his company and his activities. ಆದರೆ ಇದು ಹಾಗಲ್ಲ. ಇದು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಲೂಟಿಯಾಗಿರುವಂತಹ ಗಣಿ ಸಂಪತ್ತಾಗಿದೆ. ಎಷ್ಟೋ ಕಡೆಗಳಲ್ಲಿ ಹೊರ ರಾಜ್ಯಗಳ ಕಡೆಯಿಂದಲೂ ಗಣಿ ಸಂಪತ್ತು ಬೇರೆ ಬೇರೆ ಕಡೆಗಳಿಗೆ ರಫ್ತಾಗಿದೆ. ಇದೆಲ್ಲವೂ ಕೂಡ ಅನೇಕ ಜಿಲ್ಲೆಗಳಿಂದ ಕೋರ್ಟ್‌ಗೆ ಹೋಗಿ ಅಲ್ಲಿಂದಲೂ ಕೂಡ ಹೊರಗಡೆಗೆ ಹೋಗಿದೆ. ಹಾಗಾಗಿ ತಾವು ಕಮಿಷನರ್‌ರನ್ನು ನೇಮಕ ಮಾಡುವ ಬದಲು ಒಂದು panel ನೇಮಕ ಮಾಡಿ. ಅದರಲ್ಲಿ ಒಬ್ಬ judicial officer ಅಥವಾ ನಿವೃತ್ತ ಹೈಕೋರ್ಟ್ ಜಡ್ಜ್, ರೆವಿನ್ಯೂ ಇಲಾಖೆಯಲ್ಲಿರುವಂತಹ ಒಬ್ಬ ನಿವೃತ್ತ ಅಥವಾ ಹಾಲಿ ಹಿರಿಯ ಅಧಿಕಾರಿಗಳು ಯಾರನ್ನು ಮಾಡಿದರೆ ಈ ತರಹದ ಪ್ರಕರಣಗಳಲ್ಲಿ ನಮಗೆ ಬೇಕಾಗಿರುವಂತಹ ಸರ್ಕಾರದ intention ತಲುಪುವಂತಹ ಹಂತಕ್ಕೆ ಈ ತನಿಖೆ ಹೋಗಬಹುದು ಮತ್ತು ಮುಂದೆ ಇದಕ್ಕೆ ಸುಲಲಿತವಾಗಿ ದಾರಿ ಹುಡುಕಬಹುದು ಎಂದು ತಮಗೆ ಸಲಹೆ ಕೊಡುತ್ತೇನೆ. ತಾವು ಕೊಟ್ಟಿರುವುದು ಹೇಗಿದೆ ಎಂದರೆ, ತಮಗೆ ಗೊತ್ತಿದೆ, ಇಲ್ಲಿರುವಂತಹ ಎಲ್ಲರಿಗೂ ಗೊತ್ತಿದೆ. ಒಬ್ಬ ಪ್ರಸಿದ್ಧ ಪತ್ತೇದಾರಿ ಜೇಮ್ಸ್ ಬಾಂಡ್. Who is going to be the James Bond here? ಈಗ ಒಬ್ಬ ವ್ಯಕ್ತಿ ಮೂಲಕ ಎಲ್ಲವನ್ನೂ ಮಾಡಿಸುತ್ತೇವೆ ಎನ್ನುವಂತಹ ರೀತಿಯಲ್ಲಿ ಬಿಲ್ಲನ್ನು ತಂದಿದ್ದೀರಿ. ಖಂಡಿತ ಇದು ಬೇರೆ ಬೇರೆ ಹಂತದಲ್ಲಿ ಕೇಸ್ ನಡೆಯುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದೆ. ಸಿ.ಬಿ.ಐ. ಅನೇಕ ಪ್ರಕರಣಗಳ ಬಗ್ಗೆ ತನಿಖೆ ಮಾಡುತ್ತಿದೆ. ಲಕ್ಷಾಂತರ ಟನ್ ಅದಿರು ಸಂಗ್ರಹವಾಗಿ ಜಪ್ತಿ ಮಾಡುವಂತಿದ್ದರೂ ಇವತ್ತಿನವರೆಗೂ ಹರಾಜಾಗದೇ ಬೇರೆ ಬೇರೆ ಕಡೆಗಳಲ್ಲಿ ಅದಿರು ಬಿದ್ದಿದೆ. ಸರ್ಕಾರದ ಉದ್ದೇಶ ಸರಿಯಿರಬಹುದು. ಆ ಉದ್ದೇಶವನ್ನು ಈಡೇರಿಸುವಂತಹದ್ದಕ್ಕೆ ತಾವೇನು ಈ ಬಿಲ್ ಮೂಲಕ ಕ್ರಮಗಳನ್ನು ತರುತ್ತಿದ್ದೀರಿ this is not

sufficient. This has to be more concrete and more well-structured. ಮತ್ತು ಕಡೆಪಕ್ಷ ೮೦,೦೦೦ ಕೋಟಿ ರೂಪಾಯಿಗಳನ್ನು ಹುಡುಕಿಕೊಂಡು ಹೊರಟಿದ್ದೇವೆ, ಕಡೆಪಕ್ಷ ಶೇ.50ರಷ್ಟಾದರೂ ಸರ್ಕಾರಕ್ಕೆ ವಾಪಸ್ ತಂದರೆ ಖಂಡಿತ ಸರ್ಕಾರಕ್ಕೆ ಮತ್ತು ರಾಜ್ಯಕ್ಕೆ ಕಳೆದುಕೊಂಡಿರುವುದು ವಾಪಸ್ ಬಂದಂತಾಗುತ್ತದೆ, ದಯವಿಟ್ಟು ತಾವು ಇದರ ಕಡೆ ಗಮನ ಕೊಡಬೇಕು. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಕೂಡ ಗಣಿ ವಿಚಾರದಲ್ಲಿ ಬೇರೆ ಬೇರೆ ಅಕ್ರಮ ಗಣಿಗಾರಿಕೆ ಮಾಡಿರುವುದು ಕೂಡ ಇದೆ. ಅದನ್ನು ಪತ್ತೆ ಮಾಡುವಂತಹ ವಿಷಯದಲ್ಲಿ ಯಾವ ಗಣಿಬಾಧಿತ ಜಿಲ್ಲೆಗಳವೆ ಬಂದಂತಹ ಹಣದಲ್ಲಿ ಏನಾದರೂ ಆ ಹಣವನ್ನು ರಿಕವರಿ ಮಾಡಿದರೆ ದಯವಿಟ್ಟು KMERC (Karnataka Mining Environment Restoration Corporation) fund ಇದೆ ಸುಪ್ರೀಂ ಕೋರ್ಟ್ ಆದೇಶದ ತರಹದಲ್ಲಿ ಈ ಹಣವನ್ನು ಕೂಡ ಅಂತಹ ಜಿಲ್ಲೆಗಳಿಗೆ ಕೊಡಬೇಕು. ಸಂಗ್ರಹ ಮಾಡಿದ್ದನ್ನು ಬೇರೆ ಕಡೆಗೆ ಖರ್ಚು ಮಾಡಬೇಕೆನ್ನುವ ಯೋಜನೆ ಇದ್ದರೆ ದಯವಿಟ್ಟು ಅದನ್ನು ಬಿಡಿ. ಎಲ್ಲಿಂದ ಕಳ್ಳತನವಾಗಿದೆ ಆ ಹಣವನ್ನು ದಯವಿಟ್ಟು ಅಲ್ಲಿಗೆ ವಾಪಸ್ ಅಭಿವೃದ್ಧಿ ಕೆಲಸಗಳಿಗೆ ಕೊಡುವಂತಹ ಕೆಲಸ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ತಂದಿರುವ ಅಕ್ರಮ ಗಣಿಗಾರಿಕೆ ತಿದ್ದುಪಡಿ ವಿಧೇಯಕದ ಉದ್ದೇಶ ಚೆನ್ನಾಗಿದೆ. ತಮಗೂ ಗೊತ್ತಿದೆ, ತಾವು ಕೂಡ ಅನೇಕ ಘಟನೆಗಳಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾದಂತಹ ಸಂಪತ್ತನ್ನು ಲೂಟಿ ಮಾಡಿಕೊಂಡು ಅಕ್ರಮ ಗಣಿಗಾರಿಕೆಯಲ್ಲಿ ಯಾವ ಯಾವ ತರಹ ತಿಮಿಂಗಿಲಗಳು ತಪ್ಪಿಸಿಕೊಂಡು ಹೋಗುತ್ತಿರುವಂಥದ್ದನ್ನು ನಾವು ಗಮನಿಸಿದ್ದೇವೆ. ಆದರೆ 'ಸಿ' ಕೆಟಗರಿ ಮತ್ತು ಮೈನಿಂಗ್‌ಗೆ ಸಂಬಂಧಪಟ್ಟಂತೆ ಎಸ್.ಐ.ಟಿ. ಒಂದು 'ಬಿ' ರಿಪೋರ್ಟ್ ಕೊಟ್ಟಿದೆ. ಅದರ ಬಗ್ಗೆ ಅಂತಿಮ ತೀರ್ಪನ್ನು ಸಹ ನೀಡಿದ್ದಾರೆ. ಅಂತಹ ಪ್ರಕರಣಗಳಲ್ಲಿ ತಾವು ಅದನ್ನು ಕೈ ಬಿಡುತ್ತೀರಾ ಅಥವಾ ಈ ಕಾಯಿದೆಯಿಂದ ಅವರಿಗೆ ಯಾವುದೇ ತೊಂದರೆ ಆಗಬಾರದು. ಅದನ್ನು ತಾವು ಗಮನಿಸಬೇಕೆಂದು ಈ ಸಂದರ್ಭದಲ್ಲಿ ತಮಗೆ ನಾನು ಮನವಿ ಮಾಡುತ್ತಿದ್ದೇನೆ. ಜೊತೆಗೆ ಕೆಲವೊಮ್ಮೆ ಏನಾಗುತ್ತಿದೆ ಎಂದರೆ, ಅಕ್ರಮಗಳು ನಡೆಯುತ್ತವೆ. ಉದಾಹರಣೆಗೆ royalty ಅನ್ನು ಕಡಿಮೆ ಕಟ್ಟಿಸಿಕೊಂಡು ಪರ್ಮಿಟ್ ಕೂಡ ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಳ್ಳುತ್ತಾರೆ. ಅದಿರು ಸಾಗಿಸುತ್ತಿರುವಂತಹ ಪ್ರಕರಣಗಳನ್ನು ತಡೆಯುವ ಬಗ್ಗೆ ಕೆಲವೊಂದು ಕ್ರಮಗಳಾಗಬೇಕು. ಇದು ಸಮಿತಿ ಸಭೆಗಳಲ್ಲು ಕೂಡ ತಾವು P.A.C. (Public Accounts Committee) ಯಲ್ಲಿದ್ದಾಗಲೂ ಅಷ್ಟೇ, ಈಗ ಭರವಸೆ ಸಮಿತಿಯಲ್ಲಿದ್ದಾಗಲೂ ಅಷ್ಟೇ ಈ ಪ್ರಕರಣಗಳು ಮರುಕಳಸುತ್ತಲೇ ಇರುತ್ತವೆ. ಅದಕ್ಕೋಸ್ಕರ ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಯಾವ ಮಾರ್ಗಗಳನ್ನು ಹುಡುಕುತ್ತಾರೆ ಅಂತಹವರಿಗೂ ಕಡಿವಾಣ ಹಾಕಬೇಕಾಗುತ್ತದೆ. ಮುಖ್ಯವಾಗಿ royalty and permit ಕೊಡುವ ಬಗ್ಗೆ ಹೇಳುತ್ತಿದ್ದೇನೆ. ಅವೆರಡು ಕಡೆಗೆ ಕೂಡ ತಾವು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ. ಕೆಲವೊಮ್ಮೆ ಕೆಲವು ಅಧಿಕಾರಿಗಳು ಗ್ರಾನೈಟ್ ಭೂಮಿ ಇರುತ್ತದೆ, ಗ್ರಾನೈಟ್‌ನಲ್ಲಿ ಕೂಡ ಮಣ್ಣನ್ನು

ಲೆಕ್ಕ ಹಾಕುತ್ತಾರೆ. ಅದನ್ನು ಕೂಡ ತಡೆಯಬೇಕಾಗುತ್ತದೆ. ಅದರಲ್ಲು ಕೂಡ ಅಕ್ರಮ ನಡೆಯುತ್ತಿದೆ. ಅದನ್ನೂ ಕೂಡ ನೋಡಬೇಕೆಂದು ಮನವಿ ಮಾಡುತ್ತಿದ್ದೇನೆ. ಇದು ನಿಜವಾಗಲೂ ಕೂಡ ಸರ್ಕಾರಕ್ಕೆ revenue generate ಆಗುವುದಕ್ಕೆ ಒಳ್ಳೆಯ ಮಾರ್ಗವಾಗಿದೆ, ಜೊತೆಗೆ ಒಳ್ಳೆಯ ಮಸೂದೆಯನ್ನು ತಂದಿದ್ದೀರಿ ಅದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ The Karnataka Appointment of Recovery Commissioner for Seizure and Attachment of Property of Illegal Mining and Proceeds of Crime Bill, 2025 ಅನ್ನು wholeheartedly support ಮಾಡಿ ಸ್ವಾಗತ ಮಾಡುತ್ತೇನೆ. Unfortunately, ಏನಾಗಿದೆ ಎಂದರೆ ನಾನು ಬಳ್ಳಾರಿ ಜಿಲ್ಲೆಯವನು. ಈ ಘಟನೆಯಿಂದ ನಮಗೆ ಕಪ್ಪುಚುಕ್ಕೆಯಾಗಿಲ್ಲ, ನಾವೆಲ್ಲಾ ಕಪ್ಪಗಾಗಿದ್ದೇವೆ. ಕ್ಲೀನ್ ಆಗುವುದಕ್ಕೆ ಯಾವ ಸೋಪಿನಿಂದ ನಾನು ವಾಶ್ ಮಾಡಿಕೊಳ್ಳಬೇಕು ಎಂದು ನನಗೆ ಗೊತ್ತಿಲ್ಲ. Black mark ಅಲ್ಲ ನಾನು black ಆಗಿದ್ದೇನೆ. ಬಳ್ಳಾರಿ ನಮಗೆ ಅಷ್ಟು ಕೆಟ್ಟ ಹೆಸರು ತಂದಿದೆ. ಅದು ಒಂದು ಪಾರ್ಟ್. ಎರಡನೆಯದಾಗಿ, ಮಾನ್ಯ ಸಚಿವರು ಹೇಳಿದರು ಆಮೇಲೆ ಬೇಕಾದರೆ ಚರ್ಚೆ ಮಾಡೋಣ ಇಲ್ಲಿ ವಾದ ಮಾಡುವುದು ಬೇಡ. 'Because of political will we have brought this bill' ಎಂದು ಹೇಳಿದಿರಿ. You have brought this bill because of a Supreme Court order; let me clearly tell you. Because of a Supreme Court order telling that less than 50,000 tonnes...

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, let it be very clear to Hon. Member Mr. Satish that since my senior colleague Mr. Ivan D'Souza made an observation that this bill has come because of a Supreme Court order or some court order...

**ಶ್ರೀ ವೈ.ಎಂ. ಸತೀಶ್:-** ಹೌದು ನಾನು ಕೇಳಿದೆ.

**ಶ್ರೀ ಹೆಚ್.ಕೆ. ಪಾಟೀಲ್:-** ನಾನು ಏತಕ್ಕೆ ಕೋರ್ಟ್ ಆದೇಶವನ್ನು ಓದಿ ಹೇಳಿದೆ ಎಂದರೆ, ಈ ಪ್ರಕರಣ investigation ಏನು ಪ್ರಾರಂಭವಾಯಿತು ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಒಂದು ಆದೇಶ ಹೊರಡಿಸಿತು. 50,000 ಟನ್‌ಗಿಂತ ಹೆಚ್ಚು ಇದ್ದುದನ್ನು ಸಿ.ಬಿ.ಐ. investigate ಮಾಡಬೇಕು, 50,000 ಟನ್‌ಗಿಂತ ಕೆಳಗೆ ಇದ್ದುದನ್ನು ಕರ್ನಾಟಕ ರಾಜ್ಯ ಸರ್ಕಾರ investigate ಮಾಡಲಿ ಎಂದು ಆದೇಶ ಮಾಡಿತು. ಈ separation ಏತಕ್ಕೆ ಹೇಳಿದೆ ಎಂದರೆ, ಆ ಆದೇಶದ ನಂತರ 50,000ದ ಮೇಲಿನವರು ಯಾರು 'ಎ' ಕೆಟಗರಿನವರು ಯಾರು, 'ಬಿ' ಕೆಟಗರಿಯವರು ಯಾರು ಮತ್ತು 'ಸಿ' ಕೆಟಗರಿಯವರು ಯಾರು ಎನ್ನುವುದನ್ನು ಸಹ categorize

ಮಾಡಿದರು. ಆ categorize ಮಾಡಿದಂತಹ ಏನು 111 mining companies ಗಳು ಇದರಲ್ಲಿ ಬರುತ್ತವೆ ಎಂದು ಏನು ಕೋರ್ಟ್ ಆದೇಶವಾಗಿತ್ತು ಅದನ್ನು ಪ್ರಸ್ತಾಪ ಮಾಡದೇ ಇರುವಂಥದ್ದು ನನ್ನ ಕರ್ತವ್ಯ ಚ್ಯುತಿಯಾಗಬಾರದು ಎಂದು ಅದನ್ನು ಪ್ರಸ್ತಾಪ ಮಾಡಿದೆ. ಅದರ ಜೊತೆಗೆ ಹೇಳುವುದೇನೆಂದರೆ, ಇದಕ್ಕೆ ಕೋರ್ಟ್ ಆದೇಶಗಳಿಗೆ ಏನೂ ಸಂಬಂಧವಿಲ್ಲ. ಇದು ನಾವು ತೆಗೆದುಕೊಂಡಂಥ ನಿರ್ಣಯ. ಇದು ನಿಮಗೆ ಸ್ಪಷ್ಟವಿರಲಿ ಅಷ್ಟೇ.

(ಮುಂದು)

(944) 22.08.2025 12.20 ಹೆಚ್‌ವಿ.ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ವೈ.ಎಂ.ಸತೀಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಸನ್ಮಾನ್ಯ ಸಭಾಪತಿಯವರೇ, it is a matter of difference of opinion. ಮೂಲ ಇರುವುದು ಕೋರ್ಟ್ ಆದೇಶ I will come to this political will in my last statement. ವಿಧೇಯಕವನ್ನು ನಾನು ನೋಡಿದ್ದೇನೆ. “**3. Appointment of Recovery Commissioner. –**“ I am not a lawyer. In my little opinion, under Section.107 of BNSS-2023, appointment of Recovery Commissioner can only be a Magistrate or designated Civil Court. Therefore, appointing a retired Additional Chief Secretary or serving ACS cadre may not hold good. ಇದರಲ್ಲಿ ರಿಕವರಿ ಮಾಡಬೇಕೆಂದು ಇದೆ. ಈ clause ಇಟ್ಟುಕೊಂಡು ಯಾರಾದರು ಕೋರ್ಟಿಗೆ ಹೋಗಿ ಇದಕ್ಕೆ ತಡೆತರಬಹುದು ಎಂದು ನಾನು ಮಾನ್ಯ ಸಚಿವರನ್ನು ಎಚ್ಚರಿಸುತ್ತಿದ್ದೇನೆ. ಇದು ಕಾನೂನಾತ್ಮಕವಾಗಿ ಸರಿಯಾದ ಕ್ರಮವಾಗಿದೆ. ಸೆಕ್ಷನ್ 6ರಲ್ಲಿ, you have referred to the BNSS-2023 along with Criminal Law(Amendment) Ordinance, 1944. When I read the BNSS 2023 and Criminal Law (Amendment) Ordinance 1994, It very clearly state about the Recovery Commissioner According to Section.107, Recovery Commissioner should only be a designated Special Court, or he should be a Magistrate. Because this intention is good. ಈ flimsy grounds ಹಿನ್ನೆಲೆಯಲ್ಲಿ ಯಾರು ಅಕ್ರಮ ಗಣಿಗಾರಿಕೆ ಮಾಡಿದ್ದಾರೆ, they should not go scot-free ಎನ್ನುವುದು ನನ್ನ ಕಳಕಳಿಯಾಗಿದೆ. 50,000 ಟನ್‌ಗಳಿಗಿಂತ ಕಡಿಮೆ ಅದಿರನ್ನು ರಫ್ತು ಮಾಡುವವರಿಗೆ ಸಂಬಂಧಪಟ್ಟಂತೆ ಸದರಿ ವಿಧೇಯಕವನ್ನು ತರಲಾಗಿದೆ. ಸದರಿ ಕ್ರಮವನ್ನು ಒಪ್ಪಿಕೊಂಡು ನಾನು ಸ್ವಾಗತಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸದರಿ ವಿಧೇಯಕದಲ್ಲಿ “ಬಿ” ಕ್ಯಾಟಗರಿ ಅಥವಾ “ಸಿ” ಕ್ಯಾಟಗರಿ ಎನ್ನುವ ವರ್ಗೀಕರಣವನ್ನು ಮಾಡಿಲ್ಲ. ಅದರ ಬಗ್ಗೆಯೂ ನಾನು ಸ್ಪಷ್ಟೀಕರಣವನ್ನು ಕೇಳುತ್ತೇನೆ. List of offenders ಗಳ ಸಂಖ್ಯೆ ಎಷ್ಟು; ಯಾರ್ಯಾರು ಇದರಲ್ಲಿದ್ದಾರೆ, ಇದಕ್ಕೆ ಸಂಬಂಧಪಟ್ಟವರ ಪಟ್ಟಿ ಮಾನ್ಯ ಸಚಿವರಲ್ಲಿ ಲಭ್ಯವಿದೆಯೇ?

ಲಭ್ಯವಿದ್ದರೆ ಅದನ್ನು ಸದನದ ಗಮನಕ್ಕೆ ತರಬೇಕೆನ್ನುವುದು ನನ್ನ ಮನವಿಯಾಗಿದೆ. What is the percentage of penalty you are going to impose? Because, as per the CEC Report and Supreme Court observations in certain other mining matters, there is a penalty leviable of up to five times the value of illegal mining made. ದಂಡದ ಪ್ರಮಾಣ 5 ಪಟ್ಟು ಎಂದು ಇದೆ. ಸರ್ಕಾರ ಇದನ್ನು ಒಂದು ಪಟ್ಟು, ಎರಡು ಪಟ್ಟು ಅಥವಾ ಐದು ಪಟ್ಟು ವಿಧಿಸುತ್ತದೆಯೇ ಎನ್ನುವುದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಮಾನ್ಯ ಸಚಿವರು ಮಾತನಾಡುತ್ತಾ, ಈ ವಿಧೇಯಕವನ್ನು ತರುವ ಮೂಲಕ ಸುಮಾರು 80,000 ಕೋಟಿ ರೂಪಾಯಿಗಳಷ್ಟು ದಂಡವನ್ನು ಸಂಗ್ರಹ ಮಾಡಬಹುದು ಎನ್ನುವ ಮಾತನ್ನು ಹೇಳಿದ್ದಾರೆ. I don't think this Bill is there for recovery of 80,000 crores. This Bill is only for less than 50,000 tonnes out of which exporters for which CBI was given its.. ಸಿ.ಬಿ.ಐ.,ನವರು ತನಿಖೆ ಮಾಡುವುದಿಲ್ಲವೆಂದು ಹೇಳಿದ್ದಾರೆ. Now, coming to political will, ಕೊನೆಯದಾಗಿ, ನನ್ನ ಪ್ರಶ್ನೆ ಏನೆಂದರೆ, "ಸಿ" ಕ್ಯಾಟಗರಿ ಗಣಿಗಾರಿಕೆಯನ್ನು 2012-13ನೇ ಇಸವಿಯಲ್ಲಿ ವರ್ಗೀಕರಿಸಲಾಗಿದೆ. ಇದಕ್ಕೆ ಸಾಕಷ್ಟು ಪ್ರಕ್ರಿಯೆಗಳು ನಡೆದವು. "ಸಿ" ಕ್ಯಾಟಗರಿ ಗಣಿಗಾರಿಕೆಯಲ್ಲಿ ದಂಡವನ್ನು ಸಂಗ್ರಹ ಮಾಡುವ ಲಿಸ್ಟ್‌ನಲ್ಲಿ ಇದು ಸೇರಿದೆಯೇ ಅಥವಾ ಕೇವಲ 50,000 ಟನ್‌ಗಳಿಗಿಂತ ಕಡಿಮೆ ಅದಿರನ್ನು ರಫ್ತು ಮಾಡುವ ಗಣಿಗಾರಿಕೆಗಳು ಬರುತ್ತವೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ. ಸೆಕ್ಷನ್ 107 ಅನ್ನು ಮಾನ್ಯ ಸಚಿವರು ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, they should not go once again scot-free by finding some lacuna in this Bill. ಇಷ್ಟೇ ನನ್ನ ವಿನಂತಿಯಾಗಿದೆ.

**ಶ್ರೀ ಹೆಚ್.ಕೆ.ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎಂ.ಸತೀಶ್‌ರವರ ಕಳಕಳಿ ನನಗೆ ಅರ್ಥವಾಗಿದೆ. It is good. Thank you. ಅವರಿಗೆ ಉಂಟಾಗಿರುವ ಗೊಂದಲವೇನೆಂದರೆ, is this only for more than 50000 metric tonnes where CBI has enquired. ನಾನು ಸಿ.ಬಿ.ಐ., ಎಷ್ಟು ಪ್ರಕರಣಗಳನ್ನು ತನಿಖೆ ಮಾಡಿದೆ; ಎಷ್ಟು ಬಿಟ್ಟಿದೆ, ಅವರು ಯಾಕೆ ತನಿಖೆ ಮಾಡಿಲ್ಲ; ಎಷ್ಟು ಪ್ರಕರಣಗಳನ್ನು ವಾಪಸ್ಸು ಕಳುಹಿಸಿದ್ದಾರೆ ಎನ್ನುವ ವಿವರಗಳಿಗೆ ನಾನು ಹೋಗುವುದಿಲ್ಲ. ಸುಮಾರು 111 firms ಅಕ್ರಮ ಗಣಿಗಾರಿಕೆಯನ್ನು ಮಾಡಿವೆ. ಅದರಲ್ಲಿ "ಎ", "ಬಿ" ಮತ್ತು "ಸಿ" ಕ್ಯಾಟಗರಿಗೆ ಸೇರಿದಂತಹ ಗಣಿಗಾರಿಕೆಗಳು ಇವೆ. ನಂತರ ಎ ಕ್ಯಾಟಗರಿ ಗಣಿಗಾರಿಕೆಗಳನ್ನು ಕೈಬಿಡಲಾಯಿತು. Because they have not done anything of that sort ಎಂದು ಇರಬಹುದು ಅಥವಾ Governmental Company ಎಂದು ಕೈಬಿಡಲಾಯಿತು. ಆದರೆ, "ಬಿ" ಮತ್ತು "ಸಿ" ಕ್ಯಾಟಗರಿಯಡಿಯಲ್ಲಿ ಬರುವಂತಹ ಅಕ್ರಮ ಗಣಿಗಾರಿಕೆಗಳ ಬಗ್ಗೆ ತನಿಖೆ ನಡೆಸಬೇಕೆಂದಾಯಿತು. ಇದರ

ತನಿಖೆಯನ್ನು ರಾಜ್ಯ ಸರ್ಕಾರದ ಎಸ್.ಐ.ಟಿ., ವತಿಯಿಂದ ನಡೆಯಿತು; ಕೆಲವು ಪ್ರಕರಣಗಳನ್ನು ಸಿ.ಬಿ.ಐ.,ನಿಂದಲೂ ತನಿಖೆ ಮಾಡಲಾಯಿತು. ಆ 111 ಕಂಪನಿಗಳ ಪೈಕಿ ಹಲವಾರು ಕಂಪನಿಗಳ ಮೇಲೆ ಕೇಸ್ ದಾಖಲಾಯಿತು. ಇದು ತಮ್ಮೆಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ನಾನು ಆಗಲೇ ಓದಿ ಹೇಳಿದಂತಹ ಆದೇಶಗಳನ್ವಯ ರಿಕವರಿ ಕಮೀಶನ್ ಎಲ್ಲ 111 ಕಂಪನಿಗಳಿಗೆ ಸಂಬಂಧಪಟ್ಟಂತೆ ಇವರಗಳ ಮೇಲೆ ತನಿಖೆ ನಡೆಯಬೇಕು ಮತ್ತು ಕ್ರಮ ಜರುಗಿಸಬೇಕೆಂದು ಸರ್ಕಾರ ಮಾಡಿರುವಂತಹ ಆದೇಶಗಳಾಗಿವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವಂತಹ We have taken into consideration Section.107 of BNSS 2023 very seriously. We have deliberated and we have taken care of that. ಸುಪ್ರೀಂ ಕೋರ್ಟ್ ದಿನಾಂಕ: 16.09.2013ನೇ ಇಸವಿಯಲ್ಲಿ ಹೊರಡಿಸಿದಂತಹ ಆದೇಶದಲ್ಲಿ cases have been handed over to CBI and SIT ಎಂದು ಮಾತ್ರವಿದೆ. This measure is not for investigation. This is an additional measure by the State Government for recovey. We are not allowing or intending to make Recovery Officer to penalize, put penalty or late... ಹಿಂದೆ ನಮ್ಮ ರಾಜ್ಯದ ಆಸ್ತಿ ಏನು ಹೊರಗಡೆಗೆ ರಫ್ತಾಗಿದೆ, ಅದನ್ನು ವಾಪಸ್ಸು ತೆಗೆದುಕೊಂಡು ಬರಬೇಕೆನ್ನುವುದು ಈ ವಿಧೇಯಕದ ಮೂಲ ಉದ್ದೇಶವಾಗಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ. Criminal Law (Amendment) Ordinance,1944 ಅನ್ನು ಉಲ್ಲೇಖ ಮಾಡಿದ್ದಾರೆ. ಇದನ್ನು ಬ್ರಿಟೀಷ್‌ನವರು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಜಾರಿಗೆ ತರಲಾಗಿದೆ. ಒಂದು ಕ್ರಿಮಿನಲ್ ಲೂಟಿ ಅಥವಾ ಕಳವು ಆಗಿರಬಹುದು. ಉಹಾಹರಣೆಗೆ ಹೇಳಬೇಕಾದರೆ, ಯಾರೋ ಒಬ್ಬ ಬಂಗಾರವನ್ನು ಕಳ್ಳತನ ಮಾಡಿಕೊಂಡು ಹೋದರೆ, ನಮಗೆ ಆತನನ್ನು ಹಿಡಿದು ಜೈಲಿಗೆ ಹಾಕುವ ಕಡೆಗೆ ಮಾತ್ರ ನಮ್ಮ ಗಮನವಿರುವುದಿಲ್ಲ, ಇದರ ಜೊತೆಗೆ ಅವನು ಕದ್ದ ಬಂಗಾರವನ್ನು ರಿಕವರಿ ಮಾಡಬೇಕೆನ್ನುವ ಕಡೆಯೂ ಗಮನವಿರುತ್ತದೆ. ಕೆಲವೊಮ್ಮೆ ಆ ಬಂಗಾರ ಆಭರಣದ ರೂಪವನ್ನು ಪಡೆದುಕೊಂಡಿರುತ್ತದೆ ಅಥವಾ ಕೆಲವೊಮ್ಮೆ ಆಭರಣವಾಗಿರುವುದು ಗಟ್ಟಿಯಾಗಿರುತ್ತದೆ. ಆ ಬಂಗಾರದ ಗಟ್ಟಿಯನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. That is criminal proceeds. ಅಕ್ರಮವಾಗಿ ಅದಿರನ್ನು ತೆಗೆದಿರುವವನು ಎಲ್ಲಿಯೋ ಮಾರಾಟ ಮಾಡಿರುತ್ತಾನೆ. ಆ ಹಣವನ್ನು ಮಲೇಷಿಯಾ ಅಥವಾ ಅಮೆರಿಕಾ ರಾಷ್ಟ್ರಗಳಲ್ಲಿ ಬಂಡವಾಳದ ರೂಪದಲ್ಲಿ ಹೂಡಿಕೆ ಮಾಡಿರಬಹುದು. How can we reach there? And to reach all that type of situation this, a Recovery Commissioner is being appointed. This is for all illegal mined firms ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಿಗೆ ಸ್ಪಷ್ಟನೆಯನ್ನು ನೀಡುತ್ತಿದ್ದೇನೆ.

**ಶ್ರೀ ವೈ.ಎಂ.ಸತೀಶ್:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಆ ಅಕ್ರಮ ಅದಿರನ್ನು ರಿಕವರಿ ಮಾಡುವುದಷ್ಟೇ ಅಲ್ಲ, ಅಂತಹ ಕಂಪನಿಗಳ ಮೇಲೆ ದಂಡ ವಿಧಿಸಬೇಕಾಗುತ್ತದೆ, ಈಗ ತಾನೇ ಮಾನ್ಯ ಸಚಿವರು

ಬಂಗಾರದ ಉದಾಹರಣೆಯನ್ನು ನೀಡಿದ್ದಾರೆ. Don't concentrate on recovering only whatever illegally mined. Then what is a penalty? Tomorrow somebody else will say illegally mined and pay whatever illegally mined.

**ಶ್ರೀ ಹೆಚ್.ಕೆ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, this Bill is only for recovering the criminal proceeds. ದಂಡವನ್ನು ಸರ್ಕಾರ ಹಾಕಬಹುದು.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಮಾತನಾಡಲು ಅವಕಾಶವನ್ನು ನೀಡಿದ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ಸಚಿವರು ಬಹಳ ಉತ್ತಮವಾಗಿರುವ ವಿಧೇಯಕವನ್ನು ತಂದಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಕಪ್ಪು ಮಸಿ ಬಳಿದಿರುವಂತಹ ಅನೇಕ ಪ್ರಕರಣಗಳು ನಡೆದಿವೆ. (ಮುಂದು)

(945) 22.8.2025 12.30 ಪಿಕೆ:ಆರ್ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್(ಮುಂದು)**

ಮಾನ್ಯ ಸಚಿವರು, ಸುಮಾರು ರೂ. 80 ಸಾವಿರ ಕೋಟಿಯಷ್ಟು ಸರ್ಕಾರಕ್ಕೆ ನಷ್ಟವಾಗಿದೆ ಎಂಬ ಮಾತನ್ನು ಹೇಳಿದರು. ಅಕ್ರಮವಾಗಿ ಹೊರ ರಾಜ್ಯಗಳಿಗೆ, ಹೊರ ದೇಶಗಳಿಗೆ ಕಬ್ಬಿಣದ ಅದಿರು ಹೋಗಿದೆ ಎನ್ನುವುದನ್ನು ಹೇಳಿದರು. ಇದು ಕೆಲವರಿಗೆ ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ, ಅಧಿಕಾರಿಗಳಿರಬಹುದು, ರಾಜಕಾರಣಿಗಳಿರಬಹುದು, ಮಂತ್ರಿಗಳಿರಬಹುದು, ಎಂಎಲ್‌ಎಗಳು ಇರಬಹುದು, ಈ ವಿಷಯದಲ್ಲಿ ಕರ್ನಾಟಕ ಒಂದು ರೀತಿಯಲ್ಲಿ ತೆರೆದ ಪುಸ್ತಕವಾಗಿದೆ. Hidden ಪುಸ್ತಕ ಕೂಡ ಸಾಕಷ್ಟು ಇದೆ. ಆದರೆ ಅದರ ಬಗ್ಗೆ ಗೊತ್ತಿಲ್ಲ. ರೂ. 80 ಸಾವಿರ ಕೋಟಿಯ ಬಗ್ಗೆ ವಿವರಿಸುವುದಕ್ಕೆ ಎಷ್ಟು ಸಾಧ್ಯವಾಗುತ್ತದೆ? ಈ ವಿಷಯದಲ್ಲಿ ಒಂದಿಷ್ಟು ಗೊತ್ತಿದೆ; ಬಹಳಷ್ಟು ಗೊತ್ತಿಲ್ಲ. ಇದರಲ್ಲಿ ಹಾಲಿ, ಮಾಜಿ ಮಂತ್ರಿಗಳು ಇರಬಹುದು, ಹಾಲಿ ಮತ್ತು ಮಾಜಿ ಶಾಸಕರಿರಬಹುದು ಅಥವಾ ಅಧಿಕಾರಿಗಳೂ ಸಹ ಇರಬಹುದು. ಇದೊಂದು ದೊಡ್ಡ ಜಾಲವಾಗಿದೆ. ಮಂತ್ರಿಗಳು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಕ್ಯಾಬಿನೆಟ್‌ನಲ್ಲಿ ಸಾಕಷ್ಟು ಚರ್ಚೆ ಆಯಿತು. ಇದು ದೊಡ್ಡ ವಿಷಯವಾಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತಂದಿರುವುದು ಬಹಳ ಒಳ್ಳೆಯ ವಿಚಾರವಾಗಿದೆ. ಕಮಿಷನರ್ ಅವರಿಗೆ ಎಷ್ಟು ಪವರ್ ಕೊಟ್ಟಿದ್ದೀರಿ ಎನ್ನುವುದನ್ನು ಈ ವಿಧೇಯಕದಲ್ಲಿ ನೋಡುತ್ತಿದ್ದೆ. ಅದರಲ್ಲಿ ಅನೇಕ ಬಿಂದುಗಳಿವೆ. "ವಸೂಲಾತಿ ಆಯುಕ್ತರ ಅಧಿಕಾರಗಳು ಮತ್ತು ಕರ್ತವ್ಯಗಳು" ಎನ್ನುವ ವಿಷಯದಲ್ಲಿ ನೋಡಿದರೆ ಅವರಿಗೆ ಸಾಕಷ್ಟು ಪವರ್ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಗಳೆ, ಶ್ರೀ ಟಿ.ಎನ್.ಶೇಷನ್ ತರಹದ ಒಬ್ಬ ಅಧಿಕಾರಿ ಇದ್ದರೆ ಸಾಕಾಗುತ್ತಿತ್ತು. ಆದರೆ, ಇವತ್ತಿನ ವ್ಯವಸ್ಥೆಯಲ್ಲಿ ಬಹಳಷ್ಟು ಫೇಸ್ ಮಾಡಬೇಕಾಗುತ್ತದೆ. ಬಹಳಷ್ಟು ಎಂದು ಹೇಳಿದರೆ, ಅವನಿಗೆ ಧೈರ್ಯ ಕೂಡ ಬೇಕಾಗುತ್ತದೆ. ಆತನಿಗೆ ಫೋರ್ಸ್ ಬೇಕಾಗುತ್ತದೆ. ಈ ವಿಷಯ ಅಷ್ಟು ಸುಲಭದ ಮಾತಲ್ಲ. ಈ ವಿಧೇಯಕ ಬಹಳ ಚೆನ್ನಾಗಿದೆ. ಆದರೆ, ಆ ಜಾಗದಲ್ಲಿ ಕುಳಿತುಕೊಂಡು ನಿಭಾಯಿಸುವುದು ಸುಲಭವಲ್ಲ. ಒಂದು

ಫೋನ್ ಅಟೆಂಡ್ ಮಾಡುವುದಕ್ಕೆ ಆಗುವುದಿಲ್ಲ. ಬಿ.ಪಿ.ರೈಸ್ ಆಗುತ್ತದೆ. ಹಾರ್ಟ್ ಅಟ್ಯಾಕ್ ಕೂಡ ಆಗಬಹುದು. ಇಷ್ಟೊಂದು ದೊಡ್ಡ ವಿಷಯ ಇದರೊಳಗೆ ಇದೆ. ಮಾನ್ಯ ಸದಸ್ಯರಾದ ನವೀನ್‌ರವರು ಮಾತನಾಡುವಾಗ ಒಂದು ಒಳ್ಳೆಯ ವಿಚಾರವನ್ನು ಹೇಳಿದರು. ಒಬ್ಬರು ಅಧಿಕಾರಿ ಬೇಡ, ಪ್ಯಾನಲ್ ಮಾಡಿ. 3-4 ಜನರ ಒಂದು ಪ್ಯಾನಲ್ ಮಾಡಿ. ಅಧಿಕಾರಿ ದೇವರಲ್ಲ.

**ಶ್ರೀ ಹೆಚ್.ಕೆ.ಪಾಟೀಲ( ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಈ ವಿಷಯದಲ್ಲಿ ಗೊಂದಲ ಬೇಡ. There will be Recovery Officer, he will be assisted by Assistant Recovery Officers and Joint Recovery Officers. This Act enables him to get his Assistant Officers also enrolled. I can only say that Recovery Officer under clause 14(4) will not be alone, he will be assisted by other officers and the paraphernalia staff.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ನಾನು ಇನ್ನು ಸ್ವಲ್ಪ ಕ್ಲ್ಯಾರಿಫಿಕೇಷನ್ ಕೇಳುವುದಿದೆ. ಇನ್ನೊಂದು ಚೂರು ವಿಸ್ತಾರವಾದ ಕ್ಲ್ಯಾರಿಫಿಕೇಷನ್ ಬೇಕು. ಕ್ಯಾಬಿನೆಟ್‌ನಲ್ಲಿ ಮುಖ್ಯಮಂತ್ರಿಗಳೇ ಎಲ್ಲವನ್ನು ನಿರ್ಧಾರ ಮಾಡುವುದಿಲ್ಲ, ಸಂಬಂಧಪಟ್ಟ ಸಚಿವರೂ ಕೂಡ ಇರುತ್ತಾರೆ. ಈ ರೀತಿ, ಅಲ್ಲಿ ಏನಾದರೂ ಪ್ಯಾನಲ್ ಇದೆಯೇ? ಆ ತರಹದ 4 ಜನರ ಪ್ಯಾನಲ್ ಮಾಡಿ. ಅಲ್ಲಿ ಏನೇ ಆದರೂ ಗೊತ್ತಾಗಬೇಕು. ಒಳ್ಳೆಯದಾದರೂ ಗೊತ್ತಾಗಬೇಕು; ಕೆಟ್ಟದ್ದಾದರೂ ಗೊತ್ತಾಗಬೇಕು. 3-4 ಜನರ ಪ್ಯಾನಲ್ ಮಾಡಿ. ಈ ಅಧಿಕಾರಿಗೆ Judicial ಗೆ ಇರುವಂತಹ ಪವರ್ಸ್ ಕೊಟ್ಟಿದ್ದೀರಿ. Raid ಮಾಡಬಹುದು, ವಶಪಡಿಸಿಕೊಳ್ಳಬಹುದು, ನೋಟಿಸ್ ಕೊಡಬಹುದು. ಮಾನ್ಯ ಸಭಾಪತಿಗಳೆ, ಒಂದು ಒಳ್ಳೆಯ ಕೆಲಸ ಮಾಡಬೇಕಾದರೆ ಹತ್ತು ಹೆಜ್ಜೆ ಹಿಂದೆ ಹೋಗಿ negatives ಏನಾಗಬಹುದು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಒಬ್ಬ ಕೆಟ್ಟ ಅಧಿಕಾರಿ ಇದ್ದ ಎಂದಿಟ್ಟುಕೊಳ್ಳಿ. ಆತ ಕೆಲವು ನೋಟಿಸ್ ಕೊಡಬಹುದು. ತನಗೆ ಬೇಕಾಗಿರುವ ಎಲ್ಲಾ ಕೆಲಸವನ್ನು ಮಾಡಿಸಿಕೊಳ್ಳಬಹುದು. ಆದರೆ ಒಬ್ಬ ಪ್ರಾಮಾಣಿಕ ಅಧಿಕಾರಿ ತಾನೇ ನೋಟಿಸ್ ಕೊಡುತ್ತಾನೆ, ರೇಡ್ ಮಾಡಿ ವಶಪಡಿಸಿಕೊಳ್ಳುತ್ತಾನೆ. ಶ್ರೀ ಟಿ.ಎನ್.ಶೇಷನ್‌ರವರು ಚುನಾವಣಾ ವ್ಯವಸ್ಥೆಯಲ್ಲಿ ಏನು ಕ್ರಾಂತಿ ಮಾಡಿದರೋ ಅವರ ಹೆಸರು ಶಾಶ್ವತವಾಗಿ ಉಳಿಯಿತು. ಆ ರೀತಿಯ ಕೆಲಸ ಮಾಡಿದರೆ ಮಾತ್ರ ಆ ರೀತಿ ಹೆಸರು ಉಳಿಯುತ್ತದೆ. ಮಾನ್ಯ ಬಾಬ ಸಾಹೇಬ್ ಅಂಬೇಡ್ಕರ್‌ರವರ, ಗಾಂಧೀಜಿಯವರ, ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಹೆಸರು ಶಾಶ್ವತವಾಗಿರುತ್ತದೆ. ಯಾವುದೇ ಕಲ್ಮಶ ಇಲ್ಲದೇ ಅವರು ಆ ರೀತಿ ಸಾಮಾಜಿಕ ಕೆಲಸ ಮಾಡಿದ್ದರು. ಮಾನ್ಯ ಸಚಿವರು ಪವಿತ್ರವಾದ ಕೆಲಸವನ್ನು ಮಾಡಲಿಚ್ಛಿಸಿದ್ದಾರೆ. ನೀವು ಆ ರೀತಿಯ ಬದಲಾವಣೆಯನ್ನು ತನ್ನಿ. ನಾನು ಅನೇಕ ಸಲ ಬಳ್ಳಾರಿಗೆ ಹೋದಾಗ, ನಮ್ಮ ಕಾರ್ಯಕರ್ತರ ಜೊತೆ ಹುಡುಗಾಟಿಕೆಯಲ್ಲಿ ಮಾತನಾಡಬೇಕಾದರೆ, ಬಳ್ಳಾರಿ ಎಂದರೆ ಕೇವಲ ಬಿಸಿಲು ಅಲ್ಲ, ಬಳ್ಳಾರಿ ಎಂದರೆ ಬಹಳಷ್ಟು ಜನರಿಗೆ ಬೆವರು ಇಳಿಸಿದೆ, ಬಹಳಷ್ಟು ಜನರಿಗೆ ಬುದ್ಧಿ ಕಲಿಸಿದೆ, ಬಹಳಷ್ಟು

ಜನರಿಗೆ ದಾರಿ ತಪ್ಪಿಸಿದೆ ಎಂದು ಹೇಳುತ್ತಿದ್ದೆ. ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿಯಿಂದ ಬದಲಾವಣೆ ಆಗಿಲ್ಲವೇ? Negatives ಆಗಿವೆ, positives ಆಗಿವೆ, ಬಳ್ಳಾರಿಯ ಕಾರಣದಿಂದ ಸರ್ಕಾರಗಳೇ ಉಲ್ಟಾ-ಪಲ್ಟಾ ಆಗಿವೆ. ಬಳ್ಳಾರಿ ಎಂದು ಹೇಳಿದರೆ ಬದಲಾವಣೆ. ಏಕೆ ಬದಲಾವಣೆಯಾಯಿತು ಎಂದರೆ ಅಲ್ಲಿ ಹಾಗೆ ನಡೆದು ಹೋಯಿತು. ಇದನ್ನು ಇನ್ನೊಂದು ಸಲ ಪರಿಶೀಲನೆ ಮಾಡಿ. 4 ಜನರ ಪ್ಯಾನಲ್ ತೆಗೆದುಕೊಂಡು ಬನ್ನಿ. ಅವರಿಗೆ ಕೊಟ್ಟಿರುವ ಪವರ್ಸ್ ಚೆನ್ನಾಗಿದೆ. ಅಲ್ಲಿ ಏನೇ ನಡೆದರೂ ಪಾರದರ್ಶಕವಾಗಿ ಹೊರಗಡೆ ಗೊತ್ತಾಗಬೇಕು. ಈ ವಿಧೇಯಕ ಚೆನ್ನಾಗಿದೆ. ಆ ತರಹದ ಒಂದು ಪ್ಯಾನಲ್ ಅನ್ನು ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇದರಲ್ಲಿ ಬಹಳ ದೊಡ್ಡವರಿದ್ದಾರೆ. ಸಣ್ಣ ಕುಳಗಳಲ್ಲ. ಅಂತಾರಾಷ್ಟ್ರೀಯ ಮಟ್ಟದವರಿದ್ದಾರೆ. ಇಲ್ಲಿ ನೂರು ರೂಪಾಯಿ ಅಥವಾ ಸಾವಿರ ರೂಪಾಯಿಗಳ business ಮಾಡುವವರಿಲ್ಲ. ಕೋಟಿ ಕೋಟಿಗಟ್ಟಲೆ, ಹಡಗು ಮುಳುಗಿಸುವವರು ಇದರೊಳಗೆ ಇದ್ದಾರೆ. ಇದಕ್ಕೆ, ಎದೆಗಾರಿಕೆಯ ಇರುವಂತಹ, ಚೆನ್ನಾಗಿ ಬಲ್ಲಂತಹ 4ಜನರ ಪ್ಯಾನಲ್ ಮಾಡಿ. ಧನ್ಯವಾದಗಳು.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಈ ಸರ್ಕಾರ ಬಂದು ಎರಡೂವರೆ ವರ್ಷಗಳಾಯಿತು. ಸರ್ಕಾರ ಬಂದ 3 ತಿಂಗಳ ಒಳಗೆ ಇದಾಗುತ್ತದೆ ಎಂದುಕೊಂಡಿದ್ದೆ. ಇಷ್ಟೊಂದು ತಡ ಏಕೆ ಮಾಡಿದಿರಿ ಎನ್ನುವ ಪ್ರಶ್ನೆ ನನ್ನ ಮುಂದಿದೆ. ಇಲ್ಲಿ ಹರ್ಷದ್ ಮೆಹತಾ ಉದಾಹರಣೆಯನ್ನು ಕೊಟ್ಟರು. ಅದು ಸ್ಟಾಕ್ ಮಾರ್ಕೆಟ್‌ಗೆ ಸಂಬಂಧಪಟ್ಟಿದ್ದಾಗಿತ್ತು. ಆ ಸ್ಟಾಕ್ ಮಾರ್ಕೆಟ್‌ನ ಸ್ಟಾಕ್ ಅನ್ನು ಬ್ಯಾಂಕಿನಲ್ಲಿಟ್ಟು ಹಣ ತೆಗೆದುಕೊಂಡಿದ್ದ. ರೂ. 80 ಸಾವಿರ ಕೋಟಿ ಅದಿರು ಎಂದರೆ, ಅದನ್ನು ಅವರು ಮಾರಿ ದುಡ್ಡು ಮಾಡಿಕೊಂಡಿದ್ದಾರೋ, ರಫ್ತು ಮಾಡಿದ್ದಾರೋ, liquidate ಮಾಡಿದ್ದರೆ ಯಾವ ರೂಪದಲ್ಲಿ ಇದೆ ಎನ್ನುವುದು ಎಲ್ಲಾ ಕಡೆ ಗೋಚರವಾಗಿತ್ತು. ಆದರೂ ಈ ನಿಟ್ಟಿನಲ್ಲಿ ಮುಂದುವರೆಯಲ್ಲಿ ರಾಜ್ಯ ಸರ್ಕಾರದ ಕೈಗಳನ್ನು ಯಾರು ಕಟ್ಟಿಹಾಕಿದ್ದರು ಎನ್ನುವುದಕ್ಕೆ ನನಗೆ ಉತ್ತರ ಬೇಕು. ನೀವು ಇದನ್ನು permanent institution framework ತೆಗೆದುಕೊಂಡು ಹೋಗುತ್ತಿದ್ದೀರಿ. Permanent institution framework ಗೆ 6 ತಿಂಗಳು ತೆಗೆದುಕೊಳ್ಳುತ್ತೀರಿ. ಅದು ಕೆಲಸ ಚಾಲನೆ ಮಾಡಬೇಕು ಎಂದು ಬಯಸಿದ್ದರೆ ಇದನ್ನು ಇನ್ನೂ ಬೇಗ ಮಾಡಬೇಕಾಗಿತ್ತು. ಅಂದರೆ ಒಂದೇ ತಿಂಗಳ ಒಳಗೆ ಹಣ ಕೊಟ್ಟು, ಬೇಕಾದ ಸಿಬ್ಬಂದಿಯನ್ನು ಕೊಡಬೇಕಾಗಿತ್ತು. ನಿಮ್ಮ ಇಚ್ಛಾಶಕ್ತಿ ಗಟ್ಟಿ ಇದ್ದರೆ ಈ ವಿಧೇಯಕದಲ್ಲಿ ತೋರಿಸಬೇಕಾಗಿತ್ತು. ಸರ್ಕಾರ ಇಷ್ಟು ದೊಡ್ಡ ಮೊತ್ತದ ಹಣವನ್ನು ರಿಕವರಿ ಮಾಡುವುದಕ್ಕೆ ಹೋಗುತ್ತಿದೆ. ಹಣ ಹಣದ ಸ್ವರೂಪದಲ್ಲೇ ಇರುವುದಿಲ್ಲ. ನೀವು ಚಿನ್ನದ ಉದಾಹರಣೆಯನ್ನು ಕೊಟ್ಟಿದ್ದೀರಿ. ಹಣ ಹಣದ ಸ್ವರೂಪದಲ್ಲಿ ಇಲ್ಲದೇ ಇದ್ದರೆ ಅದು ನಿಮ್ಮ ಕೈ ಹತ್ತದೇ ಇರುವ ಸಾಧ್ಯತೆಗಳು ಇರುತ್ತವೆ. ಹಾಗಾಗಿ ಸರ್ಕಾರ ಇಚ್ಛಾಶಕ್ತಿಯ ಜೊತೆ ವಾಸ್ತವಿಕತೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕು. permanent institution framework ತರುವುದಕ್ಕೆ, ಮೂಲಸೌಕರ್ಯ, ಅದಕ್ಕೆ ಬೇಕಾದ ಸಂಪನ್ಮೂಲವನ್ನು ದಿಢೀರ್ ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು)

(946) 22-8-2025 12.40 ಡಿಎಸ್-ಆರ್‌ಎನ್ (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ವೈಸ್ ಛೇರ್ಮನ್:-** ಕ್ಲಾರಿಫಿಕೇಶನ್ ಮಾತ್ರ ಕೇಳಿ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, for the recovery of the illegal mining assets, in whatever form it has been transferred, ಇದಕ್ಕೆ ಸೀಮಿತವಾಗಿ ಈ ಕಾಯ್ದೆಯನ್ನು ತಂದಿದ್ದಾರೆ. ರಿಕವರಿ ಸಲುವಾಗಿ ಈ ಕಾಯ್ದೆಯನ್ನು ತಂದಿದ್ದಾರೆ. ಅದಕ್ಕೆ ಸ್ವಾಗತವನ್ನು ಬಯಸಿದ್ದೇನೆ. ಈಗ ಎಷ್ಟು ಪ್ರಕರಣಗಳಿವೆ, ಎಷ್ಟೆಷ್ಟು ಅಸೆಟ್ ಇದೆ ಎನ್ನುವಂತಹ ನಿರ್ದಿಷ್ಟವಾದ account ಸರ್ಕಾರದ ಹತ್ತಿರ ಇದೆಯೇ? You have given all the powers to the Recovery Commissioner to have a powers of Civil Court. ರಿಕವರಿ ಮಾಡುವುದಕ್ಕೆ, ಇನ್ಸ್‌ಪೆಕ್ಷನ್ ಮಾಡುವುದಕ್ಕೆ, ಕಮೀಷನರ್ ನೇಮಿಸುವುದಕ್ಕೆ as per this Act, you have given Recovery Commissioner to have all the powers to Civil Court. ಸರಿ ಇದೆ. Cases pending before all the Civil Court concerning these aspects, ಅವೆಲ್ಲಾ ಇಲ್ಲಿಗೆ ವರ್ಗಾವಣೆ ಆಗುತ್ತದೆಯೇ ಎನ್ನುವಂಥದ್ದು. ವರ್ಗಾವಣೆ ಮಾಡುವಂತಹ ಪ್ರಾವಿಷನ್ ಹಾಕಿದ್ದಾರೆ. Henceforth ಯಾವ್ಯಾವ ಪ್ರಕರಣಗಳಿವೆ ಅವು ಅಲ್ಲಿ ನಡೆಯುವುದಿಲ್ಲ, before this office ಅವು ನಡೆಯಬೇಕು ಎನ್ನುವಂಥದ್ದನ್ನು ಹೇಳಿದ್ದಾರೆ. ಆದರೆ ಆ ಪ್ರಕರಣಗಳಲ್ಲಿ evidence record ಆಗುವಂಥದ್ದು, ಅಲ್ಲಿ ಬೇರೆ ಬೇರೆ stages ಗಳು ಇದ್ದಂತಹ ಮ್ಯಾಟರ್‌ಗಳ ಬಗ್ಗೆ ಅವುಗಳಿಗೆ ಸ್ವಲ್ಪ ಸ್ಕೋಪ್ ಕೊಡುತ್ತಾರೆಯೇ, ಪೂರ್ತಿ ಆಗದಂತಹ ಸಂದರ್ಭದಲ್ಲಿ ಅವುಗಳ process ಮುಗಿಯಲಿ, ಇಂತಹ ಪ್ರಕರಣಗಳು ಮಾತ್ರ ಈ ಕಡೆ ಬರಬೇಕೆನ್ನುವ ಅವಕಾಶ ಸರ್ಕಾರದ ಯೋಚನೆಯಲ್ಲಿ ಇದೆಯೇ ಎನ್ನುವಂಥದ್ದು. ಈಗ ಈ Act ನ Preamble ನಲ್ಲಿ ಹೇಳಿದ ಹಾಗೆ 2006 ರಿಂದ 2012 ರವರೆಗೆ ಆದಂತಹ ಲೂಟಿ ಆಗಿರುವ ಪ್ರಕರಣಗಳ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಈಗಾಗಲೇ 13 ವರ್ಷಗಳಾಗಿವೆ. Any how late better than ever. ಮಾನ್ಯ ಕೇಶವ ಪ್ರಸಾದ್‌ರವರು ಹೇಳಿದ ಹಾಗೆ, ಸರ್ಕಾರದ ಇಚ್ಛಾಶಕ್ತಿ ಬಗ್ಗೆ ನಮಗೂ ಅಪೇಕ್ಷೆ ಇದೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಹಿಂದೆ ಅವರು ಐದು ವರ್ಷಗಳನ್ನು ಕಳೆದಿದ್ದಾರೆ. ಈಗಾಗಲೇ ಮಾಡುತ್ತಿದ್ದಾರೆ, ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಆದರೆ ಇಲ್ಲಿ sand mining ಯಾವುದೂ ಇಲ್ಲ ಎಂದು ಹೇಳಿದ್ದಾರೆ. ನನಗೆ ಅನುಮಾನ ಬರುವಂಥದ್ದೇನೆಂದರೆ, political will ಬಗ್ಗೆ ಮಾನ್ಯ ರವಿಕುಮಾರ್‌ರವರು ಹೇಳಿದ್ದಾರೆ. ದುರುಪಯೋಗವಾಗುವಂಥದ್ದು, ಅಲ್ಲಲ್ಲಿ harassment ಆಗುವಂತಹ ಪರಿಸ್ಥಿತಿ once again create ಆಗಲಾರದ ಹಾಗೆ ನೋಡಿಕೊಳ್ಳುವಂತಹ ಜವಾಬ್ದಾರಿ ಸರ್ಕಾರದ ಮೇಲೆ ಇದೆ ಎಂದು ನಾನು ಭಾವಿಸುತ್ತಿದ್ದೇನೆ.

**ವೈಸ್ ಛೇರ್ಮನ್:-** ಮಾನ್ಯ ಎಚ್.ಕೆ.ಪಾಟೀಲ್‌ರವರೇ, ತಾವು ಎಲ್ಲರಿಗೂ ಆಗಾಗ್ಗೆ ಉತ್ತರವನ್ನು ಹೇಳಿದ್ದೀರಿ.

**ಶ್ರೀ ಎಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು) (ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು, ಮಾನ್ಯ ಕೆ.ಎಸ್.ನವೀನ್‌ರವರು, ಮಾನ್ಯ ಶರವಣರವರು, ಮಾನ್ಯ ವೈ.ಎಂ.ಸತೀಶ್‌ರವರು, ಮಾನ್ಯ ಎನ್.ರವಿಕುಮಾರ್‌ರವರು, ಮಾನ್ಯ ಕೇಶವ ಪ್ರಸಾದ್‌ರವರು, ಮಾನ್ಯ ಪಿ.ಹೆಚ್.ಪೂಜಾರ್‌ರವರು, ಇವರೆಲ್ಲಾ ಈ ವಿಧೇಯಕದ ಬಗ್ಗೆ ತಮ್ಮ ವಿಶೇಷವಾಗಿರುವಂತಹ ಸಲಹೆ-ಸೂಚನೆಗಳನ್ನು ನೀಡಿದ್ದಾರೆ. ನಾನು ಒಂದು ಕಾರಣಕ್ಕಾಗಿ ಎಲ್ಲರಿಗೂ ವಿಶೇಷವಾದಂತಹ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅವರೆಲ್ಲರ ಮನಸ್ಸು ಏನಿದೆ, ಅವರ intention ಏನಿದೆ, ಅದನ್ನು ಬಹಳಷ್ಟು ಸ್ಪಷ್ಟಗೊಳಿಸಿದ್ದಾರೆ. ಈ ವಿಧೇಯಕದ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅಡಚಣೆ ಏನು ಬರಬಹುದು, ಹೇಗೆ ಫೋನ್ ಬರಬಹುದು, ಫೋನ್ ಬಂದಾಗ ಬಿ.ಪಿ. ಹೆಚ್ಚಾಗಬಹುದು, ಕಡಿಮೆ ಆಗಬಹುದು, ಈ ಪ್ರಕರಣದಲ್ಲಿರುವವರು ಎಂಥಂಥವರು, ಯಾವ ಎತ್ತರದವರು ಎನ್ನುವುದರ ಬಗ್ಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನಾನು ಸಾಧ್ಯವಾದಷ್ಟು ಎಲ್ಲರಿಗೂ ಸ್ಪಷ್ಟತೆ ಬರಲಿ ಎಂದು there will be one Recovery Commissioner for whole of the State. Uder Section.14(4) Recovery Officers can be appointed by the Recovery Commissioner. That is the one point I would like to make clear. Because Hon'ble Member Mr.Ivan D'Souza was making this point repeatedly. ಮಾನ್ಯ ನವೀನ್‌ರವರು ಮಾತನಾಡುವಾಗ how can one Recovery Officer do this? Again the same reply I would like to tell him which is under Section.14(4) Recovery Officers can be appointed. He will not be alone. He will be assisted by the required officers and the staff. Under Section.12, ಈಗ ರಿಕವರಿ ಮಾಡಿದ ಮೇಲೆ that material is also to be managed, monitored ಇಲ್ಲದಿದ್ದರೆ government will have to pay the compensation. ನಾನು ಇಷ್ಟು ದೊಡ್ಡ ಟ್ರಕ್ ಬಿಟ್ಟು ಹೋಗಿದ್ದೆ, ಸರ್ಕಾರದವರು ಕೆಡಿಸಿಟ್ಟಿದ್ದಾರೆ ಎಂದು ನಮ್ಮನ್ನು ರಿಕವರಿ ಕೇಳಬಹುದು. ಅದಕ್ಕೆ ಆ ರೀತಿ ಆಗಬಾರದೆಂದು there will be an Administrator to manage, monitor the attached property. That is one. First priority is to get back the amount to the Government. ಹೇಗೆ Karnataka Mining Environment Restoration Corporation (KMERC) ಅವರು ಅದನ್ನು ನಮ್ಮ ನಮ್ಮ ಜಿಲ್ಲೆಗೆ ಕೊಡಿ ಎಂದು its utilization ಅದರ ಬಳಕೆ, ಸದ್ಬಳಕೆಯನ್ನು ಸರ್ಕಾರ ನಿರ್ಣಯ ಮಾಡುತ್ತದೆ. This Recovery Commission is nothing to do with distributing that money. ಮಾನ್ಯ ಶರವಣರವರು ಈಗ ಸದನದಲ್ಲಿ ಇಲ್ಲ, I thank him for his good words. The applicability of

this Act for all illegal iron ore. ಈಗ ನಾವು ಬಿ, ಮತ್ತು ಸಿ, ಕ್ಯಾಟಗರಿಯನ್ನು ಮಾಡಿದ್ದೇವೆ. ಆ ಎಲ್ಲಾ ಕ್ಯಾಟಗರಿಗೂ ಸಂಬಂಧ ಬರುತ್ತದೆ. ಕೇವಲ ಒಂದು ಕ್ಯಾಟಗರಿಗೆ ಮಾತ್ರ ಬರುತ್ತದೆ ಎನ್ನುವುದು ತಪ್ಪು. ಮಾನ್ಯ ಸತೀಶ್‌ರವರಿಗೆ, ನಾನು ಈಗಾಗಲೇ ಹೇಳಿದ್ದೇನೆ, this current Bill is a special law. This is a special law. Special law will prevail over general law. That's why under the Ordinance of 1944, BNSS and Revenue Acts, there is no provision to appoint Recovery Commissioner . ಅಲ್ಲಿ ಇಲ್ಲ. ಅದಕ್ಕಾಗಿಯೇ ಈ ವಿಶೇಷವಾದ ಕಾನೂನು ಮಾಡಿರುವಂಥದ್ದು. The major minerals value material is to be recovered. ಒಂದು ವೇಳೆ ರಿಕವರಿ ಮಾಡುವಾಗ ಸಿಗಲಿಲ್ಲವೆಂದರೆ, the value of that will be recovered. ಇದನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ರವಿಕುಮಾರ್‌ರವರು ಈ ವಿಧೇಯಕವನ್ನು ಸ್ವಾಗತ ಮಾಡಿದರು, I don't know your perception about making panels. Panel making will not make the recovery process effectively. ಆದರೆ ಒಂದು ಸಲಹೆಯನ್ನು ನೀಡಿದ್ದಾರೆ, don't put retired officers, put some working officer ಎಂದು ಹೇಳಿದ್ದಾರೆ. That is one which government will very seriously be considering. ಆದರೆ ಪ್ಯಾನಲ್ ಮಾಡುವಂಥದ್ದು ಅಷ್ಟು ಪರಿಣಾಮಕಾರಿಯಾಗುವುದಿಲ್ಲ. ಅವರು ಹೇಳಿದ್ದಾರೆ, ಆದರೆ ಅವರು ಇನ್ನಷ್ಟು ಹೇಳಬೇಕಾಗಿತ್ತು. ಏಕೆಂದರೆ, ಅವರ ಬಾಯಿಂದ ಅದರ ಬಗ್ಗೆ ಹೆಚ್ಚು ಬೆಳಕು ಚೆಲ್ಲಿದರೆ ಅದು ಅವರ ಆತ್ಮಾವಲೋಕನವೂ ಆಗುತ್ತಿತ್ತು, ನಮಗೆ ಟೀಕೆ ಮಾಡಿದ ಹಾಗೆಯೂ ಆಗುತ್ತಿತ್ತು. 10 ವರ್ಷ ಏನು ಮಾಡಿದ್ದೀರಿ ಎಂದು ಯಾರೋ ಒಬ್ಬ ಸದಸ್ಯರು ಹೇಳಿದರು. 10 ವರ್ಷಗಳಲ್ಲಿ ಅವರು ಅರ್ಧ ಇದ್ದಾರೆ, ನಾವು ಅರ್ಧ ಇದ್ದೇವೆ. ನಾವು ಅವರಿಗೆ ಹೇಳುವುದಕ್ಕಾಗುವುದಿಲ್ಲ, ಅವರು ನಮಗೆ ಹೇಳುವುದಕ್ಕಾಗುವುದಿಲ್ಲ. ಆದರೂ ಈ ಸಂದರ್ಭದಲ್ಲಿ ನಾವು ತಡವಾಗಿದೆ ಎಂದು ಹೋಗುತ್ತೇವೆ. But still, ಸ್ನೇಹಿತರಾದ ಮಾನ್ಯ ಪಿ.ಹೆಚ್.ಪೂಜಾರ್‌ರವರು ಹೇಳಿದ ಹಾಗೆ ' better late than never'. ಈ ಹಿನ್ನೆಲೆಯಲ್ಲಿ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. 111 ಪ್ರಕರಣಗಳು ಯಾವುವೆಂದರೆ, ಈ ಸರ್ಕಾರ ಆದೇಶ ಮಾಡುತ್ತದೆ: ದಿನಾಂಕ:22-11-2013 ರಲ್ಲಿ ಒಂದು ಆದೇಶ ಮಾಡುತ್ತಾರೆ, ದಿನಾಂಕ:6-6-2017ಕ್ಕೆ ಒಂದು ಆದೇಶ ಮಾಡುತ್ತಾರೆ, ದಿನಾಂಕ 21-3-2018ಕ್ಕೆ ಒಂದು ಆದೇಶ ಮಾಡುತ್ತಾರೆ, ದಿನಾಂಕ: 22-11-2024ಕ್ಕೆ ಒಂದು ಆದೇಶ ಮಾಡುತ್ತಾರೆ, ಆದೇಶದಲ್ಲಿರುವಂತಹ ಪ್ರಕರಣಗಳನ್ನೆಲ್ಲಾ ನಾವು ಎಸ್.ಐ.ಟಿ. ತನಿಖೆಗೆ ಕೊಟ್ಟಿದ್ದೇವೆ. ಎಸ್.ಐ.ಟಿ. ಹಾಗೂ ಸಿ.ಬಿ.ಐ ತನಿಖೆ ಇವೆಲ್ಲಾ ಸೇರಿ 111 ಪ್ರಕರಣಗಳಾಗುತ್ತವೆ. ಆ 111 ಪ್ರಕರಣಗಳೇನಿವೆ ಅವುಗಳನ್ನೆಲ್ಲಾ ಕೂಡ ಮೊದಲ ಆದ್ಯತೆ ಮೇರೆಗೆ ರಿಕವರಿ ಕಮೀಷನರ್‌ರವರು ರಿಕವರಿ ಮಾಡುವುದಕ್ಕೆ ಹೋಗುತ್ತಾರೆ.

(ಮುಂದು)

(947) 22/08/2025 12:50 ಎಸ್‌ಪಿಆರ್/ಆರ್‌ಎನ್ (ವೈಸ್ ಛೇರ್ಮನ್ ರವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):-**

ಬಹುಶಃ ಇದು ನಮ್ಮ ರಾಜ್ಯದಲ್ಲಿ ಈ ರೀತಿಯಾಗಿರುವ ಬಹು ದೊಡ್ಡ ಪ್ರಕರಣಕ್ಕೆ ಸಂಬಂದಪಟ್ಟ ಹಾಗೆ ರಿಕವರಿ ಅಧಿಕಾರಿಯನ್ನು ನೇಮಕ ಮಾಡುವ ಪ್ರಯತ್ನ ಮೊದಲನೆಯದಾಗಿದೆ. ಇಲ್ಲಿಯವರೆಗೆ ನಾವು ಏನು ಮಾಡಿದ್ದೇವೆ ಎಂದರೆ, these are crimes. Unfortunately, these crimes are committed by very big people in the name of company, in the name of firm.

ನಾವು ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನೋಡುತ್ತಿದ್ದೇವೆ. ಈಗ ಶ್ರೀ ವಿಜಯ ಮಲ್ಯ ರವರನ್ನು ನಾವು ನೋಡುತ್ತೇವೆ. Yes, he committed a crime. But what he did? Is he inconvenienced? By putting somebody in jail for six months, if it can get him thousands of crore's. Who will not go to jail and why should we leave? If a small thieve steals your pen, ಅವನು ನಮಗೆ ಪೆನ್ ಅನ್ನು ಕೊಡಲಿಲ್ಲವೆಂದರೆ, ಅವನ ಕಪಾಳಕ್ಕೆ ಹೊಡೆದು ಅದರ ಕಿಮ್ಮತ್ತನ್ನು ವಸೂಲಿ ಮಾಡುತ್ತೇವೆ. When that is society's philosophy, why should big people just be exonerated? ಈ ಹಿನ್ನೆಲೆಯಲ್ಲಿ ನಾನು ಇದನ್ನು ಹೇಳಿದ್ದೇನೆ. ಪ್ರಸ್ತುತ ಸರ್ಕಾರ ಮಂಡಿಸಿರುವ ವಿಧೇಯಕವು it expresses its political Will ಎಂಬುದಾಗಿ ನಾನು ಹೇಳುತ್ತೇನೆ. ನಾನು ಈ ಮಾತನ್ನು ಏಕೆ ಹೇಳಿದ್ದೇನೆ ಎಂದರೆ, ಆಡಳಿತ ಪಕ್ಷದ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ನ್ಯಾಯಾಲಯದ ಕಾರಣಕ್ಕಾಗಿ ಈ ವಿಧೇಯಕದ ಮಂಡನೆಯಾಗಿದೆ ಎಂದು ಹೇಳಿದರು. ಇದಕ್ಕೆ ಉತ್ತರ ಕೊಡುವ ಸಲುವಾಗಿ ನಾನು ಇದನ್ನು ಇಲ್ಲಿ ಹೇಳಿದ್ದೇನೆ. ಒಟ್ಟಾರೆಯಾಗಿ ಈ ವಿಧೇಯಕವನ್ನು ನೀವುಗಳೆಲ್ಲರೂ ಪ್ರಾಂಜಲ ಮನಸ್ಸಿನಿಂದ ಸ್ವಾಗತಿಸಿ, ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅದಕ್ಕಾಗಿ ಎಲ್ಲರಿಗೂ ವಂದಿಸುತ್ತೇನೆ. ಈ ಕಾನೂನು ಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಯಾಗಬೇಕು. Recovery Officer and Recovery Commissioner should be very powerful. He should do his duty as a pious duty. ಸದನದಲ್ಲಿರುವವರೆಲ್ಲರೂ ಈ ದಿಸೆಯಲ್ಲಿ ಕೆಲಸವನ್ನು ಮಾಡಬೇಕು. ಈ ದಿಸೆಯಲ್ಲಿ ನಾವುಗಳೆಲ್ಲರೂ ಕೆಲಸವನ್ನು

ಮಾಡೋಣ ಎಂದು ಹೇಳುತ್ತಾ ತಮಗೆಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ 2025 ರ ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 18 ರ ವರೆಗೆ**

**ಸಭಾಪತಿಯವರು:-** “ಖಂಡ 2 ರಿಂದ 18 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 18 ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವದ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) (ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2025 ರ ಕರ್ನಾಟಕ ಅಕ್ರಮ

ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"2025 ರ ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಉ) ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2025 ರ ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೆ, ಈ ವಿಧೇಯಕ ಮೂಲಕ ನಾವು ಬಹಳ ಸರಳವಾದ ತಿದ್ದುಪಡಿಯನ್ನು ತೆಗೆದುಕೊಂಡು ಬರುತ್ತಿದ್ದೇವೆ. 2012 ರಲ್ಲಿ ಈ ವಿಧೇಯಕ್ಕೆ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಮಂಡಿಸಿರುವ ವಿಧೇಯಕದ ಉದ್ದೇಶವೇನೆಂದರೆ, ಬೆಂಗಳೂರಿನಲ್ಲಿರುವ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಸಂಪೂರ್ಣವಾದ ಅಧಿಕಾರವಿತ್ತು. ಅವುಗಳು ಯಾವುವೆಂದರೆ, ಲೈಸೆನ್ಸ್ ಕೊಡುವುದು, ಸಸ್ಪೆಂಷನ್ ಮಾಡುವುದು, ಕ್ಯಾನ್ಸಲ್ ಮಾಡುವುದು, ರಿಪೋರ್ಟಿಂಗ್ ಆಫ್ ಇನ್ಸಿಡೆಂಡ್ಸ್ ಮತ್ತು ಮೇಲ್ಮನವಿ ಇವುಗಳು ಆಗಿದ್ದವು. ಹೀಗಾಗಿ ಎಲ್ಲದಕ್ಕೂ ಬೆಂಗಳೂರಿಗೆ ಬರಬೇಕಾದ ಅವಶ್ಯಕತೆ ಇತ್ತು. ಅಧಿಕಾರ ವಿಕೇಂದ್ರಿಕರಣಕ್ಕಾಗಿ ನಾವು ಈ ವಿಧೇಯಕವನ್ನು ಮಂಡಿಸಿದ್ದೇವೆ. Delegation of power from Chief Electrical Inspector to authorized officers ಎಂಬುದಾಗಿ ನಾವು ಮಾಡಿದ್ದೇವೆ. Additional Chief Electrical Officers ಗೆ ಒಂದು ಕಂದಾಯ ವಲಯಕ್ಕೆ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಇರುತ್ತಾರೆ. 24 ಮೀಟರ್‌ಗಳಿಗಿಂತಲೂ ಹೆಚ್ಚಿಗೆ ಇರುವುದು ಎಲ್ಲವನ್ನೂ ಮುಖ್ಯ ವಿದ್ಯುತ್ ಪರಿವೀಕ್ಷಕರೇ ಮಾಡುತ್ತಾರೆ. ಅದೇ ರೀತಿಯಾಗಿ 24 ಮೀಟರ್‌ಗಳಿಗಿಂತಲೂ ಕಡಿಮೆ ಇರುವುದಕ್ಕೆ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಅಧಿಕಾರ ನೀಡಿದ್ದೇವೆ. ಮೂರ್ನಾಲ್ಕು ಜಿಲ್ಲೆಗಳಿಗೆ ಒಬ್ಬ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಬರುತ್ತಾರೆ. ಇದರಿಂದ ಅಧಿಕಾರ ವಿಕೇಂದ್ರೀಕರಣವಾಗುತ್ತದೆ. ಇದರಿಂದ ease of doing business ಅಂದರೆ ಕಛೇರಿ ಕೆಲಸಗಳು ಸುಗಮವಾಗುತ್ತವೆ. ಆಡಳಿತ ಸುಧಾರಣಾ ಆಯೋಗವೂ ಸಹ ಇದನ್ನು ಶಿಫಾರಸ್ಸು ಮಾಡಿರುತ್ತದೆ. ದಯಮಾಡಿ ಈ ಸದನವು ಪ್ರಸ್ತುತ ವಿಧೇಯಕವನ್ನು ಅನುಮೋದಿಸಿ ಕೊಡುವಂತೆ ಕೋರುತ್ತೇನೆ.

**ಸಭಾಪತಿಯವರು:-** ಮಾತನಾಡಿದವರೇ ಮಾತನಾಡುತ್ತಿದ್ದೀರಿ. ಹೀಗಾಗಿ ನಾನು ಐದು ಸದಸ್ಯರಿಗಿಂತ ಹೆಚ್ಚಿನವರಿಗೆ ಅವಕಾಶವನ್ನು ನೀಡುವುದಿಲ್ಲ. ಈ ಹಿಂದೆ ಒಂದು ಬಾರಿ ಮಾತನಾಡಿದವರಿಗೆ ನಾನು ಪುನಃ

ಅವಕಾಶವನ್ನು ನೀಡುವುದಿಲ್ಲ. ಇಲ್ಲವೆಂದಾದರೆ ರಾತ್ರಿ 12:00 ಗಂಟೆಯವರೆಗೂ ಸದನವನ್ನು ನಡೆಸುತ್ತೇನೆ. ನೀವುಗಳೆಲ್ಲರೂ ಅಲ್ಲಿಯವರೆಗೆ ಕುಳಿತುಕೊಳ್ಳಲು ಗಟ್ಟಿಯಾಗಿದ್ದರೆ, ನಾನು ಅಲ್ಲಿಯವರೆಗೂ ಸಹ ಸದನವನ್ನು ನಡೆಸುತ್ತೇನೆ. ತಿರುಗಿ ತಿರುಗಿ ಅದೇ ಸದಸ್ಯರುಗಳು ಮಾತನಾಡುತ್ತಾರೆ. ಬೇರೆಯವರಿಗೆ ಅವಕಾಶವನ್ನೇ ನೀಡುವುದಿಲ್ಲ. ಐದು ಸದಸ್ಯರಿಗಿಂತ ಹೆಚ್ಚಿನವರಿಗೆ ನಾನು ಮಾತನಾಡಲು ಅವಕಾಶವನ್ನು ನೀಡುವುದಿಲ್ಲ.

**ಶ್ರೀ ಎಂ.ನಾಗರಾಜು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬೇರೆಯವರನ್ನು ಮಾತನಾಡಬಾರದೆಂದು ನಾನು ಯಾವುದೇ ನಿರ್ಬಂಧವನ್ನು ಹೇರಿರುವುದಿಲ್ಲ. ಅವರುಗಳಿಗೆ ಮಾತನಾಡಲು ಆಸಕ್ತಿ ಇದ್ದರೆ, ಅವರುಗಳು ಮಾತನಾಡಲಿ. ನೀವು ಬೇರೆಯವರಿಗೆ ಮಾತನಾಡಲು ಅವಕಾಶ ನೀಡುವುದಿಲ್ಲವೆಂದರೆ, ನಾನೇನು ಮಾಡುವುದಕ್ಕಾಗುತ್ತದೆ? ಇದು ಅವರುಗಳ ಆಸಕ್ತಿಯಾಗಿರುತ್ತದೆ. ನಾವು ಸದಸ್ಯರುಗಳು ನಮ್ಮ ಆಸಕ್ತಿಯ ಮೇಲೆ ಮಾತನಾಡುತ್ತೇವೆಯೇ ಹೊರತು,....

**(ಗೊಂದಲ)**

**ಸಭಾಪತಿಯವರು:-** ಶ್ರೀ ನಾಗರಾಜು ರವರೇ, ನಾನು ಹೇಳುವುದನ್ನು ಕೇಳಿ. ನೀವು ಕನ್ನಡ ಭಾಷೆಯಲ್ಲಿ ಮಾತನಾಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಕನ್ನಡ ಮತ್ತು ಆಂಗ್ಲ ಭಾಷೆ ಎರಡರಲ್ಲಿಯೂ ಒಟ್ಟಿಗೆ ಮಾತನಾಡುತ್ತೇನೆ.

**ಸಭಾಪತಿಯವರು:-** ನೀವು ಏನು ಮಾತನಾಡುತ್ತೀರೋ ತಿಳಿಯದು.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಆಯಿತು ಕನ್ನಡದಲ್ಲಿಯೇ ಮಾತನಾಡುತ್ತೇನೆ. ಬೇರೆಯವರು ಮಾತನಾಡುವುದಿಲ್ಲ ಎನ್ನುವುದನ್ನು ನಮ್ಮ ಮೇಲೆ ಹೇರುವುದಕ್ಕೆ ಹೋಗಬೇಡಿ. ಯಾರು ಮಾತನಾಡುತ್ತಾರೆಯೋ, ಅದು ಅವರಿಗೆ ಬಿಟ್ಟಂತಹ ಅಧಿಕಾರವಾಗಿದೆ. ನಾವು ಮಾತನಾಡುವವರನ್ನು ನೀವು ಹೇಗೆ ನಿರ್ಬಂಧಿಸುತ್ತೀರಿ? ನಾವು ಎಲ್ಲಾ ವಿಧೇಯಕಗಳನ್ನು ಸ್ವಾಗತಿಸಿ ಮಾತನಾಡಬೇಕಾಗುತ್ತದೆ. ಸರ್ಕಾರದ ಎಂದ ಮೇಲೆ, **(ಗೊಂದಲ)** ನಾವು ಅದನ್ನು ಸ್ವಾಗತ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಶ್ರೀ ನಾಗರಾಜುರವರೇ ಸಾವಕಾಶವಾಗಿ ಮಾತನಾಡಿ. ಕಾರ್ಯಕಲಾಪಗಳು ಮುಗಿಯುವವರೆಗೂ ನೀವುಗಳೆಲ್ಲಾ ಕುಳಿತುಕೊಳ್ಳುತ್ತೀರಿ ಎಂದು ಹೇಳಿದ್ದೀರಲ್ಲ; ಆಯಿತು ನಾನು ಅಲ್ಲಿಯವರೆಗೂ ಸಹ ಸದನವನ್ನು ನಡೆಸುತ್ತೇನೆ. ಆಮೇಲೆ ಯಾರೂ ಏನನ್ನೂ ಕೇಳಬೇಡಿ. ರಾತ್ರಿ 12:00 ಗಂಟೆಯವರೆಗೂ ಸಹ ನಾನು ಸದನವನ್ನು ನಡೆಸುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಸದಸ್ಯರು ಏನು ಹೇಳಿದರೋ ಗೊತ್ತಾಗಲಿಲ್ಲ.

(ಮುಂದು)

(948) 22-08-2025 1-00/bkp-bns (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ನಾನು ಹೇಳುತ್ತೇನೆ, ಇಲ್ಲಿ ಎಲ್ಲರೂ ನೋಡಿ. ಇವತ್ತು ಕೊನೆಯ ದಿನ. ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೋಗಲಿಕ್ಕೆ ಸದನವನ್ನು ಬೇಗ ಮುಗಿಸಬೇಕೆಂದು ಹೇಳಿರುವುದರಿಂದ ಆದಷ್ಟು ಬೇಗ ಮುಗಿಸಬೇಕೆಂದು ತೀರ್ಮಾನ ಮಾಡಿದ್ದೇನೆ. ಇಲ್ಲವೆಂದರೆ, ನಾವುಗಳು ಇನ್ನು ಸಹ ಚರ್ಚೆ ಮಾಡುತ್ತೇವೆಂದರೆ ನನ್ನದೇನೂ ತಕರಾರು ಇರುವುದಿಲ್ಲ. ನಾನು ಕುಳಿತುಕೊಳ್ಳಲಿಕ್ಕೆ ತಯಾರು ಇದ್ದೇನೆ. ಈ ರೀತಿಯಲ್ಲಿ ಮಾತನಾಡಿದರೆ ನಾನು ಏನು ಮಾಡಲಿಕ್ಕೆ ಆಗುತ್ತದೆ?

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇವತ್ತು ಅಧಿವೇಶನದ ಕೊನೆಯ ದಿನ. ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೋಗಬೇಕೆಂದು ತಯಾರಿ ಮಾಡಿಕೊಂಡಿರುತ್ತಾರೆ. ಆದ್ದರಿಂದ, ತಾವು ಇದಕ್ಕೆ ಸಮಯ ನಿಗದಿ ಮಾಡಿದರೆ, ಪ್ರಶ್ನೋತ್ತರವಾಗಿ, ನಂತರ ವಿರೋಧ ಪಕ್ಷದವರು ಬೇಗ ಬೇಗನೆ ಮಾತನಾಡಬೇಕಾಗುತ್ತದೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯರೆ, ಶ್ರೀಯುತ ಎನ್.ಎಸ್.ಬೋಸರಾಜುರವರು ಇಲ್ಲಿ ಗಮನಿಸಬೇಕು. ಇದು ಬಹಳ ಸರಳವಾಗಿದೆ. Lift ಅಳವಡಿಸಲು permission ತೆಗೆದುಕೊಳ್ಳಬೇಕಾದರೆ ಎಲ್ಲರೂ ಬೆಂಗಳೂರಿಗೆ ಬರಬೇಕಾಗಿತ್ತು. ಅವರು ಈ ಅಧಿಕಾರವನ್ನು ಜಿಲ್ಲಾ ಹಂತಕ್ಕೆ ಕೊಡುತ್ತಿದ್ದಾರೆ.

**ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ತಮ್ಮ ಕಡೆಯವರಿಗೆ ಸ್ವಲ್ಪ ಸುಮ್ಮನಿರಲಿಕ್ಕೆ ಹೇಳಿ. ಪ್ರತಿಯೊಂದಕ್ಕೂ ಮಾತನಾಡಲಿಕ್ಕೆ ಎದ್ದು ನಿಂತರೆ ಹೇಗೆ? ಯಾವುದಾದರೂ ಪ್ರಮುಖವಾದ ಬಿಲ್ ಇದ್ದರೆ ಎಲ್ಲರೂ ಮಾಡನಾಡಬಹುದು. ಲಿಫ್ಟ್ ಅಳವಡಿಸುವ ಕುರಿತು ಏನು ದೊಡ್ಡದಾಗಿ ಮಾತನಾಡುವುದಿದೆ? ಎಲ್ಲದಕ್ಕೂ ಎದ್ದು ನಿಂತು ಇವರುಏನು ಮಾತನಾಡುತ್ತಾರೆ?

**ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹಳ ಮುಖ್ಯವಾದ ಸಮಸ್ಯೆ ಇದರಲ್ಲಿ ಇದೆ. ಅವರು ಇದರಲ್ಲಿ ಏನು ಕೊಟ್ಟಿದ್ದಾರೆಂದರೆ, Chief Electrical Inspectorate ಮೊದಲು ಬೆಂಗಳೂರಿನಲ್ಲಿ ಇರುತ್ತಿದ್ದರು. Additional Chief Electrical Inspectorate zonal level ನಲ್ಲಿ ಇರುತ್ತಿದ್ದರು. ಮತ್ತೆ, Deputy Chief Electrical Inspectorate zonal level ನಲ್ಲಿ ಇರುತ್ತಾರೆ ಎಂದು ಹೇಳಿದರು. ಇದರಲ್ಲಿ ನನಗೆ ಅವರು ಕ್ಲಾರಿಫಿಕೇಷನ್ ಕೊಡಬೇಕಾಗಿರುವುದು ಏನೆಂದರೆ, Deputy Chief Electrical Inspectorate ರವರು ಮಾಡುತ್ತಾರೋ ಅಥವಾ Additional Chief Electrical Inspectorate ರವರು ಮಾಡುತ್ತಾರೋ? ಅಂದರೆ, ಅವರು 24 ಮೀಟರ್ ಒಳಗಡೆ ಇರುವವರಿಗೆ ಕೊಡುತ್ತಾರೆ ಎನ್ನುವುದು ಒಂದು ವಿಚಾರ. ಎರಡನೆಯದಾಗಿ, ಹಿಂದೆ ಏನಾಗಿದೆ ಎಂದರೆ ಭಾರತ

ದೇಶದಲ್ಲಿ ಹೆಚ್ಚು ಜನಸಂಖ್ಯೆ ಇದ್ದು, ಪ್ರಪಂಚದಲ್ಲಿನ 17.5% of the total population ಭಾರತ ದೇಶದಲ್ಲಿ ಇದೆ. ನಮಗೆ the National Building Code ಪ್ರಕಾರ ಎಲ್ಲಿಯಾದರೂ ಕಟ್ಟಡವನ್ನು ಕಟ್ಟಬೇಕಾದರೆ ಉದಾಹರಣೆಗೆ 50' X 100' ಅಳತೆಯ ಸೈಟು ಇದ್ದು, ಅಲ್ಲಿ 3 ಅಂತಸ್ತಿನ ಕಟ್ಟಡವನ್ನು ಕಟ್ಟಬೇಕೆಂದರೆ ನಾಲ್ಕೂವರೆ ಮೀಟರ್ ಅಂದರೆ ಕಟ್ಟಡದ ಸುತ್ತಲೂ 15 ಅಡಿಗಳಷ್ಟು ಜಾಗವನ್ನು ಬಿಡಬೇಕೆಂದರೆ, 50' X 100' ಅಳತೆಯ ಸೈಟ್‌ನಲ್ಲಿ 20'X70' ಅಡಿ ಸೈಟ್‌ನಲ್ಲಿ ಮಾತ್ರ ಕಟ್ಟಡವನ್ನು ಕಟ್ಟಲಿಕ್ಕೆ ಸಾಧ್ಯ. Practically ಇಷ್ಟು densely populated ದೇಶದಲ್ಲಿ ಅದು ಆಗುವುದಿಲ್ಲ. ಆ ಸಮಯದಲ್ಲಿ ಏನಾಗುತ್ತದೆ ಎಂದರೆ ಅಲ್ಲಿಗೆ ಅಪ್ರೂವಲ್ ಪ್ಲಾನ್ ಬೇರೆ ಇದ್ದು, ಬೇರೆ ರೀತಿಯಲ್ಲಿ ಕಟ್ಟಡವನ್ನು ಕಟ್ಟಿಬಿಡುತ್ತಾರೆ. ಉದಾಹರಣೆಗೆ 2 ಅಂತಸ್ತಿನ ಕಟ್ಟಡವನ್ನು ಕಟ್ಟಬೇಕೆಂದು ಇದ್ದು, ಒಂದು ಅಂತಸ್ತನ್ನು ಹೆಚ್ಚುವರಿಯಾಗಿ ಕಟ್ಟಿದರೆ ಕಾರ್ಪೋರೇಷನ್‌ನಲ್ಲಿ ದಂಡವನ್ನು ಕಟ್ಟಿ ಅದನ್ನು ಪರಿಹಾರ ಮಾಡಿಕೊಳ್ಳುತ್ತಾರೆ. ಆದರೆ, ನಿಮ್ಮಲ್ಲಿ lift permission ವಿಚಾರದಲ್ಲಿ ಏನಾಗಿದೆ ಎಂದರೆ ಅವರು 2 ಅಂತಸ್ತಿಗೆ ಮಾತ್ರ ಅನುಮತಿಯನ್ನು ಕೊಟ್ಟಿದ್ದು, ಹೆಚ್ಚುವರಿ 3ನೇ ಮಹಡಿಗೆ ಕಟ್ಟಿರುವುದಕ್ಕೆ ಕಾರ್ಪೋರೇಷನ್‌ವರು ಶುಲ್ಕ ಪಡೆದು ಅನುಮತಿ ಕೊಟ್ಟಿರುತ್ತಾರೆ. ಅದಕ್ಕೆ ದಂಡವನ್ನು ಕಟ್ಟಿದ್ದು ಆಗಿರುತ್ತದೆ. ಆದರೆ, ನಿಮಗೆ lift ಗೆ ಅನುಮತಿ ಸಿಗಬೇಕಾದರೆ ಕೇವಲ 2 ಅಂತಸ್ತಿಗೆ ಮಾತ್ರ ಅನುಮತಿಯನ್ನು ಕೊಡುತ್ತಾರೆ. ಇದು ಬಹಳ ಅನಾನುಕೂಲವಾಗುತ್ತದೆ. ದಯವಿಟ್ಟು ಅದರ ಬಗ್ಗೆ ಬೆಳಕನ್ನು ಚೆಲ್ಲಬೇಕು. ಕೊನೆಯ ಪಕ್ಷ ದಂಡವನ್ನು ಕಾರ್ಪೋರೇಷನ್‌ನಲ್ಲಿ ಕಟ್ಟಿದ್ದು, ಅದರ ಲೆಟರ್ ಇದ್ದರೆ, ಕನಿಷ್ಟ ಪಕ್ಷ ಅದಕ್ಕೆ ಅನುಮತಿಯನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತಮಗೆ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕ, 2025, ಅನ್ನು ತಂದಿರುವುದನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ತಂದಿರತಕ್ಕಂತಹ ಈ ವಿಧೇಯಕದ ಬಗ್ಗೆ ನಾನು ಏತಕ್ಕೆ ಮಾತನಾಡಬೇಕೆಂದು ಕೇಳಿದ್ದೇನೆಂದರೆ, ಮೊದಲು ಎಲ್ಲಾ ಸಣ್ಣ ಸಣ್ಣ ಲಿಫ್ಟ್‌ಗಳ ಅನುಮತಿಗೆ, ಲೈಸೆನ್ಸ್‌ಗೆ ಎಲ್ಲರೂ ಬೆಂಗಳೂರಿಗೆ ಬರುವಂತಹ ವಿಚಾರ ಇತ್ತು. ಈಗ ಅದನ್ನು decentralize ಮಾಡಿ ಜಿಲ್ಲಾ ಹಂತಕ್ಕೆ ಕೊಟ್ಟಿರುವುದು ಒಂದು ಸ್ವಾಗತಾರ್ಹವಾದ ಕ್ರಮವಾಗಿದೆ. Always the power should be decentralized in such a way that, ಅದು ಸಾರ್ವಜನಿಕರಿಗೆ ಉಪಯೋಗವಾಗುವಂತಹ ನಿಟ್ಟಿನಲ್ಲಿ ತಂದಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಅದಕ್ಕೆ authorize ಮಾಡಿರತಕ್ಕಂತಹ ಅಧಿಕಾರಿಗಳು ಯಾರು ಜಿಲ್ಲಾ ಹಂತದಲ್ಲಿ ಮಾಡಿರುತ್ತಾರೆ, they should also follow certain rules and regulations. ಯಾವುದೋ ಒಂದು ಕಾನೂನುಬಾಹಿರವಾಗಿ ಕಟ್ಟಿರುವಂತಹ ಕಟ್ಟಡಗಳಿಗೆ ಅನುಮತಿಯನ್ನು ಕೊಡುವಂತಹದ್ದು ಹೆಚ್ಚುವರಿ

ಅಂತಸ್ತುಗಳನ್ನು ಕಟ್ಟಿರುವಂತಹ ಕಟ್ಟಡಗಳಿಗೆ ಅನುಮತಿಯನ್ನು ಕೊಡುವಂತಹದ್ದರ ಬಗ್ಗೆ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಸಾವಿರಾರು ಜನರು, ಲಕ್ಷಾಂತರ ಜನರು ಇಂದಿನ ಕಾಲದಲ್ಲಿ ಲಿಫ್ಟ್‌ಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಹಾಗಾಗಿ ಸಾರ್ವಜನಿಕ ಬಸ್ ನಿಲ್ದಾಣಗಳಲ್ಲಿ ಇರಬಹುದು, ರೈಲ್ವೇ ನಿಲ್ದಾಣಗಳಲ್ಲಿ ಇರಬಹುದು. ಏರ್‌ಪೋರ್ಟ್‌ಗಳಲ್ಲಿ ಇರಬಹುದು, ಎಸ್ಕಲೇಟರ್‌ಗಳನ್ನು ಉಪಯೋಗ ಮಾಡುತ್ತಾರೆ, ಈ ರೀತಿಯಲ್ಲಿ ಎಲ್ಲಾ ಜಾಗಗಳಲ್ಲಿ ಎಸ್ಕಲೇಟರ್‌ಗಳ ಉಪಯೋಗವಾಗುತ್ತಿದೆ. ಎಸ್ಕಲೇಟರ್‌ಗಳನ್ನು ಮಾಲ್‌ಗಳಲ್ಲಿ ಉಪಯೋಗ ಮಾಡುವುದನ್ನು ನಾವು ನೋಡಿದ್ದೇವೆ. Safety measures ವಿಚಾರದಲ್ಲಿ ನಾವು ಬಹಳ ಪ್ರಮುಖವಾಗಿ ಗಮನಕೊಡಬೇಕಾಗಿದೆ. ಇಷ್ಟು ದಿನ ಏನಾಗಿತ್ತು ಎಂದರೆ, centralize ಆದರೂ ಕೂಡ, ಕಷ್ಟವಾದರೂ ಕೂಡ ಸ್ವಲ್ಪ stringent measures ಇತ್ತು. ಬೆಂಗಳೂರಿಗೆ ಬರಬೇಕು, ಅಧಿಕಾರಿಗಳನ್ನು ಭೇಟಿ ಮಾಡಬೇಕು, they are supposed to get it approved. ಆದರೆ, ಈಗ ಏನಾಗುತ್ತದೆ ಎಂದರೆ decentralise ಮಾಡಿದಾಗ ಅಲ್ಲಿ ಇರತಕ್ಕಂತಹ ಸ್ಥಳೀಯ ಅಧಿಕಾರಿಗಳು, they should also follow the rules how it was followed earlier. The trustworthiness of this instrument should be used very well. ಏಕೆಂದರೆ, ಈ ಲಿಫ್ಟ್‌ಗಳಿಗೆ ಮತ್ತು ಎಸ್ಕಲೇಟರ್‌ಗಳಿಗೆ ಉಪಯೋಗ ಮಾಡತಕ್ಕಂತಹ ಉಪಕರಣಗಳು ಏನಿವೆ, ಅವುಗಳನ್ನು ಏನು ತಪಾಸಣೆ ಮಾಡುತ್ತಾರೆ, ಆ ತಪಾಸಣೆಯಲ್ಲಿ ಯಾವುದೇ ರೀತಿಯಲ್ಲಿ mal practice ಗಳು ಆಗಬಾರದು ಎಂದು ಹೇಳುತ್ತೇನೆ. ಏತಕ್ಕೆಂದರೆ, ಲಿಫ್ಟ್ ಮತ್ತು ಎಸ್ಕಲೇಟರ್‌ಗಳಲ್ಲಿ ತೊಂದರೆಗಳಾದಾಗ ನೂರಾರು ಜನ ನಾಗರಿಕರಿಗೆ ತೊಂದರೆಯಾಗತಕ್ಕಂತಹ ಪ್ರಸಂಗಗಳಾಗುವ ಕಾರಣಕ್ಕೋಸ್ಕರವಾಗಿ ನಾನು ಕೇಳುವುದೇನೆಂದರೆ, ಈ stringent measures ಅನ್ನು ಮುಂದುವರಿಸಿ, decentralization of powers ಕೊಟ್ಟಿರುವಂತಹದ್ದನ್ನು ನಾನು ಸ್ವಾಗತ ಮಾಡುತ್ತೇನೆ ಮತ್ತು ಈ ವಿಧೇಯಕವನ್ನೂ ಸಹ ಸ್ವಾಗತ ಮಾಡುತ್ತೇನೆ ಎನ್ನುವ ವಿಚಾರವನ್ನು ತಮ್ಮ ಮುಂದೆ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್. ( ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಇಬ್ಬರೇ ಇಬ್ಬರು ಓಡಾಡುವಂತಹ ಲಿಫ್ಟ್‌ಗಳನ್ನು ಈಗ ಜನರು ಹಾಕಿಕೊಳ್ಳುತ್ತಾರೆ. ಏತಕ್ಕೆಂದರೆ ಮನೆಗಳಲ್ಲಿ ಕಾಲು ನೋವಿನ ದೃಷ್ಟಿಯಿಂದ ಹಾಕಿಕೊಳ್ಳುತ್ತಾರೆ. ಇಲ್ಲಿ ಏನಾಗುತ್ತದೆ ಎಂದರೆ, ನೀವು ಈ ಬಿಲ್ಲನ್ನು ತಂದಿರುವ ಉದ್ದೇಶ ಸರಿ ಇದೆ. ಈ ಪ್ರಾಧಿಕಾರದ ಅಧಿಕಾರಿಯ ವಿಚಾರದಲ್ಲಿ decentralise ಮಾಡಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಈ decentralization ಜೊತೆಯಲ್ಲಿ manufacturers ಏನಾಗಿದ್ದಾರೆಂದರೆ, ತುಂಬಾ standardized ಇದೆ ಎಂದೇನೂ ಇರುವುದಿಲ್ಲ. ನಾನಾ ರೀತಿಯಲ್ಲಿ ಇರುವವರು manufacture ಮಾಡುತ್ತಿದ್ದಾರೆ. ಇದು dilute ಆಗಬಾರದು. ಅಂದರೆ ಲಿಫ್ಟ್‌ನ safety ಯನ್ನು dilute ಮಾಡದೇ ಇರುವಂತಹ ರೀತಿಯಲ್ಲಿ

ಇದನ್ನು ನೀವು decentralise ಮಾಡಬೇಕು. ಏಕೆಂದರೆ, ಕೆಲವಾರು ಮನೆಗಳಲ್ಲಿ ನಾನಾ ರೀತಿಯ ಲಿಫ್ಟ್‌ಗಳನ್ನು ನೋಡಿದ್ದೇವೆ. ಅದು 1ನೇ ಮಹಡಿಗೆ ಹೋಗುತ್ತದೆ, 2ನೇ ಮಹಡಿಗೆ ಹೋಗುತ್ತದೆ, 3ನೇ ಮಹಡಿಗೆ ಹೋಗುತ್ತದೆ. ಅದನ್ನು ಹೈಡ್ರಾಲಿಕ್ ಎಂದೂ ಸಹ ಕರೆಯುತ್ತಾರೆ. ಆ standardization ಅನ್ನು ಸರಿಯಾಗಿ ಪರಿಶೀಲನೆ ಮಾಡಿ ಕೊಡುವಂತಹ ಅಧಿಕಾರವನ್ನು ವಿಕೇಂದ್ರೀಕರಿಸಬೇಕೇ ಹೊರತು, ಸರಳೀಕರಣದಲ್ಲಿ ತೊಂದರೆಯಾಗದಂತಹ ರೀತಿಯಲ್ಲಿ ಗಮನಹರಿಸಬೇಕು.

**ಶ್ರೀ ಕೆ.ಜೆ. ಜಾರ್ಜ್(ಇಂಧನ ಸಚಿವರು):-** ಮಾನ್ಯ ಸಭಾಪತಿಯವರೆ, ಇದರಲ್ಲಿ unauthorized floors ಗೆ ಲಿಫ್ಟ್ ಕೊಡಲಿಕ್ಕೆ ನಾವು ಅನುಮತಿಯನ್ನು ಕೊಡುವುದಿಲ್ಲ.

**ಡಾ॥ ಧನಂಜಯ ಸರ್ಜಿ:-** ನಾವು unauthorized floors ಬಗ್ಗೆ ಕೇಳುತ್ತಿಲ್ಲ.

**ಸಭಾಪತಿಯವರು:-** ಡಾಕ್ಟರ್‌ರವರೆ, ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ, ಮಧ್ಯೆ ನೀವು ಅವರನ್ನು ಏನು ಕೇಳುತ್ತಿದ್ದೀರಿ?

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಸಭಾಪತಿಯವರೆ, O.C. (Occupancy Certificate) ಯನ್ನು ಕೊಟ್ಟಿರುತ್ತಾರೆ. ಅದು ಕಾರ್ಪೋರೇಷನ್ ಇರಬಹುದು, ಲೋಕಲ್ ಬಾಡಿ ಇರಬಹುದು, ಓ.ಸಿ. ಅನ್ನು ಎಷ್ಟರಮಟ್ಟಿಗೆ ಕೊಡಬಹುದು, ಅಷ್ಟರ ಮಟ್ಟಿಗೆ ಕೊಡುತ್ತಾರೆ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು:** ಶ್ರೀಯುತ ಜಾರ್ಜ್ ರವರೆ, ಈ ಕಡೆ ಮುಖ ಮಾಡಿಕೊಂಡು ಮಾತನಾಡಿ. ಡಾಕ್ಟರ್‌ರವರೆ, ತಾವು ಕುಳಿತುಕೊಳ್ಳಿ. ಸಚಿವರು ಉತ್ತರವನ್ನು ಹೇಳುತ್ತಾರೆ, ಕೇಳಿ.

**Sri K.J. GEORGE:-** Unauthorised floors ಗೆ ಕೊಡುವುದಿಲ್ಲ. Occupancy Certificate ಇರುವ floors ಗೆ ಅದು ಎರಡು ಇರಬಹುದು, ಎರಡೂವರೆ ಇರಬಹುದು, ಮೂರು ಅಂತಸ್ತುಗಳಿಗೆ ಈಗ ಕೊಡಲಿಕ್ಕೆ ಈಗಾಗಲೇ ಅವಕಾಶ ಇದ್ದು, ಅದನ್ನು ನಾವು ಮಾಡುತ್ತೇವೆ. ಮತ್ತೆ ನಾವು Chief Electrical Inspector ರವರಿಗೆ ಯಾವ ಒಂದು ಕ್ವಾಲಿಟಿಯಲ್ಲಿ ಅದನ್ನು ತಪಾಸಣೆ ಮಾಡಿ ಕೊಡುತ್ತಿದ್ದಾರೆ, ಅದೇ ರೀತಿಯಲ್ಲಿ Additional Chief Electrical Inspector ರವರೂ ಸಹ ಅದನ್ನೇ ಮಾಡಬೇಕಾಗುತ್ತದೆ. ಯಾವುದೇ ರೀತಿಯಲ್ಲಿ ಕ್ವಾಲಿಟಿಯಲ್ಲಿ ಕಡಿಮೆ ಮಾಡುವುದಿಲ್ಲ. ಸಂಪೂರ್ಣವಾಗಿ ತಪಾಸಣೆ ಮಾಡಿ ಕ್ವಾಲಿಟಿಯನ್ನು assure ಮಾಡಿಯೇ ಅದಕ್ಕೆ ಅನುಮತಿ ಕೊಡಲಿಕ್ಕೆ ಆಗುತ್ತದೆ. ಆದ್ದರಿಂದ, ಇದನ್ನು ಸರಳೀಕರಣ ಮಾಡುತ್ತಿದ್ದೇವೆ. ಏಕೆಂದರೆ, ಮೊದಲು ಲಿಫ್ಟ್‌ಗಳು ಬಹಳ ಕಡಿಮೆ ಇತ್ತು. Chief Electrical Inspector ರವರು ಇಡೀ ಕರ್ನಾಟಕದಲ್ಲಿ ಬಂದರೆ ತೊಂದರೆಯಾಗುತ್ತದೆ ಎಂದು ಹೇಳಿ ease of doing business ದೃಷ್ಟಿಯಿಂದ ಸರಳೀಕರಣ ಮಾಡಿದ್ದೇವೆಯೇ ಹೊರತು, ಬೇರೆ ಏನೂ ಇರುವುದಿಲ್ಲ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೆ, ಏನಾಗಿದೆ ಎಂದರೆ ಬಹುತೇಕ 95% ಯಾರಿಗೂ O.C. ಸಿಗುತ್ತಿಲ್ಲ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 5 ರವೆರೆಗೆ**

**ಸಭಾಪತಿಯವರು:- ಪ್ರಸ್ತಾವ ಏನೆಂದರೆ,**

**"ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**<u>ಖಂಡ-1 ಇತ್ಯಾದಿ</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೆ.ಜೆ. ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಊ) "ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಸುಮಾರು 6 ತಿಂಗಳುಗಳ ಹಿಂದೆ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರವನ್ನು ನಾವು ಕಾನೂನು ಮಾಡುವುದರ ಮೂಲಕ ಈ ಒಂದು ಪ್ರಾಧಿಕಾರವನ್ನು ಸ್ಥಾಪನೆ ಮಾಡಿದ್ದೇವೆ. ಅದು ವಿಧಾನ ಪರಿಷತ್ತಿನಲ್ಲಿ ಇದರ ಮೂಲ ವಿಧೇಯಕವನ್ನು ಮಂಡಿಸಿದಾಗ ಪೀಠದಿಂದ ಒಂದು ಸೂಚನೆಯನ್ನು ತಾವು ಸಹ ಕೊಟ್ಟಿದ್ದೀರಿ. ಅನೇಕ ಸದಸ್ಯರು ಮನವಿಯನ್ನು ಮಾಡಿದ್ದರು. ಈ ಪ್ರಾಧಿಕಾರದಲ್ಲಿ ಸದಸ್ಯರಾಗಿ ಕೆಲಸ ಮಾಡುವುದಕ್ಕೆ ವಿಧಾನ ಪರಿಷತ್ತಿನ ಸದಸ್ಯರಿಗೂ ಸಹ ಅವಕಾಶ ಮಾಡಬೇಕೆಂದು ಸದನದಲ್ಲಿ ಅಭಿಪ್ರಾಯ ವ್ಯಕ್ತವಾಗಿತ್ತು. ತಾವು ಸಹ ಅದನ್ನು ಬಲವಾಗಿ ಸಮರ್ಥನೆ ಮಾಡಿಕೊಂಡು ಸೂಚನೆಯನ್ನು ಕೊಟ್ಟಿದ್ದೀರಿ. ಅಂದಿನ ದಿನ ನಾನು ಸದನದಲ್ಲಿ ತಮಗೆ ಮಾತು ಕೊಟ್ಟಿದ್ದೆ. ಖಂಡಿತವಾಗಿಯೂ ಸಹ ತಮ್ಮ ಸೂಚನೆಯನ್ನು ಪಾಲನೆ ಮಾಡುತ್ತೇನೆ. ಆದರೆ, ಅದರ ಮೂಲ ವಿಧೇಯಕಕ್ಕೆ ಮತ್ತೆ ಅಲ್ಲಿ ತಿದ್ದುಪಡಿಗೆ ಸೇರಿಸಿದರೆ ಆ ಮೂಲ ವಿಧೇಯಕ ಮಂಜೂರಾತಿಗೆ ಮತ್ತೆ ವಿಧಾನಸಭೆಗೆ ಹೋಗಿ, ಅಲ್ಲಿ ಅದು ಅನುಮೋದನೆಯಾಗಬೇಕು ಮತ್ತು ಇಲ್ಲಿಗೆ ಮತ್ತೆ ಬರಬೇಕು. ಆದ್ದರಿಂದ, ತಾವು ನನ್ನ ಮೇಲೆ ನಂಬಿಕೆ ಇಟ್ಟು ಈ ವಿಧೇಯಕವನ್ನು ಅಂಗೀಕರಿಸಿಕೊಡಿ. ಖಂಡಿತವಾಗಿಯೂ ಸಹ ಮುಂದಿನ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನೂ ಸಹ ಇದರಲ್ಲಿ ಸದಸ್ಯರಾಗಿ ಮಾಡಲಿಕ್ಕೆ ಅವಕಾಶ ಮಾಡಿಕೊಡುವುದು ನನ್ನ ಜವಾಬ್ದಾರಿ ಎಂದು ನಾನು ಅಂದು ತಮ್ಮಲ್ಲಿ ನಿವೇದನೆ ಮಾಡಿಕೊಂಡಿದ್ದೆ.

(ಮುಂದು)

(949) 22.08.2025 01.10 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಭೈರೇಗೌಡ (ಮುಂದು):-**

ಅದನ್ನು ಒಪ್ಪಿ ಈ ಸದನ ಮೂಲ ವಿಧೇಯಕಕ್ಕೆ ಒಪ್ಪಿಗೆಯನ್ನು ಕೊಟ್ಟಿತ್ತು. ಇವತ್ತು ತಂದಿರುವ ತಿದ್ದುಪಡಿ ವಿಧಾನ ಪರಿಷತ್ತಿನ ಸದಸ್ಯರನ್ನು ಅದರಲ್ಲಿ ಒಬ್ಬ ಸದಸ್ಯರನ್ನಾಗಿ ನೇಮಕ ಮಾಡಲಿಕ್ಕೆ ಸರ್ಕಾರಕ್ಕೆ ಅಧಿಕಾರವನ್ನು ಕೊಡುವಂಥ

ಒಂದು ಸಣ್ಣ ತಿದ್ದುಪಡಿಯಾಗಿದೆ. ಹೋದ ಬಾರಿ ಸದನದಲ್ಲಿ ತಾವು ಏನು ಸೂಚನೆ ಕೊಟ್ಟಿದ್ದಿರಿ, ನಾವು ಮಾತು ಕೊಟ್ಟಿದ್ದೆವೋ ಅದರ ಪ್ರಕಾರ ಈ ತಿದ್ದುಪಡಿಯನ್ನು ತಂದಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ನಾನು ಏಕೆ ಹೇಳಿದೆನೆಂದರೆ ಜಿಲ್ಲೆಗಳಲ್ಲಿ ಹೋಗಿ ನೋಡಿದಾಗ ವಿಧಾನ ಸಭೆ ಸದಸ್ಯರು ಎಂದು ಹೇಳುವುದಿಲ್ಲ. ಅವರಿಗೆ ಶಾಸಕರು ಎಂದು ಹೇಳುತ್ತಾರೆ. ಕೆಳಗೆ ವಿಧಾನ ಪರಿಷತ್ ಸದಸ್ಯರು ಎಂದು ಬರೆದಿರುತ್ತಾರೆ. ಗೊತ್ತೇ ಆಗುವುದಿಲ್ಲ. ಕೆಲವು ಕಡೆ ವಿಧಾನ ಪರಿಷತ್ ಸದಸ್ಯರು ಎಂದು ಹಾಕುವುದಿಲ್ಲ. ಆ discrimination ಆಗಬಾರದು. ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಒಂದು ಸುತ್ತೋಲೆಯನ್ನು ಕಳುಹಿಸಿದ್ದೇನೆ. ಶಾಸಕರು, ವಿಧಾನಸಭೆ; ಶಾಸಕರು, ವಿಧಾನ ಪರಿಷತ್ ಎಂದು ಕಳುಹಿಸಬೇಕು. ಆಗ ಸಾರ್ವಜನಿಕರಿಗೆ ಗೊತ್ತಾಗುತ್ತದೆ. ಇದರಿಂದಾಗಿ ಎಲ್ಲಿಯೋ ಒಂದು ಕಡೆ ನಮ್ಮ dignity ಕಡಿಮೆಯಾಗುತ್ತದೇನೋ ಎನ್ನುವ ಭಾವನೆಯಿತ್ತು. ತಾವು ಅದಕ್ಕೆ ತಿದ್ದುಪಡಿ ಮಾಡಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 ಅನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಮಾನ್ಯ ಸಚಿವರು ವಿಧಾನ ಪರಿಷತ್ತಿನ ಸದಸ್ಯರಿಗೂ ಸ್ಥಾನವನ್ನು ಕಲ್ಪಿಸಿಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ.

ಮಾನ್ಯ ಸಚಿವರೆ, ಒಬ್ಬ ವಿಧಾನ ಪರಿಷತ್ತಿನ ಸದಸ್ಯರು ಎಂದು ಹೇಳಿದ್ದೀರಿ. ಆ ಭಾಗದಲ್ಲಿ ಇಬ್ಬರು-ಮೂವರು ಮಂದಿ ಬಂದಾಗ ಯಾರನ್ನು ಆಯ್ಕೆ ಮಾಡಬೇಕೆಂಬುದನ್ನು ಸ್ಪಷ್ಟ ಪಡಿಸಿಬಿಡಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, ವಿಧಾನ ಸಭೆ ಸದಸ್ಯರು ಒಬ್ಬರೇ, ಹಾಗಾಗಿ ಅದಕ್ಕೆ ತತ್ಸಮಾನವಾಗಿ ವಿಧಾನ ಪರಿಷತ್ ಸದಸ್ಯರು any one ಎಂದು ಮಾಡಿದ್ದೇವೆ. ಇಲ್ಲವಾದರೆ ಮತ್ತೆ ಇನ್ನೊಂದು ರೀತಿಯಾಗುತ್ತದೆ.

**ಸಭಾಪತಿಯವರು:-** ಮಾನ್ಯ ಶಶೀಲ್ ನಮೋಶಿ ಮಾತನಾಡಿ..

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಬರುವ 27ನೇ ತಾರೀಖಿಗೆ ಗಣೇಶೋತ್ಸವವನ್ನು....

**ಸಭಾಪತಿಯವರು:-** ಬಿಲ್ ಬಗ್ಗೆ ಮಾತನಾಡಿ.

**ಶ್ರೀ ಶಶೀಲ್ ಜಿ.ನಮೋಶಿ:-** ಏನಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೆ, ಉತ್ತರ ಹೇಳಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, ತಾವು ಈ ಹಿಂದೆ ವಿಧೇಯಕಕ್ಕೆ ಅನುಮೋದನೆಯನ್ನು ಕೊಟ್ಟಿದ್ದೀರಿ. ಈ ಸದನದ ಆಶಯದಂತೆ ಅದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಕೊಟ್ಟ ಮಾತನ್ನು ನಾವು ಉಳಿಸಿಕೊಂಡಿದ್ದೇವೆ. ತಾವು ಅದನ್ನು ಅಂಗೀಕರಿಸಬೇಕೆಂದು ಕೋರುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:- "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರೆಯಿತು**

**ಸಭಾಪತಿಯವರು:-** ಮಾನ್ಯ ಕಂದಾಯ ಸಚಿವರಿಗೆ ಸದನದ ಪರವಾಗಿ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. At least ತಾವು ವಿಧಾನ ಪರಿಷತ್ತಿಗೆ ಗೌರವವನ್ನು ನೀಡಿದಿರಿ.

**೦4. ಗಣೇಶೋತ್ಸವ ಮೆರವಣಿಗೆ ಸಂದರ್ಭದಲ್ಲಿ ಡಾಲ್ಬಿ ಸ್ಟೀರಿಯೋ ಅಥವಾ ಡಿ.ಜೆ. ಅಳವಡಿಸಬಾರದೆಂದು ಸರ್ಕಾರ ಷರತ್ತು ವಿಧಿಸಿರುವ ಕುರಿತು.**

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬರುವ 27ನೇ ತಾರೀಖಿನಂದು ನಾವು ಗಣೇಶೋತ್ಸವವನ್ನು ಎಲ್ಲಾ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಆಚರಿಸುತ್ತೇವೆ. ನಮ್ಮ ಜಿಲ್ಲೆಯಲ್ಲಿ ಮಾಲಿನ್ಯ ನಿಯಂತ್ರಣದ ಹೆಸರಿನಲ್ಲಿ ಡಾಲ್ಬಿ ಸ್ಟೀರಿಯೋಗಳನ್ನಾಗಲೀ ಅಥವಾ ಡಿಜೆಗಳನ್ನಾಗಲೀ ಅಳವಡಿಸಬಾರದೆಂದು ಷರತ್ತನ್ನು ವಿಧಿಸಲಾಗಿದೆ. ನಾನು ಬಿಬಿಎಂಪಿಯ ಒಂದು ಸುತ್ತೋಲೆಯನ್ನು ತೆಗೆದುಕೊಂಡಿದ್ದೇನೆ. ಅದರಲ್ಲಿ ಯಾವ ರೀತಿಯ ಷರತ್ತುಗಳಿಲ್ಲ. ಇದನ್ನೇ ನಾನು ಈಗ ಮಾನ್ಯ ಚೆಲುವರಾಯಸ್ವಾಮಿಯವರ ಜೊತೆಯಲ್ಲಿಯೂ ಚರ್ಚಿಸಿದಾಗ ನಮ್ಮ ಜಿಲ್ಲೆಯಲ್ಲಿ ಕೂಡ ಆ ರೀತಿಯ ಷರತ್ತುಗಳಿಲ್ಲ ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಈ ರೀತಿಯಾಗಿ ಅಳವಡಿಸಬಾರದೆಂದು ನಿಯಂತ್ರಣಗೊಳಿಸಿದ್ದಾರೆ. ಬ್ರಿಟಿಷರು ಕೂಡ..

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೆ, ಕೇವಲ ಹಿಂದೂ ಹಬ್ಬಗಳಿಗೆ ಮಾತ್ರ ಏಕೆ ಈ ರೀತಿ ಮಾಡಲಾಗುತ್ತದೆ? ರಂಜಾನ್ ಹಬ್ಬಕ್ಕೆ ನಮ್ಮ ಹುಬ್ಬಳ್ಳಿಗೆ ಬನ್ನಿ. ರಾತ್ರಿ 3 ಗಂಟೆಯವರೆಗೂ ಅಡ್ಡಾಡುತ್ತಿರುತ್ತಾರೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಇದು ನಮ್ಮ ಜಿಲ್ಲೆಯಲ್ಲಿಯೂ ಆಗಿದೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕೇಳಿ.. ಅವರು ಮಾತನಾಡುತ್ತಿದ್ದಾರೆ. ನೀವು ಕುಳಿತುಕೊಂಡು ಕೇಳಿ. ಬರೀ ಇದೇ ಆಯಿತು. ಎಲ್ಲರೂ ಎದ್ದೆದ್ದು ಮಾತನಾಡುತ್ತೀರಿ. ಕೇಳುವುದಿಲ್ಲ, ಹೇಳುವುದಿಲ್ಲ, ಬೇಕಾದ್ದನ್ನು ಮಾತನಾಡುತ್ತೀರಲ್ಲ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಸ್ವಾತಂತ್ರ್ಯ ಪೂರ್ವದಲ್ಲಿ ಶ್ರೀ ಬಾಲಗಂಗಾಧರ ತಿಲಕ್ ಅವರು ಸ್ವಾತಂತ್ರ್ಯಕ್ಕಾಗಿ ಈ ರೀತಿಯ ಒಂದು ಹಬ್ಬ ಮಾಡೋಣ ಎಂದು ಅಂದಿನಿಂದ ಪ್ರಾರಂಭ ಮಾಡಿದ್ದರು. ಬ್ರಿಟಿಷರಿಗೆ ಹೋಗಿ complain ಮಾಡಿದಾಗ ಅವರ ಹಬ್ಬವನ್ನು ಅವರು ಮಾಡಿಕೊಳ್ಳಲಿ ಎಂದು ಹೇಳಿದ್ದರು. ಈ ರೀತಿಯ ನಿರ್ಣಯಗಳನ್ನು ಈಗ ಏಕೆ ತೆಗೆದುಕೊಳ್ಳುತ್ತಿದ್ದಾರೆ? ದಯವಿಟ್ಟು ಈ ರೀತಿಯ ಷರತ್ತುಗಳನ್ನು ಹಾಕಬಾರದು.

ಮಾನ್ಯ ಸಭಾನಾಯಕರೆ, ಆದೇಶ ಮಾಡಿ. ಎಲ್ಲಾ ಕಡೆಗಳಲ್ಲಿಯೂ ಆ ರೀತಿಯ condition, restriction ಗಳು ಯಾವುದೂ ಇಲ್ಲವೆಂದು ದಯವಿಟ್ಟು ಒಂದು ಸಂದೇಶವನ್ನು ಕೊಡಬೇಕು.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ಇದನ್ನು ಸರ್ಕಾರದಿಂದ ನೇರವಾಗಿ ಇಡೀ ರಾಜ್ಯಕ್ಕೆ apply ಮಾಡಿರುವಂಥದ್ದಲ್ಲ. ಆಯಾ ಜಿಲ್ಲಾಧಿಕಾರಿಗಳು ಅಲ್ಲಿ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಕೊಟ್ಟಿರುತ್ತಾರೆ. ಅದೇನೆಂಬುದನ್ನು ಪರಿಶೀಲನೆ ಮಾಡೋಣ.

**ಶ್ರೀ ಶಶೀಲ್ ಜಿ.ನಮೋಶಿ:-** ಪರಿಶೀಲನೆ ಅಲ್ಲ ಸರ್...

**ಶ್ರೀ ಎನ್. ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ಅದು ಎಲ್ಲಾ ಕಡೆಗೂ ಕೊಟ್ಟಿರುವಂಥದ್ದಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನೋಡಿ. ಹೀಗೆ ಎಲ್ಲರೂ ಎದ್ದು ನಿಂತರೆ ಸದನವನ್ನು ನಡೆಸುವುದಿಲ್ಲ. ಏನು ಹುಡುಗಾಟಿಕೆಯನ್ನು ಮಾಡುತ್ತೀರಾ? ವಿರೋಧ ಪಕ್ಷದ ನಾಯಕರು ಎದ್ದಾಗ ಎಲ್ಲರೂ ಏಳುವುದು. ಇದೇನು ಕುರಿದೊಡ್ಡಿಯೆಂದು ತಿಳಿದಿದ್ದೀರಾ? ಕುಳಿತುಕೊಳ್ಳಿ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ..

**ಸಭಾಪತಿಯವರು:-** ಹೇಳಿದಿರಲ್ಲ. ಸರ್ಕಾರ ಹೇಳುತ್ತದೆ ಬಿಡಿ.

**ಶ್ರೀ ಶಶೀಲ್ ಜಿ.ನಮೋಶಿ:-** ಜಿಲ್ಲಾಧಿಕಾರಿಯವರಿಗೆ ಅಧಿಕಾರ ಕೊಟ್ಟರೆ ಜಿಲ್ಲಾಧಿಕಾರಿ ಏನು ಹೇಳುತ್ತಾರೆ ಗೊತ್ತಾ? ಬೆಂಗಳೂರಿನಲ್ಲಿ ಸರ್ಕಾರ ಮಾಡಿದೆ. ಅದಕ್ಕೆ ನಾವು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಯಾವ ಸರ್ಕಾರವೂ ಈ ರೀತಿಯ ಆದೇಶ ಮಾಡಿಲ್ಲ. ಮಾಡಬೇಡ ಎಂದು ಹೇಳಿ. ಯಾವುದೇ ಷರತ್ತುಗಳನ್ನು ಹಾಕಬಾರದೆಂದು ಹೇಳಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಹಬ್ಬ ಮಾಡುವುದಕ್ಕೆ ಏನಿದೆ ಅಡ್ಡಿ? ಹೇಳಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಆದೇಶ ಹಾಕಬೇಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಸರ್ಕಾರದಿಂದ ಆ ರೀತಿಯಾದಂಥ ಸುತ್ತೋಲೆ ಎಲ್ಲಿಯೂ ಇರುವುದಿಲ್ಲ. ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಅವರಿಗೆ ಅನುಮತಿ ಕೊಡಬೇಕೋ ಬೇಡವೋ ಎಂಬುದನ್ನು ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ತೀರ್ಮಾನಿಸುತ್ತದೆ. ನಿಯಮಗಳಿಗನುಸಾರ ಮಾಡಿರುತ್ತಾರೆ.

**ಶ್ರೀ ಸುನಿಲ್ ವಲ್ಯಾಪುರೆ:-** ಸರ್ಕಾರ ಬಿಟ್ಟು ಜಿಲ್ಲಾಡಳಿತ ಇರುತ್ತದೆಯೇ? ಬೆಂಗಳೂರಿಗೆ ಒಂದು ಕಾನೂನು, ಕಲಬುರಗಿಗೆ ಒಂದು ಕಾನೂನು ಇರುತ್ತದೆಯೇ?

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಬೆಂಗಳೂರಿಗೆ...

**ಸಭಾಪತಿಯವರು:-** ಮಾನ್ಯ ನಮೋಶಿಯವರೆ, ಕುಳಿತುಕೊಳ್ಳಿ. ಮಾನ್ಯ ಸುನಿಲ್ ವಲ್ಯಾಪುರೆ ಅವರು ಮಾತನಾಡುತ್ತಿದ್ದಾರೆ. ಅವರಿಗೂ ಯಾವಾಗಲಾದರೂ ಮಾತನಾಡಲು ಬಿಡಿ.

೦೫. **2025-26ನೇ ಸಾಲಿಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿಯ ಸಲುವಾಗಿ ಆಯವ್ಯಯದಲ್ಲಿ 5,000 ಕೋಟಿ ರೂಪಾಯಿಗಳನ್ನು ಘೋಷಿಸಿದ್ದರೂ ಇದುವರೆಗೂ Action Plan ತಯಾರಿಸದಿರುವುದರಿಂದ ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯವಾಗಿರುವ ಬಗ್ಗೆ.**

……

**ಶ್ರೀ ಸುನಿಲ್ ವಲ್ಯಾಪುರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಸದನದ ಮೂಲಕ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಕಲ್ಯಾಣ ಕರ್ನಾಟಕ ಭಾಗದ ಬಹಳ ಜ್ವಲಂತ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಹಿತಾಸಕ್ತಿಯಿಂದ ನಾವು ಪ್ರಶ್ನೆಯನ್ನು ಹಾಕಿದ್ದೆವು. ನಿನ್ನೆಯ ಅಜೆಂಡಾದಲ್ಲಿ ಅದು ಇತ್ತು. ಸದನವು ಬೇಗ ಮುಕ್ತಾಯಗೊಂಡಿತು. ಇವತ್ತೇನಾದರೂ ಬರುತ್ತದೆಯೇನೋ ಎಂದು ನಾವು ತಿಳಿದುಕೊಂಡಿದ್ದೆವು. ಇವತ್ತೂ ಬರಲಿಲ್ಲ. ನಮ್ಮ ಕಲ್ಯಾಣ ಕರ್ನಾಟಕ ಭಾಗಕ್ಕೆ ಎಷ್ಟು negligence?

ಹಿಂದೆ ವೈಜನಾಥ ಪಾಟೀಲರು ನಮಗೆ ಪ್ರತ್ಯೇಕ ರಾಜ್ಯ ಬೇಕೆಂದು ಹೇಗೆ ಹೋರಾಟ ಮಾಡಿದ್ದರೋ ಅಂಥ ಅನಿವಾರ್ಯತೆ ನಮಗೂ ಬರುತ್ತದೆಯೇನೋ ಎಂದು ಎನಿಸುತ್ತದೆ. ಮಾನ್ಯ ಸಭಾನಾಯಕರು ಅದೇ ಭಾಗದವರೇ ಇದ್ದಾರೆ. ಕೆಕೆಆರ್‌ಡಿಬಿ ವಿಷಯದಲ್ಲಿ ನಾವು ನಾಲ್ಕು ಜನ ಸೇರಿ ಪ್ರಶ್ನೆಯನ್ನು ಕೇಳಿದ್ದೆವು. ಬರಲೇ ಇಲ್ಲ. ಹೀಗಾದರೆ ಹೇಗೆ?

**ಸಭಾಪತಿಯವರು:-** ಪ್ರಶ್ನೆಗಳನ್ನು ಲಾಟರಿ ಮೂಲಕ ತೆಗೆಯಲಾಗುತ್ತದೆ.

**ಶ್ರೀ ಸುನೀಲ್ ವಲ್ಯಾಪುರೆ:-** ಲಾಟರಿ ಅಲ್ಲ. ನಿನ್ನೆಯ ಅಜೆಂಡಾದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಆ ಪ್ರಶ್ನೆಯನ್ನು ಕೇಳಿದ್ದೆವು.

**ಸಭಾಪತಿಯವರು:-** ಪ್ರಶ್ನೆಯಾದರೆ ಬರುವುದಿಲ್ಲ, ಗಮನ ಸೆಳೆಯುವ ಸೂಚನೆ ಅಥವಾ ನಿಯಮ ೩೩೦ ರ ಅಡಿಯಲ್ಲಿ ಪ್ರಸ್ತಾಪಿಸಿದರೆ ಅದು ನನ್ನ ಅಧಿಕಾರ ವ್ಯಾಪ್ತಿಗೆ ಬರುತ್ತದೆ.

**ಶ್ರೀ ಸುನಿಲ್ ವಲ್ಯಾಪುರೆ:-** ಬರುವುದಿಲ್ಲ ಎಂದರೆ ಹೇಗೆ? ಕಲ್ಯಾಣ ಕರ್ನಾಟಕ ಭಾಗಕ್ಕೆ ಇಷ್ಟು negligence ಆದರೆ ಹೇಗೆ? ಅದು ಕೇವಲ ನಮ್ಮ ಕಲಬುರಗಿ ಜಿಲ್ಲೆಗೆ ಸಂಬಂಧಪಟ್ಟಿದ್ದಲ್ಲ. ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಜಿಲ್ಲೆಗಳಿಗೆ ಸಂಬಂಧಪಟ್ಟಿದ್ದು. ಸರ್ಕಾರ ರೂ.5೦೦೦ ಕೋಟಿ ಘೋಷಣೆ ಮಾಡಿದೆ. ಇವತ್ತಿನವರೆಗೂ action plan approval ಆಗಿಲ್ಲ. ಮಾನ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಮಾರ್ಚ್ ಬಜೆಟ್‌ನಲ್ಲಿ ರೂ.5೦೦೦ ಕೋಟಿ announce ಆಗಿದೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, action plan approval ಆಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಬಂದಿದೆ. ಅವರು ಪ್ಲಾನ್ ಮಾಡುತ್ತಿದ್ದಾರೆ.

**ಶ್ರೀ ಸುನಿಲ್ ವಲ್ಯಾಪುರೆ:-** ಬಜೆಟ್‌ನಲ್ಲಿ announce ಆಗಿ ಆರು ತಿಂಗಳಾಯಿತು. ಆದರೆ ಇವತ್ತಿಗೂ ಇನ್ನೂ action plan approval ಆಗಿಲ್ಲ.

**ಶ್ರೀ ಡಿ.ಸುಧಾಕರ್:-** ಪ್ರತಿಯೊಂದೂ ಬಂದಿದೆ. Already Orders issue ಆಗುತ್ತಿದೆ. ಎಲ್ಲಿಯೂ ನಿಂತಿಲ್ಲ. ಎಂ.ಎಲ್.ಸಿ.ಗಳಿಗೆ ಆ ಭಾಗದಲ್ಲಿ ಕೊಟ್ಟಿಲ್ಲ.

**(ಮುಂದು)**

**(950) 22-08-2025 (1.20) ಕೆಜಿ:ಕೆಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸುನೀಲ್ ವಲ್ಯಾಪುರ್ (ಮುಂದು):-**

ನಮ್ಮ ಎಂ.ಎಲ್.ಸಿಯವರಿಗೆ KKRDB (Kalyana Karnataka Region Development Board) ಯಲ್ಲಿ ಒಂದು ಪೈಸೆಯೂ ಕೊಡುತ್ತಿಲ್ಲ. ನಾವು ವಿರೋಧ ಪಕ್ಷದವರು ಅಷ್ಟೇ ಅಲ್ಲ. ಅದರಲ್ಲಿ ಆಡಳಿತ ಪಕ್ಷದವರು ಸಹ ಇದ್ದಾರೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಅದು ಪ್ರತಿ ವಿಧಾನಸಭಾವಾರು ಹಂಚಿಕೆಯಾಗುತ್ತದೆ. ವಿಧಾನಸಭಾವಾರು ಹಂಚಿಕೆಯಾಗುವ ಸಂದರ್ಭದಲ್ಲಿ ವಿಧಾನಸಭೆಗೆ ಸಂಬಂಧಪಟ್ಟಂತಹ ಶಾಸಕರು ಇರುತ್ತಾರೆ. ಆ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಅದನ್ನು ಪ್ರತಿಯೊಂದು ಜಿಲ್ಲೆಗೆ ಪಟ್ಟಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತಾರೆ. Macro projects ಎಂದು ಇದೆ, ಅದು ಮಾನ್ಯ ಜಿಲ್ಲಾ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆಯಾಗುತ್ತದೆ. ಈಗ ಉದಾಹರಣೆಗೆ ನಮ್ಮ ಜಿಲ್ಲೆಯದ್ದು, ನಾವು ಎಲ್ಲಾ ಶಾಸಕರ ಮೂಲಕ ಪಟ್ಟಿಯನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಪಟ್ಟಿ approval ಆಗಿದೆ. ಈಗಾಗಲೇ ಒಂದೊಂದು ಜಿಲ್ಲೆಯಲ್ಲಿ work ಗಳ tender process ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅವರ ಅಧಿಕಾರಿಗಳು ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಯಾರು ಹೇಳಿದ್ದು?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಕರ್ನಾಟಕ ಕಲ್ಯಾಣ ಭಾಗದ ಸಚಿವರು ಇದ್ದಾರೆ. ಇವತ್ತಿಗೂ action plan approval ಆಗಿಲ್ಲ. ಯಾವುದೂ ಆಗಿಲ್ಲ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, action plan approval ಆಗಿಲ್ಲ. ನಾವು ಜಿಲ್ಲೆಯಿಂದ ಪಟ್ಟಿಯನ್ನು ಕಳುಹಿಸುತ್ತಿದ್ದೇವೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕಲ್ಯಾಣ ಕರ್ನಾಟಕ ಭಾಗದ ಮೇಲೆ ಕಾಳಜಿ ಇಲ್ಲ. ಇಬ್ಬಿಬ್ಬರು ಮುಖ್ಯಮಂತ್ರಿಯವರು ಆಗಿರುವಂತಹ ಜಿಲ್ಲೆ ಅದು. ಕಲ್ಯಾಣ ಕರ್ನಾಟಕ ಭಾಗ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಕಾಳಜಿ ಇಲ್ಲದೇ ಐದು ಸಾವಿರ ಕೋಟಿ ...

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಆ ಭಾಗದ ಜನರು ಅವರಿಗೆ ಬಹುಮತವನ್ನು ಕೊಟ್ಟಿದ್ದಾರೆ., ಆದರೂ ಸಹ negligence ಏಕೆ? Action plan.....

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಅವರು ತಮ್ಮ ಕಾಲದಲ್ಲಿ ಏನೂ ಮಾಡಲಿಲ್ಲ. ಈಗ ನಾವು ಮಾಡುವುದಕ್ಕೆ ಹೋದರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುತ್ತಿದ್ದಾರೆ. ನಾನು ಜಿಲ್ಲಾ ಮಂತ್ರಿ ಇದ್ದೇನೆ. Action plan ನನ್ನ ಬಳಿ ಬಂದಿದೆ. ನಾವು ಮಾಡುತ್ತೇವೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇನ್ನೂ ಎಷ್ಟು ತಿಂಗಳು ಬೇಕು ಹೇಳಲಿ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮಂಡನೆ ಮಾಡಿ ಆರು ತಿಂಗಳು ಆಗಿದೆ. ಈಗ ಆಗಸ್ಟ್ ತಿಂಗಳು.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಹೌದು. ನಾವು ಈ ವರ್ಷದ ಬಜೆಟ್ ...

**(ಗೊಂದಲ)**

**ಶ್ರೀ ಎಸ್.ಎನ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವರ್ಷದ ಬಜೆಟ್ ಆದ ನಂತರ ಸರ್ಕಾರದಿಂದ communication ಹೋಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಕುಳಿತುಕೊಳ್ಳಿ. ಸಭಾನಾಯಕರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಎಸ್.ಎನ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದನ್ನು procedure ಪ್ರಕಾರ ಪ್ಲಾನ್ ಮಾಡಿ ಅದೆಲ್ಲವನ್ನು ರಾಜ್ಯಪಾಲರಿಗೆ ಕಳುಹಿಸಿದ್ದಾರೆ. ಈ ಸಾಲಿನ ಬಜೆಟ್‌ನಲ್ಲಿ 5,000 ಕೋಟಿ ರೂಪಾಯಿಗಳು ಆಗಿದೆ. ಈ ರೀತಿಯಾಗಿ ಶಿಕ್ಷಣ ಇಲಾಖೆಗೆ ಇಷ್ಟು ಎಂದು ನಿಗದಿ ಮಾಡಿದ್ದಾರೆಂದು ಹೇಳಿ, ಮಾನ್ಯ ರಾಜ್ಯಪಾಲರು ಜುಲೈ ತಿಂಗಳ ಅಂತ್ಯಕ್ಕೆ ಅನುಮತಿ ಕೊಟ್ಟಿದ್ದಾರೆ. ಈಗ ಅದು ಬೋರ್ಡ್‌ಗೆ ಹೋಗಿದೆ. ಬೋರ್ಡ್‌ನಲ್ಲಿ ಚರ್ಚೆಯಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಕೊಟ್ಟಿದ್ದಾರೆ. ಅಲ್ಲಿ ಜಿಲ್ಲಾ ಮಂತ್ರಿಯವರ ಸಭೆಗೆ ಯಾವ ಯಾವ ತಾಲ್ಲೂಕುಗಳಿಂದ proposals ಗಳು ಬರುತ್ತವೆಯೋ, ಆಗ ತಾಲ್ಲೂಕುವಾರು ಆಗುತ್ತದೆ. ನಂತರ ತಾಲ್ಲೂಕುವಾರು ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸ್ಥಳೀಯ ಸಂಸ್ಥೆಗಳಿಂದ ಅದಕ್ಕೆ ಅನುಮೋದನೆ ಪಡೆದು ಜಿಲ್ಲಾಧಿಕಾರಿಯವರಿಗೆ ಕೊಡುತ್ತಾರೆ. ಜಿಲ್ಲಾಧಿಕಾರಿಯವರು ಜಿಲ್ಲಾ ಮಂತ್ರಿಯವರ ಅಧ್ಯಕ್ಷತೆಯಲ್ಲಿ action plan ಅನ್ನು approval ಮಾಡಿ ಬೋರ್ಡ್‌ಗೆ ಕಳುಹಿಸುತ್ತಾರೆ. Immediately, ಈ ಬಗ್ಗೆ Board ನಿರ್ದೇಶನ ಕೊಟ್ಟು ಅವರಿಗೆ ವರ್ಕ್... This is the procedure. ಅವತ್ತು ಏನಾಗಿದೆ, ಅದೇ procedure ಈಗ ಆಗುತ್ತಿದೆ. ನನ್ನ ಲೆಕ್ಕದ ಪ್ರಕಾರ ಈ ವರ್ಷ ಇನ್ನು ಬೇಗ ಆಗಿದೆ. ಕಳೆದ ವರ್ಷ ಮಾನ್ಯ ರಾಜ್ಯಪಾಲರ ಬಳಿ 2/3 ತಿಂಗಳು ತಡವಾಗಿತ್ತು. ಆ ಭಾಗದ ಐದು ಜನರು ಸಚಿವರು ಹೋಗಿ ಮನವಿ ಮಾಡಿದಾಗ clarification ಕೇಳಿ ತಕ್ಷಣ ಮಾಡಿದರು. ಈ ಬಾರಿ ಅಧ್ಯಕ್ಷರು ಹೋಗಿ ಮಾನ್ಯ ರಾಜ್ಯಪಾಲರನ್ನು ಭೇಟಿಯಾಗಿ ಅದನ್ನು 15 ದಿವಸಗಳಲ್ಲಿ sanction ಮಾಡಿಸಿಕೊಂಡು ಬಂದಿದ್ದಾರೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಕಳೆದ ವರ್ಷ 3000 ಕೋಟಿ ರೂಪಾಯಿಗಳು ಖರ್ಚು ಆಗಿದೆ. ರೂ.2,500 ಕೋಟಿ ರೂಪಾಯಿಗಳು ಹಾಗೆಯೇ ಉಳಿದಿದೆ.

**ಸಭಾಪತಿಯವರು:-** ತಾವು ಒಂದು ನಿಮಿಷ ಕೇಳಿ.

**ಶ್ರೀ ಎಸ್.ಎನ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ವಿವರವಾಗಿ ಮಾತನಾಡಬೇಕೆಂದರೆ, ಅವರು ನೋಟಿಸ್ ಕೊಡಲಿ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ರೂ.2,500 ಕೋಟಿಗಳು ಏನಾಯಿತು; ಅವರ ಸರ್ಕಾರ ಇದ್ದಾಗ ಏನಾಯಿತು, ಅವರು ಐದು ವರ್ಷಗಳ ಕಾಲ ಏನೇನು ಮಾಡಿದರು, ಅವರು ಎಷ್ಟು ಕೊಟ್ಟರು ಎಂಬುದರ ಬಗ್ಗೆ ವಿವರವಾಗಿ ಉತ್ತರ ಕೊಡುತ್ತೇನೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನಾವು ಕೊಟ್ಟಿರುವ ಹಣವನ್ನು ಅವರು ಖರ್ಚು ಮಾಡುತ್ತಿಲ್ಲ. ಒಂದು ವರ್ಷದಲ್ಲಿ 12 ತಿಂಗಳು. ಬರಿ 6 ತಿಂಗಳ ಕಾಲ action plan approval ಮಾಡುವುದರಲ್ಲಿಯೇ ಹೋಯಿತು ಎಂದರೆ, ಉಳಿದ 6 ತಿಂಗಳಲ್ಲಿ ಕೆಲಸ ಹೇಗೆ ಮಾಡಬೇಕು. ಸುಮಾರು 5,000 ಕೋಟಿ ರೂಪಾಯಿಗಳಲ್ಲಿ 2,500 ಕೋಟಿ ರೂಪಾಯಿಗಳು...

**(ಗೊಂದಲ)**

**ಶ್ರೀ ಎಸ್.ಎನ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವರ್ಷ ಬಹಳ ಬೇಗ ಆಗುತ್ತದೆ. ಅವರು ಬೇಕಾದರೆ ನೋಟಿಸ್ ಕೊಡಲಿ. ನಾವು ಅದಕ್ಕೆ ಉತ್ತರ ಕೊಡುತ್ತೇವೆ. ಮಾನ್ಯ ರಾಜ್ಯಪಾಲರ ಅನುಮೋದನೆ ತಕ್ಷಣ ಆಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ,

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, KKRDB ಹಣ...,

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ ಇರಿ. ಮಾನ್ಯ ಸದಸ್ಯರೇ, ತಾವು raise ಮಾಡಿದ್ದೀರಿ. ಅದಕ್ಕೆ ಸರ್ಕಾರ ಉತ್ತರ ಕೊಟ್ಟಿದೆ. Whatever the statement given by the hon'ble Minister on the floor of the House is the Government statement. ಅವರು ಹೇಳಿಕೆ ಕೊಟ್ಟಿದ್ದಾರೆ ಎಂದರೆ, ಸುಳ್ಳು ಹೇಳುವುದಕ್ಕೆ ಬರುವುದಿಲ್ಲ. ಅವರು ಹೇಳಿಕೆ ಕೊಟ್ಟಿದ್ದಾರೆ. ಅದನ್ನು verify ಮಾಡಿಕೊಳ್ಳಿ. ಏನಾದರೂ ಹೆಚ್ಚು ಕಡಿಮೆ ಇದ್ದರೆ ನನಗೆ ಹೇಳಿ. ನಾನು ಸರಿಪಡಿಸುತ್ತೇನೆ. (ಗೊಂದಲ) ಈಗ ಮಾನ್ಯ ಸಚಿವರಾದ ತಂಗಡಗಿ ಶಿವರಾಜ್ ಸಂಗಪ್ಪ ರವರು ಉತ್ತರ ಕೊಟ್ಟಿದ್ದಾರೆ. ಶ್ರೀ ಎಂ.ಬಿ.ಪಾಟೀಲ್‌ರವರು ಸಹ ಉತ್ತರ ಕೊಟ್ಟಿದ್ದಾರೆ.

**ಶ್ರೀ ಶಶೀಲ್ ಜಿ ನಮೋಶಿ:-** ಮಾನ್ಯ ಸಭಾಪತಿಯವರೇ, ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ವಿಧಾನ ಪರಿಷತ್ತು ಸದಸ್ಯರಿಗೆ ಅಭಿವೃದ್ಧಿಗಾಗಿ ಇಂತಿಷ್ಟು ಹಣವೆಂದು ಕೊಡುತ್ತಾರೆ. ಆದರೆ, ಕಲ್ಯಾಣ ಕರ್ನಾಟಕದಲ್ಲಿ ಏಕೆ ಕೊಡುವುದಿಲ್ಲ?

**ಶ್ರೀ ಎಸ್.ಎನ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರಿಗೂ ಗೊತ್ತಿದೆ. ಮಾನ್ಯ ಸಚಿವರಾದ ಹೆಚ್.ಕೆ.ಪಾಟೀಲ್‌ರವರ ನೇತೃತ್ವದಲ್ಲಿ ಕಮಿಟಿ ಮಾಡಿ ಈ ಸರ್ಕಾರ ಬಂದ ಮೇಲೆ ಇದು ಪ್ರಾರಂಭವಾಗಿದೆ. 2013 ರಲ್ಲಿ ಮಾನ್ಯ ಸಿದ್ಧರಾಮಯ್ಯ ನವರ ಸರ್ಕಾರ ಬಂದ ಮೇಲೆ ಇದಕ್ಕೆ ಅನುಮೋದನೆ ನೀಡಿ ಮಾಡಿದರು. ಅವರು 1,000 ಕೋಟಿ ರೂಪಾಯಿಗಳನ್ನು ಕೊಟ್ಟರು. ಆಗ ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿ ಏನೇನು rules and regulations ತರಬೇಕೆಂದು ಮಾಡಿದ್ದಾರೆ. ಡಾ॥ ಡಿ.ಎಂ. ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಆಯಾಯಾ constituency ಯವರಿಗೆ fix ಮಾಡಿದ್ದಾರೆ. 41 constituency ಗಳಿಗೆ., ಇದನ್ನು ನಮ್ಮ ಸರ್ಕಾರ ಜಾರಿಗೊಳಿಸಿದೆ.,

**(ಗೊಂದಲ)**

(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎರಡೂ ಕಡೆಯ ಮಾನ್ಯ ಸದಸ್ಯರು ಒಟ್ಟಿಗೆ ಎದ್ದುನಿಂತು ಪರಸ್ಪರ ಮಾತನಾಡತೊಡಗಿದರು)

**ಸಭಾಪತಿಯವರು:-** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಇವರು ಅವರೇ, ಅವರು ಇವರೇ, ತಾವು ಅವರಿಗೆ ಹೇಳಿದ್ದೀರಿ. ಸಾಕು ಬಿಡಿ.

**ಪ್ರಶ್ನೋತ್ತರಗಳು**

**ಸಭಾಪತಿಯವರು:-** ಶ್ರೀಮತಿ ಭಾರತಿಶೆಟ್ಟಿಯವರೇ, ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

**(ಗೊಂದಲ)**

**ಶ್ರೀ ಶಶೀಲ್ ಜಿ ನಮೋಶಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಶ್ರೀ ಗಣೇಶ ಹಬ್ಬದ ಬಗ್ಗೆ ಉತ್ತರ ಕೊಡಲಿಲ್ಲ. ನಮ್ಮ ಕಡೆಗೆ restriction ಹಾಕಿದ್ದಾರೆಯೇ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದ್ದೇವೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.,

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರಿಗೆ ಹೇಳುವುದಕ್ಕೆ ಬಿಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಇಡೀ ರಾಜ್ಯಕ್ಕೆ ಒಂದು ಕಾನೂನು ಇರಲಿ. ಇದು ಆಯಾಯಾ ಜಿಲ್ಲೆಗಳ ಜಿಲ್ಲಾಧಿಕಾರಿಯವರ ತೀರ್ಮಾನವೆಂದರೆ, ಅದು ತಪ್ಪಾಗುತ್ತದೆ. ಈಗ ಅವರು ಎತ್ತಿರುವಂತಹ ಪ್ರಶ್ನೆ ಏನೆಂದರೆ, ನಾವು ಅನೇಕ ಬಾರಿ ಕಲಬುರಗಿಗೆ ಹೋಗಿದ್ದೇವೆ. ಅದು ಒಂದು ರೀತಿ Republic of Kalaburagi ಆಗಿದೆ. ಆದ್ದರಿಂದ ಅಲ್ಲಿ ಕಾನೂನುಗಳು ಬೇರೆಯಾಗುತ್ತವೆ. ಆ ಕಾರಣದಿಂದ (ಗೊಂದಲ) ಆ ರೀತಿ ಆಗಿದೆ ಅಲ್ಲಿ. ಅದಕ್ಕೆ ದೊಡ್ಡ ಹೋರಾಟಗಳು ನಡೆದಿವೆ. ಅದರಿಂದ ಕಾನೂನು ಎಲ್ಲರಿಗೂ ಒಂದೇ ಇರಲಿ. ಈ ರೀತಿಯ restrictions ಬೇಡ. ನಮ್ಮ ಹಬ್ಬಗಳನ್ನು ಕೊಂಡಾಡಲಿಕ್ಕೆ ನಾವು ಅನುಮತಿಯನ್ನು ತೆಗೆದುಕೊಳ್ಳಬೇಕೇ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅಲ್ಲಿನ ಜಿಲ್ಲಾಧಿಕಾರಿಗಳು ಅಲ್ಲಿ ಇರುವಂತಹ ಪರಿಸ್ಥಿತಿಯ ಮೇಲೆ guidelines ನೀಡುತ್ತಾರೆ. (ಗೊಂದಲ) ಅದು ಎಲ್ಲಾ ಅವರ ಕಾಲಕ್ಕೆ ಆಗಿ ಹೋಯಿತು. ಈ ಸರ್ಕಾರದಲ್ಲಿ ಅದು ಎಲ್ಲಾ ನಡೆಯುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಇರಿ. ಅವರು ಇಡೀ ರಾಜ್ಯದಲ್ಲಿ ಒಂದೇ ಕಾನೂನು ಇರಬೇಕೆಂದು ಹೇಳಿದ್ದಾರೆ. ಹಾಗಾಗಿ, ಇಡೀ ರಾಜ್ಯದಲ್ಲಿ ಒಂದೇ ಕಾನೂನು ಮಾಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾಡಲಿ. ನಮ್ಮ ಹಬ್ಬಗಳನ್ನು ಕೊಂಡಾಡಲಿಕ್ಕೆ ಏನು restriction ಮಾಡಬೇಡಿ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಎಲ್ಲರೂ ಸುಮ್ಮನಿರಿ. ಮಾನ್ಯ ಸದಸ್ಯರಾದ ಡಿ.ಎಸ್.ಅರುಣ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ವಿಷಯ ಬಹಳ ಗಂಭೀರವಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಎಷ್ಟು ಸಾರಿ ನಾನು ತಮ್ಮ ಮಾತುಗಳನ್ನು ಕೇಳುವುದು ಹೇಳಿ? ತಾವು ಸುಮ್ಮನಿರುತ್ತೀರೋ, ಇಲ್ಲವೆಂದರೆ, ನಾನು adjourn ಮಾಡಲೇ; ಎಲ್ಲರೂ ಕುಳಿತುಕೊಳ್ಳಬೇಕು.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ,

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಅಲ್ಲಿಗೆ ಒಂದು ಕಾನೂನು. ಇಲ್ಲಿಗೆ ಒಂದು ಕಾನೂನು. ಕಲ್ಬುರ್ಗಿಗೆ ಕಾನೂನು ಬೇರೆ ಇದೆಯೇ? ಇಲ್ಲಿಗೆ ಬೇರೆ ಕಾನೂನು ಇದೆಯೇ? ಈ ಬಗ್ಗೆ ಮಾನ್ಯ ಸಚಿವರು clarity ಕೊಡಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸುನೀಲ್ ವಲ್ಯಾಪುರ್‌ರವರೇ, ಈಗ ಹೇಳಿದ್ದೇನೆ ಅಲ್ಲವೇ; ತಮಗೆ ಹೇಳಿದ್ದು ತಿಳಿಯುತ್ತದೆಯೋ ಇಲ್ಲವೋ; ಎಲ್ಲಾ ಕಡೆ ಕಾಯ್ದೆ ಒಂದೇ ಮಾಡಿ ಎಂದು ಹೇಳಿದ್ದೇನೆ ಅಲ್ಲವೇ; ನಾನು ಸದನವನ್ನು adjourn ಮಾಡುತ್ತೇನೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಸಭಾನಾಯಕರು ಹೇಳಿಕೆ ಕೊಡಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸುನೀಲ್ ವಲ್ಯಾಪುರ್‌ರವರೇ, ಈಗ ಹೇಳಿದ್ದು ತಾವು ಕೇಳಿಸಿಕೊಳ್ಳಲಿಲ್ಲವೇ? ಮಾನ್ಯ ಡಿ.ಎಸ್.ಅರುಣ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1406 ಮಾನ್ಯ ಕಾರ್ಮಿಕ ಸಚಿವರಿಗೆ.,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ.ನಮೋಶಿಯವರೇ, ಕುಳಿತುಕೊಳ್ಳಿ. ಇದು ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಒಂದು ನಿಮಿಷ. ಇದು ಧರ್ಮ ಶಾಲೆಯೇ? ಎಲ್ಲರಿಗೂ ಸ್ವಲ್ಪ discipline ಬೇಕು. ಇದಕ್ಕೆ ಸ್ವಲ್ಪ discipline ಬೇಕು. ನಾನು ಇಲ್ಲಿಗೆ close ಮಾಡಿ ಸದನವನ್ನು ಮುಂದೂಡುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಲಿಖಿತ ಮೂಲಕ ನೀಡುವ ಉತ್ತರಗಳನ್ನು ಮಂಡಿಸಿ..

**(ಗೊಂದಲ)**

**06. ಪ್ರಶ್ನೋತ್ತರಗಳು**

**ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 22ನೇ ಆಗಸ್ಟ್, 2025, ಸಮೂಹ-5ರ ಸದನದಲ್ಲಿ ಉತ್ತರಿಸುವ ಒಟ್ಟು 18 ಪ್ರಶ್ನೆಗಳ ಪೈಕಿ 07 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 165 ಪ್ರಶ್ನೆಗಳ ಪೈಕಿ 61 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

**೦7. ನಿಯಮ 58ಎ ಮೇರೆಗೆ ಶೂನ್ಯ ವೇಳೆಯ ಪ್ರಸ್ತಾವಗಳಿಗೆ ಸರ್ಕಾರದ ಲಿಖಿತ ಉತ್ತರಗಳ ಮಂಡನೆ.**

**ಅ) ವಿಷಯ:- ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ, 187 ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಅವಧಿ ಮುಗಿದಿದ್ದರೂ, ರಾಜ್ಯ ಸರ್ಕಾರ ಈವರೆಗೂ ಮೀಸಲಾತಿ ಪಟ್ಟಿ ನೀಡದಿರುವ ಬಗ್ಗೆ.**

- -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರು ದಿನಾಂಕ 11.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಉತ್ತರ:** ಅಧಿಕಾರ ವಿಕೇಂದ್ರಿಕರಣ ತತ್ವದಡಿ 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರಿಕರಣಗೊಳಿಸುವ ಉದ್ದೇಶದಿಂದ ಸಂವಿಧಾನದ 73 ನೇ ತಿದ್ದುಪಡಿ ಅನುಸಾರ ರಾಜ್ಯದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಅನ್ನು ದಿನಾಂಕ: 10-05-1993 ರಿಂದ ಜಾರಿಗೊಳಿಸಲಾಗಿರುತ್ತದೆ. ಈ ಅಧಿನಿಯಮದನ್ವಯ ರಚಿಸಲಾಗಿರುವ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬೇಕೆಂಬುದು ಅಧಿನಿಯಮದ ಆಶಯವಾಗಿರುತ್ತದೆ.

**1) <u>ಗ್ರಾಮ ಪಂಚಾಯತಿ ಚುನಾವಣೆ ಬಗ್ಗೆ.</u>**

1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 41 ರ ಪ್ರಕಾರ ಗ್ರಾಮ ಪಂಚಾಯತಿಯ ಸದಸ್ಯರ ಅವಧಿಯು ಐದು ವರ್ಷಗಳಾಗಿರುತ್ತದೆ. ಪ್ರಕರಣ 42 ರ ಪ್ರಕಾರ ಗ್ರಾಮ ಪಂಚಾಯತಿ ಸದಸ್ಯರ ಅವಧಿಯು ಪ್ರಥಮ ಸಭೆ ಗೊತ್ತುಪಡಿಸಿದ ದಿನಾಂಕದಿಂದ ಪ್ರಾರಂಭವಾಗುತ್ತದೆ.

2) ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಡಿಸೆಂಬರ್ 2020 ರಲ್ಲಿ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಸಲಾಗಿರುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಜನವರಿ-ಫೆಬ್ರುವರಿ 2021 ರಲ್ಲಿ ಚುನಾವಣೆ ನಡೆಸಿ ಆಯ್ಕೆ ಮಾಡಲಾಗಿದ್ದು, ಈ ಅವಧಿಯು ಜನವರಿ- ಫೆಬ್ರುವರಿ 2026 ರವರೆಗೆ ಇರುತ್ತದೆ. ಅವಧಿ ಮುಗಿದ ನಂತರ ಚುನಾವಣೆ ನಡೆಸಲು ಕ್ರಮ ವಹಿಸಲಾಗುವುದು.

6. ಆಯೋಗದ ಶಿಫಾರಸ್ಸಿನಂತೆ ಸರ್ಕಾರವು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಯನ್ನು ಶಿವಮೊಗ್ಗ ಜಿಲ್ಲೆ ಹೊರತುಪಡಿಸಿ ಅಧಿಸೂಚನೆ ಹೊರಡಿಸಿದೆ.
7. ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 26 ಶಾಸನ 2023, ದಿನಾಂಕ:30-01-2024 ರಂದು ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದ ತಾಲ್ಲೂಕುಗಳ ಜಿಲ್ಲಾ ಪಂಚಾಯತಿ ಸದಸ್ಯರ ಸಂಖ್ಯೆ ನಿಗಧಿಪಡಿಸುವ ಸಂಬಂಧ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ.
8. ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 03 ಶಾಸನ 2024, ದಿನಾಂಕ:11-03-2024 ರಂದು ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ ಸದಸ್ಯರ ಸಂಖ್ಯೆ ನಿಗಧಿಪಡಿಸುವ ಸಂಬಂಧ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ.
9. ನಂತರ ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಯ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸೀಮಾ ಗಡಿಯನ್ನು ಗುರುತಿಸಿ ಅಧಿಸೂಚಿಸಲಾಗಿದೆ.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳಿಗೆ ಮೀಸಲಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಚುನಾವಣೆ ನಡೆಸಲಾಗುವುದು.

ಮುಂದುವರೆದು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 212 ಜಿಪಸ 2021, ದಿನಾಂಕ:26.04.2021ರಲ್ಲಿ ಆಡಳಿತ ಅಧಿಕಾರಿಯನ್ನು ನೇಮಿಸಲಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 239ರಲ್ಲಿನ ಉಪಬಂಧದನ್ವಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಆಡಳಿತಾಧಿಕಾರಿಗಳು ಎಲ್ಲಾ ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅಧಿಕಾರ ಹೊಂದಿರುತ್ತಾರೆ. ಆಡಳಿತಾಧಿಕಾರಿಗಳು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡು ಯೋಜನೆ/ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಶೀಘ್ರವಾಗಿ ಮೀಸಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಚುನಾವಣಾ ಆಯೋಗಕ್ಕೆ ಕಳುಹಿಸಲಾಗುವುದು.

**ಆ) ವಿಷಯ:- ಭೂ ಪರಿವರ್ತಿತ ಜಮೀನಿನ ಏಕವಿನ್ಯಾಸ ನಕ್ಷೆಗಾಗಿ ಜಿಲ್ಲಾ ಕೇಂದ್ರಕ್ಕೆ ಪ್ರಯಾಣ ಬೆಳೆಸುವ ಸರ್ಕಾರಿ ಆದೇಶವು ಗ್ರಾಮೀಣ ಜನರನ್ನು ಹೈರಾಣುಗೊಳಿಸಿರುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ರವರು ದಿನಾಂಕ 12.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯು 1961 ರಿಂದ ಜಾರಿಯಲ್ಲಿರುತ್ತದೆ. ಸದರಿ ಕಾಯ್ದೆಯ ಅವಕಾಶಗಳಡಿ ನಗರ ಪ್ರದೇಶಗಳಿಗೆ ಮಹಾಯೋಜನೆಯನ್ನು ಸಿದ್ಧಪಡಿಸಿ ನಗರಗಳ ಯೋಜನಾ ಬದ್ಧಬೆಳವಣಿಗೆಗಾಗಿ ಯೋಜನೆಗಳನ್ನು ರೂಪಿಸಿ ಅಭಿವೃದ್ಧಿಗಳಿಗೆ ಅನುಮೋದನೆಯನ್ನು ನೀಡಲಾಗುತ್ತಿರುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಇತ್ತೀಚೆಗೆ ತೀವ್ರಗತಿಯಲ್ಲಿ ಬೆಳವಣಿಗೆಗಳು ಬರುತ್ತಿದ್ದು ಅಲ್ಲಿ ಯೋಜನೆಗಳನ್ನು ರೂಪಿಸದೇ ಇದ್ದಲ್ಲಿ ಮುಂಬರುವ ದಿನಗಳಲ್ಲಿ ಅವುಗಳು ಸಹ ನಗರಗಳ ಭಾಗವಾಗಿರುತ್ತದೆ. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನಗಳು ಇಲ್ಲದೆ ವಂಚಿತವಾಗಿ ಯೋಜನಾ ಬದ್ಧವಲ್ಲದ ಬೆಳವಣಿಗೆಗಳು ಬರುತ್ತವೆ. ಇವುಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿಯಂತ್ರಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಗೆ ತಿದ್ದುಪಡಿ ತಂದು ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ನಗರ ಪ್ರದೇಶಗಳಲ್ಲಿ ದೊರೆಯುವ ಎಲ್ಲಾ ಮೂಲಭೂತಸೌಕರ್ಯಗಳು ಒದಗಿಸುವಂತೆ ಅವಕಾಶಗಳನ್ನು ಕಲ್ಪಿಸುವುದು ಅವಶ್ಯವಾಗಿರುತ್ತದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯು ಕೇವಲ ನಗರ ಪ್ರದೇಶಗಳಿಗೆ ಸೀಮಿತವಾದ ಪರಿಕಲ್ಪನೆಯಾಗದೆ, ಗ್ರಾಮೀಣ ಪ್ರದೇಶಗಳ ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿಗೆ ಅತ್ಯಂತ ಮಹತ್ವದಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ನಗರ ಯೋಜನೆಯು ಭೂಮಿಯ ಸಮರ್ಪಕ ಬಳಕೆ, ಮೂಲಭೂತ ಸೌಕರ್ಯಗಳು ಮತ್ತು ಪರಿಸರವನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಗುರಿಯನ್ನು ಹೊಂದಿದೆ. ಇದು ಗ್ರಾಮಗಳ ವಿಶಿಷ್ಟಪಾತ್ರ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಳ್ಳುವಾಗ ನಿವಾಸಿಗಳಿಗೆ ಉತ್ತಮ ಜೀವನ ಗುಣಮಟ್ಟವನ್ನು ಒದಗಿಸಲು ಸಹಾಯ ಮಾಡುತ್ತದೆ.

ಈ ಹಿನ್ನೆಲೆಯಲ್ಲಿ, ಸರ್ಕಾರದ ಅಧಿಸೂಚನೆ ದಿನಾಂಕ:07-10-2021 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ(ತಿದ್ದುಪಡಿ) ಕಾಯ್ದೆ 2021 ರಂದು ಪ್ರಕಟಗೊಂಡಿದ್ದು, ಸದರಿ ಅಧಿಸೂಚನೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4-ಕೆ ಯನ್ನು ಅಳವಡಿಸಲಾಗಿರುತ್ತದೆ. ಇದರ ಪೂರ್ವದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪತ್ರ ಸಂಖ್ಯೆ: ಗ್ರಾಅಪ 86 ಗ್ರಾಪಂಅ 2014, ದಿನಾಂಕ: 11-11-2014 ರ ಕೈಪಿಡಿಯಂತೆ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿ 01 ಎಕರೆಗಿಂತ ಕಡಿಮೆ ಇರುವ ಪ್ರದೇಶಕ್ಕೆ ಸಂಬಂಧಿಸಿದ ಗ್ರಾಮ / ತಾಲ್ಲೂಕು ಪಂಚಾಯತಿಗಳಿಂದ ವಿನ್ಯಾಸ ಅನುಮೋದನೆ ನೀಡಲಾಗುತ್ತಿತ್ತು. ಒಂದು ಎಕರೆ ವರೆಗಿನ ವಿನ್ಯಾಸದ ಅನುಮೋದನೆಯ ಹಲವಾರು ಪ್ರಕರಣಗಳಲ್ಲಿ ಬಹಳಷ್ಟು ತಾಂತ್ರಿಕ ನ್ಯೂನ್ಯತೆಗಳು ಕಂಡು ಬಂದಿರುವುದನ್ನು ಗಮನಿಸಲಾಗಿರುತ್ತದೆ(ರಸ್ತೆ ಜಾಲ, ಉದ್ಯಾನ ಮತ್ತುನಾಗರೀಕ ಸೌಲಭ್ಯ ಒದಗಿಸದಿರುವುದು ಇತ್ಯಾದಿ).

ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ:19033/2023 ರಲ್ಲಿ ದಿನಾಂಕ:15-11-2023 ರಂದು ನೀಡಿರುವ ದೈನಂದಿನ ಆದೇಶದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ನ್ನು ಉಲ್ಲಂಘಿಸಿ, ಗ್ರಾಮ ಪಂಚಾಯಿತಿಗಳಿಂದ / ನಗರ ಸ್ಥಳೀಯ ಸಂಸ್ಥೆಗಳಿಂದ ವಿನ್ಯಾಸ ಅನುಮೋದಿಸುತ್ತಿರುವುದನ್ನು ತಡೆಗಟ್ಟುವ ಸಂಬಂಧ ಸರ್ಕಾರವು ಆದೇಶ ಸಂಖ್ಯೆ: ನಅಇ 93 ಎಂಡಬ್ಲ್ಯೂಪಿ 2023(ಭಾ-1), ದಿನಾಂಕ: 09-01-2024 (ಪ್ರತಿಯನ್ನು

**ಅನುಬಂಧ-1**ರಲ್ಲಿ ಲಗತ್ತಿಸಿದೆ) ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 93 ಎಂಡಬ್ಲ್ಯೂಪಿ 2023 (ಭಾ-1) ದಿನಾಂಕ:28-08-2024 ರನ್ವಯ ವಿನ್ಯಾಸ ಅನುಮೋದನೆಗೆ ಹಾಗೂ ಅನುಮೋದಿತ ವಿನ್ಯಾಸದಲ್ಲಿನ ನಿವೇಶನಗಳ ಬಿಡುಗಡೆ ಕುರಿತು ಕ್ರಮವಹಿಸಲು ಆದೇಶ ಹೊರಡಿಸಲಾಗಿರುತ್ತದೆ(ಪ್ರತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ). ಸದರಿ ಆದೇಶದನ್ವಯ ಗ್ರಾಮ ಪಂಚಾಯತಿಗಳು ವಿನ್ಯಾಸ ಅನುಮೋದಿಸಲು ಅವಕಾಶವಿರುವುದಿಲ್ಲ.

ಕರಾವಳಿ ಭಾಗದ (ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ)ಜಿಲ್ಲಾ ಕೇಂದ್ರಕ್ಕೆ ಅಲೆಯುವ ಸಮಸ್ಯೆಗೆ ಜನಸಾಮಾನ್ಯರಿಗೆ ತ್ವರಿತವಾಗಿ ಸೇವೆಯನ್ನು ಒದಗಿಸಲು ಸರ್ಕಾರದ ಆದೇಶ ಸಂಖ್ಯೆ:ನಅಇ 292 ಮೈಅಪ್ರಾ 2024, ದಿನಾಂಕ:07-08-2024 ರನ್ವಯ(ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ), ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಸಹಾಯಕ ನಿರ್ದೇಶಕರ ಕಛೇರಿ ಹಾಗೂ ಹತ್ತಿರದ ಯೋಜನಾ ಪ್ರಾಧಿಕಾರಗಳ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ ಹಾಗೂ ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿಯೇ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಿಸಲು ಆದೇಶಿಸಲಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಯೋಜನಾಬದ್ಧವಾಗಿ ರೂಪಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 16 ಟಿಟಿಪಿ 2023(E), ದಿನಾಂಕ:07-05-2025 ರ ಅಧಿಸೂಚನೆ ಹೊರಡಿಸಲಾಗಿದೆ(ಪ್ರತಿಯನ್ನು **ಅನುಬಂಧ-4**ರಲ್ಲಿ ಲಗತ್ತಿಸಿದೆ).

ಸರ್ಕಾರದ ಸುತ್ತೋಲೆಗಳು ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4-ಕೆ ನಿಯಮಗಳಲ್ಲಿ ವಿನ್ಯಾಸ ಅನುಮೋದನೆಗೆ ಇರಬೇಕಾದ ಕನಿಷ್ಟ ರಸ್ತೆ ಅಗಲವನ್ನು ವಿವರಿಸಲಾಗಿದೆ. ಅದರಂತೆ ಗುಡ್ಡಗಾಡು(Hilly Areas) ಪ್ರದೇಶದಲ್ಲಿ ವಸತಿಗೆ ಕನಿಷ್ಟ ರಸ್ತೆ ಅಗಲ 3.65 ಮೀ ಲಭ್ಯವಿರಬೇಕಾಗುತ್ತದೆ.

ಸ್ಥಳೀಯ ಯೋಜನಾ ಪ್ರದೇಶದ ಹೊರಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರ ಅವಕಾಶದಂತೆ, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆಯಾದ ವಿನ್ಯಾಸಗಳಲ್ಲಿ ಮನೆನಿರ್ಮಾಣ ಮಾಡಲು ಬ್ಯಾಂಕ್ ನಿಂದ ಸಾಲ ಪಡೆಯಲು ಅನುಕೂಲವಾಗುತ್ತಿದೆ ಹಾಗೂ ಇದರಿಂದ ಜನಸಾಮಾನ್ಯರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.

**ಇ) ವಿಷಯ:- "ಹೊಸ ವಿದ್ಯುತ್ ಸಂಪರ್ಕಕ್ಕೆ ಒಸಿ ಬಿಸಿ" ಕುರಿತು.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿ ರವರು ದಿನಾಂಕ 12.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಉತ್ತರ** : - ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:17.12.2024ರ ಆದೇಶದಲ್ಲಿ ವಿದ್ಯುತ್ ಸಂಪರ್ಕ ನೀಡುವ ಮುನ್ನ ವಿದ್ಯುತ್ ಸರಬರಾಜು ಕಂಪನಿಗಳು, ಸದರಿ ಕಟ್ಟಡಗಳ ಮಾಲೀಕರು ಒಸಿ ಮತ್ತು ಸಿಸಿ ಹಾಜರುಪಡಿಸಿದ ನಂತರವೇ ವಿದ್ಯುತ್ ಸಂಪರ್ಕ ನೀಡುವಂತೆ ಆದೇಶಿಸಿರುತ್ತದೆ. ಸದರಿ ಆದೇಶವು ಹಾಲಿ ಬಾಕಿ ಇರುವ ಎಲ್ಲಾ ಅರ್ಜಿಗಳಿಗೆ ಅನ್ವಯವಾಗುವುದರಿಂದ ಒಸಿ ಮತ್ತು ಸಿಸಿ ಹಾಜರು ಪಡಿಸಿರುವ ಎಲ್ಲಾ ಪ್ರಕರಣಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಸದರಿ ಆದೇಶವು ಎಲ್ಲಾ ವಿಧದ ನಿವೇಶನಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಅನ್ವಯಿಸುತ್ತದೆ.

"ಹೊಸ ವಿದ್ಯುತ್ ಸಂಪರ್ಕಕ್ಕೆ ಒಸಿ ಬಿಸಿ" ಎಂಬ ಬರಹದಡಿಯಲ್ಲಿ ಹಲವಾರು ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಕುರಿತು.

ಸಿವಿಲ್ ಅಪೀಲ್ ಸಂಖ್ಯೆ: 14604/2024 ಪ್ರಕರಣದಲ್ಲಿ ದಿನಾಂಕ:17.12.2024 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವುದನ್ನು ಕಡ್ಡಾಯಗೊಳಿಸಿ, ನಕ್ಷೆ ಮಂಜೂರಾತಿ ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರ ಇಲ್ಲದೇ ಇರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಹಾಗೂ ನೀರು ಸರಬರಾಜು ಬ್ಯಾಂಕ್ ಸಾಲ ಸೌಲಭ್ಯಗಳನ್ನು ಒದಗಿಸಬಾರದೆಂದು ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ.

"(i) While issuing the building planning permission, an undertaking be obtained from the builder/ applicant, as the case may be, to the effect that possession of the building will be entrusted and / or handed over to the owners / beneficiaries only after obtaining completion / occupation certificate from the authorities concerned".

ಈ ಹಿನ್ನೆಲೆಯಲ್ಲಿ, ಬಿಲ್ಡಿಂಗ್ ಬೈಲಾ ಸರಳೀಕರಣಗೊಳಿಸುವ ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯಲು ಕೆಲವು ಕಟ್ಟಡಗಳಿಗೆ ವಿನಾಯಿತಿ ನೀಡುವ ಬಗ್ಗೆ ಪ್ರಸ್ತಾವನೆಯು ನಗರಾಭಿವೃದ್ಧಿ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ.

X X X

(iv) All the necessary service connections, such as, Electricity, water supply, sewerage connection, et., shall be given by the service provider / Board to the buildings only after the production of the completion / occupation certificate.

ಈ ಹಿನ್ನೆಲೆಯಲ್ಲಿ, ಸರ್ಕಾರ ಮತ್ತು ಇಲಾಖಾ ಹಂತಗಳಲ್ಲಿ ಸುತ್ತೋಲೆಗಳನ್ನು ಹೊರಡಿಸಿದ್ದು, ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರವಷ್ಟೆ ಅಗತ್ಯ ಸೇವೆಗಳಾದ ವಿದ್ಯುತ್, ನೀರು ಸರಬರಾಜು & ಒಳ ಚರಂಡಿ ಸಂಪರ್ಕಗಳನ್ನು ನೀಡುವಂತೆ ಸೂಚಿಸಲಾಗಿದೆ. ಇದರಿಂದ ಉಂಟಾದ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಯವರು ಮತ್ತು ಸಂಬಂಧಿಸಿದ ಇತರೆ ಮಾನ್ಯ ಸಚಿವರುಗಳ ಉಪಸ್ಥಿತಿಯಲ್ಲಿ ದಿನಾಂಕ:03.07.2025 ರಂದು ನಡೆದ ಸಭೆಯಲ್ಲಿ ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಅನ್ವಯವಾಗುವ ಎಲ್ಲಾ ಕಾಯ್ದೆಗಳಲ್ಲಿಯೂ ಕೆಲವೊಂದು ವರ್ಗದ ನಿವೇಶನಗಳಲ್ಲಿ ನಿರ್ಮಿಸುವ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವ ವಿಷಯಕ್ಕೆ ಸಂಬಂಧಿಸಿದಂತೆ ಸಮಾನ ಅವಕಾಶಗಳಿರುವುದು ಸೂಕ್ತವೆಂದು ಅಭಿಪ್ರಾಯಿಸಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸೂಕ್ತ ತೀರ್ಮಾನ ಕೈಗೊಳ್ಳಲು ಸೂಚಿಸಲಾಗಿತ್ತು.

ಅದರನ್ವಯ ಸ್ವಾಧೀನ ಪ್ರಮಾಣ ಪತ್ರ (Occupancy Certificate) ದಿಂದ ವಿನಾಯಿತಿ ನೀಡುವ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:11.07.2025 ರಂದು ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಕೆಲವು ಕ್ರಮಗಳನ್ನು ಕೈಗೊಳ್ಳಲು ತೀರ್ಮಾನ ಕೈಗೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ, ಬಿಲ್ಡಿಂಗ್ ಬೈಲಾ ಸರಳೀಕರಣಗೊಳಿಸುವ ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯಲು ಕೆಲವು ಕಟ್ಟಡಗಳಿಗೆ ವಿನಾಯಿತಿ ನೀಡುವ ಬಗ್ಗೆ ಪ್ರಸ್ತಾವನೆಯು ನಗರಾಭಿವೃದ್ಧಿ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ.

**ಈ) ವಿಷಯ:- ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಅಪೂರ್ಣಗೊಂಡಿರುವ ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣ ರವರು ದಿನಾಂಕ 12.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಮತ್ತು ರಾಜೀವ್ ಗಾಂಧಿ ವಸತಿ ನಿಗಮದಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ಯಡಿ ಮನೆಗಳ ಹಂಚಿಕೆ /ಪ್ರಗತಿ:

ಕೇಂದ್ರ ಸರ್ಕಾರವು ರಾಜೀವ್ ಆವಾಸ್ ಯೋಜನೆಯನ್ನು ಸ್ಥಗಿತಗೊಳಿಸಿ ಪ್ರಧಾನ ಮಂತ್ರಿಗಳ ಆವಾಸ್ ಅಭಿಯಾನಯನ್ನು ದಿನಾಂಕ:25.06.2015 ರಂದು ಜಾರಿಗೊಳಿಸಿರುತ್ತದೆ.

ಅದರಂತೆ, ಸದರಿ ಯೋಜನೆಯನ್ನು ರಾಜ್ಯದಲ್ಲಿ ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

PMAY(U)-AHP ಘಟಕದಡಿ 2015-16ನೇ ಸಾಲಿನಿಂದ ಈವರೆಗೆ ಒಟ್ಟು 2,74,156 ಮನೆಗಳು ಈ ಕೆಳಗಿನಂತೆ ಕೇಂದ್ರ/ರಾಜ್ಯ ಸರ್ಕಾರದಿಂದ ಅನುಮೋದನೆಗೊಂಡಿರುತ್ತವೆ.

| ಅನುಷ್ಠಾನ ಸಂಸ್ಥೆ | ಮನೆಗಳ ಸಂಖ್ಯೆ |
|---|---|
| KSDB | 178600 |
| RGHCL | 47858 |
| RGHCL - CM 1 Lakh | 45124 |
| BDA | 364 |
| ULB - PKGB | 2210 |
| Total | 274156 |

ಪ್ರಧಾನ ಮಂತ್ರಿ ಆವಾಸ್ ಯೋಜನೆ(ನ)ರಡಿ ಅನುಷ್ಠಾನ ಸಂಸ್ಥೆಗಳು ಯೋಜನೆಗಳಿಗೆ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು, ಈವರೆಗೆ ಅನುಷ್ಠಾನ ಸಂಸ್ಥೆವಾರು ಸಾಧಿಸಿರುವ ಭೌತಿಕ ಪ್ರಗತಿ ಈ ಕೆಳಗಿನಂತಿದೆ.

| ಅನುಷ್ಠಾನ ಸಂಸ್ಥೆ | ಮನೆಗಳ ಸಂಖ್ಯೆ | ಪೂರ್ಣಗೊಂಡಿರುವ ಮನೆಗಳ ಸಂಖ್ಯೆ | ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ | ಪ್ರಾರಂಭಿಸಬೇಕಾಗಿರುವ ಮನೆಗಳ ಸಂಖ್ಯೆ | ಹಂಚಿಕೆ / ಸಿದ್ಧವಿರುವ ಮನೆಗಳ ಸಂಖ್ಯೆ |
|---|---|---|---|---|---|
| KSDB | 178600 | 79134 | 39225 | 60241 | 79134* |
| ULB | 47858 | 13303 | 25815 | 8740 | 13303 |
| RGHCL-OLH | 45124 | 18251 | 21653 | 5220 | 7618 |
| BDA | 364 | 364 | 0 | 0 | 364 |
| ULB-PKGB | 2210 | 1832 | 201 | 177 | 901 |
| Grand Total | 274156 | 112884 | 86894 | 74378 | 101320 |

(79134*= ಈ ಮನೆಗಳ ಪೈಕಿ 36,789 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ಮತ್ತು ಉಳಿದ 42,345 ಮನೆಗಳನ್ನು ಪೂರ್ಣಗೊಳಿಸಿದ್ದು, ಮಾನ್ಯ ಮುಖ್ಯ ಮಂತ್ರಿಯವರಿಂದ ಹಂಚಿಕೆ ಮಾಡಲು ಉದ್ದೇಶಿಸಿಲಾಗಿದೆ)

ಮೇಲಿನ ಯೋಜನೆಗಳ ಕಾಮಗಾರಿ 2015-16ನೇ ಸಾಲಿನಿಂದ ಪ್ರಾರಂಭವಾಗಿದ್ದರೂ, ಈ ಕೆಳಗಿನ ಕಾರಣಗಳಿಂದಾಗಿ ವಿಳಂಬವಾಗಿರುತ್ತವೆ.

1. ಅಂತಿಮ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ವಿಳಂಬ.
2. ಫಲಾನುಭವಿಗಳು ತಮ್ಮ ಪಾಲಿನ ವಂತಿಕೆ ಪಾವತಿಸುವಲ್ಲಿ ವಿಳಂಬ.
3. ಬ್ಯಾಂಕುಗಳು ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲು ಮುಂದೆ ಬರದೇ ಇರುವುದು.
4. ಸ್ಥಳೀಯ ಸಂಸ್ಥೆಗಳಿಂದ ಗುತ್ತಿಗೆದಾರರಿಗೆ ಜಮೀನು ಹಸ್ತಾಂತರ ಮಾಡುವಲ್ಲಿ ವಿಳಂಬ, ನ್ಯಾಯಾಲಯದ ವ್ಯಾಜ್ಯೆ / ಸ್ಥಳೀಯ ಅಡೆತಡೆಗಳು / ಸಂಪರ್ಕ ರಸ್ತೆಗಳಿಲ್ಲದಿರುವುದು ಇತ್ಯಾದಿ.
5. ಈ ಕಾರಣಗಳ ಹಿನ್ನೆಲೆಯಲ್ಲಿ ಕೆಲವು ಯೋಜನೆಗಳಿಗೆ ಸ್ಥಳ ಬದಲಾವಣೆ ಮಾಡಿ ಗುತ್ತಿಗೆದಾರರಿಗೆ ಬದಲಿ ಜಮೀನು ಹಸ್ತಾಂತರಿಸುವಲ್ಲಿ ವಿಳಂಬ.
6. ಸಂಬಂಧಿತ ಇಲಾಖೆಗಳಿಂದ NoC ಪಡೆಯುವಲ್ಲಿ ವಿಳಂಬವಾಯಿತು.
7. ನಗರ ಸ್ಥಳೀಯ ಸಂಸ್ಥೆಗಳು ಯೋಜನೆಗಳ ಯೋಜನಾ ಪ್ರದೇಶಗಳಿಗೆ ಮೂಲಸೌಕರ್ಯ ಒದಗಿಸಲು ವಿಳಂಬ ಮಾಡುತ್ತಿರುವುದು.
8. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸುತ್ತಿರುವ ಹೆಚ್ಚಿನ ಮನೆಗಳನ್ನು INSITU ಮಾದರಿಯಲ್ಲಿ ನಿರ್ಮಿಸುತ್ತಿದ್ದು ಇದರಿಂದಾಗಿ ಫಲಾನುಭವಿಗಳಿಗೆ ಪರ್ಯಾಯ ವ್ಯವಸ್ಥೆ / ಬಾಡಿಗೆಗೆ ಮನೆಗಳ ಲಭ್ಯತೆ ಇತ್ಯಾದಿ

ಸಮಸ್ಯೆಗಳ ಕಾರಣದಿಂದ ಮಂಡಳಿಯಿಂದ ಮನೆಗಳನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುತ್ತಿದೆ.

9. ಕೋವಿಡ್-19 ಸಾಂಕ್ರಾಮಿಕ ರೋಗವೂ ಸಹ ಯೋಜನೆಗಳ ಕಾಮಗಾರಿ ವಿಳಂಬವಾಗುವಲ್ಲಿ ಕಾರಣವಾಗಿರುತ್ತದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ವಿಳಂಬವಾಗಿರುವ ಯೋಜನೆಗಳಡಿ ಮನೆಗಳ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಸರ್ಕಾರದಿಂದ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: DoH 148 HFA 2023, ದಿನಾಂಕ:30.12.2023 ಮತ್ತು DoH 148 HFA 2023 ದಿನಾಂಕ:17.04.2025 ರಂತೆ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಯೋಜನೆಗಳಿಗೆ ಫಲಾನುಭವಿಗಳಿಂದ ಗರಿಷ್ಠ ರೂ 1.00 ಲಕ್ಷಗಳನ್ನು ಮಾತ್ರ ಸಂಗ್ರಹಿಸಲು ಹಾಗೂ ಉಳಿದ ಫಲಾನುಭವಿಗಳ ಪಾಲಿನ ವಂತಿಕೆ ಮೊತ್ತ ಮತ್ತು ಅಗತ್ಯ ಮೂಲಸೌಕರ್ಯ ಒದಗಿಸಲು ಒಟ್ಟು ರೂ. 6170.00 ಕೋಟಿ ಮಂಜೂರು ಮಾಡಿ ಆದೇಶಿಸಿದೆ.
2. ಸರ್ಕಾರದ ಆದೇಶ ಸಂಖ್ಯೆ: DoH 148 HFA 2023, ದಿನಾಂಕ:30.12.2023 ರಂತೆ ಈವರೆಗೆ ರೂ 808.00 ಕೋಟಿಗಳನ್ನು ಸರ್ಕಾರದಿಂದ ಫಲಾನುಭವಿ ವಂತಿಕೆಗಾಗಿ ಬಿಡುಗಡೆ ಮಾಡಲಾಗಿದೆ.
3. ಸರ್ಕಾರದ ಆದೇಶ ಸಂಖ್ಯೆ: DoH 127 HFA 2024, ದಿನಾಂಕ:13.05.2025 ರಂತೆ, "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ 12,153 ಫಲಾನುಭವಿಗಳಗೆ ಫಲಾನುಭವಿಗಳ ಪಾಲಿನ ಮೊತ್ತದಲ್ಲಿ ತಲಾ ರೂ.1.00 ಲಕ್ಷಗಳ ಮೊತ್ತವನ್ನು ಕಡಿಮೆ ಮಾಡಿದ್ದು, ಸದರಿ ಮೊತ್ತವನ್ನು ಅಂದರೆ ರೂ. 121.53 ಕೋಟಿಗಳ ಮೊತ್ತವನ್ನು ರಾಜ್ಯ ಸರ್ಕಾರದಿಂದಲೇ ಭರಿಸಲಾಗುತ್ತಿದೆ.
4. "1 ಲಕ್ಷ ಬಹುಮಹಡಿ ವಸತಿ ಯೋಜನೆ"ಯಡಿ ಸರ್ಕಾರವು ಬಡ್ಡಿ ಸಬ್ಸಿಡಿ ಯೋಜನೆಯನ್ನು ರೂಪಿಸಿದ್ದು, ಸದರಿ ಯೋಜನೆಯಡಿ ಸಾಲ ಪಡೆಯುವ ಎಲ್ಲಾ ಫಲಾನುಭವಿಗಳಿಗೆ ಗರಿಷ್ಠ ರೂ. 3000 ವರೆಗೆ ಬಡ್ಡಿ ಸಹಾಯಧನವನ್ನು ಒದಗಿಸುತ್ತದೆ. ಈ ಬಡ್ಡಿ ಸಹಾಯಧನವನ್ನು ಗರಿಷ್ಠ 10 ವರ್ಷಗಳವರೆಗೆ ಒದಗಿಸುತ್ತಿದೆ.
5. ಸ್ಥಳೀಯ ಸಂಸ್ಥೆಗಳಿಂದ ಅನುಷ್ಠಾನಗೊಳಿಸುತ್ತಿರುವ AHP ಯೋಜನೆಗಳ 47,858 ಫಲಾನುಭವಿಗಳಿಗೆ ಫಲಾನುಭವಿಗಳ ವಂತಿಕೆ ಮತ್ತು ಸದರಿ ಯೋಜನಾ ಪ್ರದೇಶಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸಲು ರೂ. 2,344.54 ಕೋಟಿಗಳ ಮೊತ್ತವನ್ನು ಒದಗಿಸುವಂತೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
6. ಸದರಿ ಯೋಜನೆಗಳ ಕಾಮಗಾರಿಗಾಗಿ SCP/TSP, ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿ, ಅಲ್ಪಸಂಖ್ಯಾತರ ಇಲಾಖೆ, ಜಿಲ್ಲಾ ಖನಿಜ ಪ್ರತಿಷ್ಠಾನ (DMF) ಇವೇ ಮೊದಲಾದ ಇಲಾಖೆಗಳಿಂದ ಅನುದಾನ ಹೊಂದಾಣಿಕೆ ಮಾಡಲು ಕ್ರಮವಹಿಸಲಾಗುತ್ತಿದೆ.
7. ಯೋಜನೆಯ ಎಲ್ಲಾ SC/ST ಫಲಾನುಭವಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ SCP/TSP ಯೋಜನೆಯಿಂದ ಅನುದಾನ ಒದಗಿಸಲು ಕ್ರಮವಹಿಸಲಾಗುತ್ತಿದೆ.
8. ಯೋಜನೆಯ ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲು ರಾಜ್ಯ ಮಟ್ಟದ ಬ್ಯಾಂಕ್‌ಗಳೊಂದಿಗೆ, ಮತ್ತು ಹೌಸಿಂಗ್ ಫೈನಾನ್ಸ್ ಕಂಪನಿಗಳೊಂದಿಗೆ ನಿಯಮಿತವಾಗಿ ಸಭೆಗಳನ್ನು ನಡೆಸಲಾಗುತ್ತಿದ್ದು, ಅರ್ಜಿ ಮತ್ತು ಅನುಮೋದನೆ ಪ್ರಕ್ರಿಯೆಯನ್ನು ಸರಳಗೊಳಿಸಲು ವಿಶೇಷ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
9. ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಪ್ರಗತಿಯಲ್ಲಿರುವ ಮನೆಗಳಿಗೆ ಫಲಾನುಭವಿಗಳಿಂದ ರೂ 1.00 ಲಕ್ಷಗಳನ್ನು ಪಾವತಿಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರದದಿಂದ ಬಿಡುಗಡೆಯಾಗುವ ಫಲಾನುಭವಿ ವಂತಿಕೆಗೆ ಅನುಗುಣವಾಗಿ ಮನೆಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ನಿಗಮದಿಂದ / ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಎಲ್ಲಾ ಗುತ್ತಿಗೆದಾರರೊಂದಿಗೆ ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದು, ಸಕಾಲದಲ್ಲಿ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ.

**"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಹಂಚಿಕೆ ಮನೆಗಳ ಪ್ರಗತಿ:**

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಸತಿ ರಹಿತ ಬಡ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಬೆಂಗಳೂರು ನಗರದಲ್ಲಿ ರಾಜ್ಯ ಸರ್ಕಾರ ವಸತಿ ಯೋಜನೆಗಳಾದ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳನ್ನು, ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಅವಾಸ್ ಯೋಜನೆ(ನಗರ)"ಯ ಅನುದಾನದ ಮೊತ್ತಗಳನ್ನು ಸಂಯೋಜಿಸಿಕೊಂಡು ಹಾಗೂ ಫಲಾನುಭವಿಗಳ ವಂತಿಕೆಯೊಂದಿಗೆ ಮತ್ತು ಯೋಜನೆಯಡಿ ನಿರ್ಮಿಸುವ ನಿವೇಶನಗಳ ಅಥವಾ ಬಹುಮಹಡಿ ಮನೆಗಳ ಅಥವಾ ಉಳಿಕೆ ಜಮೀನನ್ನು ಮಾರಾಟದಿಂದ ಬರುವ ಮೊತ್ತದಿಂದ ಆರ್ಥಿಕವಾಗಿ ಹಿಂದುಳಿದವರಿಗಾಗಿ ವಸತಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ವಇ 57 ಹೆಚ್ಎಹೆಚ್ 2017, ದಿನಾಂಕ 23.10.2017 ರಲ್ಲಿ ಮಂಜೂರಾತಿ ನೀಡಲಾಗಿದೆ.

ಸದರಿ ಯೋಜನೆಯಡಿ ಮೊದಲನೇ ಮತ್ತು ಎರಡನೇ ಹಂತದಲ್ಲಿ ಒಟ್ಟು 48,950 ಮನೆಗಳನ್ನು (1BHK-45,124 ಹಾಗೂ 2BHK-3826) ನಿರ್ಮಿಸಲು ಬೆಂಗಳೂರು ನಗರ ಜಿಲ್ಲೆಯ 73 ಸ್ಥಳಗಳಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

ಇದುವರೆಗೂ ವಿವಿಧ ಯೋಜನಾ ಸ್ಥಳಗಳಲ್ಲಿ 1BHK- 7618 ಮನೆಗಳು ಪೂರ್ಣಗೊಂಡಿದ್ದು, 10633 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, 21653 ವಿವಿಧ ಹಂತದಲ್ಲಿರುತ್ತದೆ. ಉಳಿದ 5220 ಮನೆಗಳು ಪ್ರಾರಂಭಿಕ ಹಂತದಲ್ಲಿರುತ್ತವೆ. (ವಿವರವನ್ನು ಅನುಬಂಧ-01 ರಲ್ಲಿ ಒದಗಿಸಿದೆ.)

ಸದರಿ ಯೋಜನೆಯಡಿ ಪೂರ್ಣಗೊಂಡಿರುವ ಮನೆಗಳಿಗೆ ಫಲಾನುಭವಿಗಳಿಂದ ಪೂರ್ಣ ವಂತಿಕೆ ಮೊತ್ತವನ್ನು ಪಾವತಿಸಿಕೊಂಡು, ಈ ಫಲಾನುಭವಿಗಳಿಗೆ ನೋಂದಣಿ ಪ್ರಕ್ರಿಯೆ ಮತ್ತು ಕೀಗಳನ್ನು ಹಸ್ತಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಯಡಿ ಈವರೆಗೆ 1 BHK- 14,711 ಮನೆಗಳನ್ನು ಆನ್-ಲೈನ್‌ನಲ್ಲಿ ಅರ್ಹ ಫಲಾನುಭವಿಗಳು ತಮ್ಮ ಸ್ವ-ಇಚ್ಛೆಯಿಂದ ಆಯ್ಕೆ ಮಾಡಿಕೊಂಡಿರುತ್ತಾರೆ.

ಮುಂದುವರೆದು, ವಿವಿಧ ಯೋಜನಾ ಸ್ಥಳಗಳಲ್ಲಿ 2BHK-304 ಮನೆಗಳು ಪೂರ್ಣಗೊಂಡಿದ್ದು, 3522 ವಿವಿಧ ಹಂತದಲ್ಲಿರುತ್ತದೆ. (ವಿವರವನ್ನು ಅನುಬಂಧ-02 ರಲ್ಲಿ ಒದಗಿಸಿದೆ.)

"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ವಿವಿಧ ಯೋಜನಾ ಸ್ಥಳಗಳಲ್ಲಿ ಒಟ್ಟಾರೆ 7922 ಮನೆಗಳು(1BHK-7618 & 2BHK-304) ಪೂರ್ಣಗೊಂಡಿರುತ್ತದೆ.

ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯಡಿ ಪ್ರತಿ ಫಲಾನುಭವಿಯು ಸುಮಾರು ರೂ.7.50 ಲಕ್ಷಗಳಿಂದ ಹಾಗೂ ರೂ.10.50 ಲಕ್ಷಗಳವರೆಗೂ ವಂತಿಕೆ ಮೊತ್ತವನ್ನು ಪಾವತಿಸಬೇಕಾಗಿದೆ. ಆದರೆ ಬಡ ಫಲಾನುಭವಿಗಳು ಸಕಾಲದಲ್ಲಿ ವಂತಿಕೆ ಪಾವತಿಸುವಲ್ಲಿ ವಿಳಂಬವಾದ ಕಾರಣದಿಂದಾಗಿ ಮನೆಗಳ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಪ್ರಸ್ತುತ, ಪ್ರಾರಂಭಿಕ ಠೇವಣಿಯನ್ನು ಪಾವತಿಸಿ, ಆನ್-ಲೈನ್‌ನಲ್ಲಿ ಮನೆಗಳನ್ನು ಆಯ್ಕೆ ಮಾಡಿಕೊಂಡಿರುವ 12,153 ಫಲಾನುಭವಿಗಳಿಗೆ ಮಾತ್ರ ಅವರ ಪಾಲಿನ ವಂತಿಕೆಯಲ್ಲಿ ರೂ 1.00 ಲಕ್ಷಗಳನ್ನು ಸರ್ಕಾರದಿಂದ ಭರಿಸಲು ಅಗತ್ಯವಿರುವ ರೂ. 121.53 ಕೋಟಿಗಳನ್ನು ಬಿಡುಗಡೆ ಮಾಡಿದೆ.
2. ಫಲಾನುಭವಿಗಳು ರಾಷ್ಟ್ರೀಕೃತ/ ಖಾಸಗಿ / NBFC ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡ ಸಾಲದ ಬಡ್ಡಿ ಮೊತ್ತದಲ್ಲಿ ಶೇಕಡ 3 ರಿಂದ 5 ರಷ್ಟು ಮೊತ್ತವನ್ನು ಸಹಾಯಧನವಾಗಿ ಸರ್ಕಾರದಿಂದ ಪಾವತಿಸಿ ಅವರ ಮಾಸಿಕ ಸಾಲದ ಕಂತಿನ ಹೊರೆಯನ್ನು ಕಡಿಮೆ ಮಾಡಲು "ಬಡ್ಡಿ ಸಹಾಯಧನ ಯೋಜನೆ" (Interest Subvention Scheme) ಅನ್ನು ಜಾರಿಗೆ ತರಲಾಗಿದೆ.
3. ಒಟ್ಟು ನಿಗಮದಿಂದ ನಿರ್ಮಿಸಲಾಗುತ್ತಿರುವ 3826 2 BHK ಮನೆಗಳ ಪೈಕಿ, 304 ಮನೆಗಳನ್ನು ಪೂರ್ಣಗೊಳಿಸಿ ಮಾರಾಟ ಮಾಡಲಾಗಿರುತ್ತದೆ. ಬಾಕಿ ಇರುವ 3,522-2BHK ಫ್ಲಾಟ್‌ಗಳನ್ನು ಹರಾಜು ಮಾಡಿ ಸಂಗ್ರಹಿಸಿದ ಮೊತ್ತದಲ್ಲಿ ಬಾಕಿ ಇರುವ ಮನೆಗಳನ್ನು ಪೂರ್ಣಗೊಳಿಸಲಾಗುವುದು.

ಮೇಲ್ಕಂಡ ಕ್ರಮಗಳನ್ನು ಕೈಗೊಂಡು "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ನಿರ್ಮಾಣಗೊಳ್ಳುತ್ತಿರುವ ಮನೆಗಳನ್ನು ಡಿಸೆಂಬರ್-2025ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

**2016-17ನೇ ಸಾಲಿನ ಸಮೀಕ್ಷೆಯಂತೆ 413 ಕೊಳಗೇರಿ ಪ್ರದೇಶಗಳಲ್ಲಿ 64707 ಕಚ್ಚಾ, ಸೆಮಿಪಕ್ಕ/ಗುಡಿಸಲು ಹೊಂದಿರುವ ವಸತಿ ರಹಿತರು ಇದ್ದಾರೆ. ಇಲ್ಲಿಯೂ ಸಹ 8549 ಮನೆಗಳು ಪೂರ್ಣಗೊಂಡಿಲ್ಲ:**

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು PMAY(U) ಯೋಜನೆಯಡಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಒಟ್ಟು 413 ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆ ಮಾಡಿ 1,23,865 ಕಚ್ಚಾ ಮತ್ತು ಸೆಮಿ ಪಕ್ಕಾ ಮನೆಗಳನ್ನು ಗುರುತಿಸಲಾಗಿರುತ್ತದೆ. ಇವುಗಳ ಪೈಕಿ ಬೆಂಗಳೂರು ನಗರ ಜಿಲ್ಲೆಗೆ 32,875 ಮನೆಗಳು ಅನುಮೋದನೆಯಾಗಿದ್ದು, ಈ ಪೈಕಿ 13,754 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ಪ್ರಥಮ ಹಂತದಲ್ಲಿ 7966 ಮನೆಗಳನ್ನು ದಿನಾಂಕ:02.03.2024 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಲೋಕಾರ್ಪಣೆ ಮಾಡಲಾಗಿದ್ದು, ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ ಮತ್ತು ಪ್ರಸ್ತುತ 2ನೇ ಹಂತದಲ್ಲಿ 5788 ಮನೆಗಳನ್ನು ಸೆಪ್ಟೆಂಬರ್-2025 ರಲ್ಲಿ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ ಹಾಗೂ 6795 ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ. ಸರ್ಕಾರ ಆದೇಶದಂತೆ 12,326 ಮನೆಗಳನ್ನು ಕಡಿತಗೊಳಿಸಲಾಗಿದೆ.

ಪ್ರತಿ ಮನೆಗಳ ಘಟಕ ವೆಚ್ಚ ಸರಾಸರಿ ರೂ.5.95 ಲಕ್ಷಗಳಿಂದ ರೂ.7.52 ಲಕ್ಷಗಳಾಗಿರುತ್ತದೆ. ಈ ಪೈಕಿ ಕೇಂದ್ರ ಸರ್ಕಾರವು 1.5 ಲಕ್ಷಗಳನ್ನು ಹಾಗೂ ರಾಜ್ಯ ಸರ್ಕಾರವು ರೂ. 2.00 ಲಕ್ಷಗಳನ್ನು (ಪರಿಶಿಷ್ಟ ಜಾತಿ/ಪಂಗಡಕ್ಕೆ) ಮತ್ತು ಇತರೇ ಫಲಾನುಭವಿಗಳಿಗೆ ರೂ.1.20 ಲಕ್ಷಗಳನ್ನು ಇತರೇ ಫಲಾನುಭವಿಗಳಿಗೆ ಉಳಿದ ಮೊತ್ತವನ್ನು ಫಲಾನುಭವಿಗಳಿಂದ/ಬ್ಯಾಂಕ್ ನಿಂದ ಸಾಲ ಸೌಲಭ್ಯ ಒದಗಿಸಿ ಫಲಾನುಭವಿ ವಂತಿಕೆ ಭರಿಸಬೇಕಾಗಿರುತ್ತದೆ. ಫಲಾನುಭವಿಗಳು ವಂತಿಕೆ ಪಾವತಿಸಲು ಮುಂದೆ ಬಾರದೇ ಇರುವುದರಿಂದ ಮತ್ತು ಬ್ಯಾಂಕ್ ಗಳು ಕೊಳಗೇರಿ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡದೇ ಇದ್ದುದರಿಂದ ಮನೆಗಳ ನಿರ್ಮಾಣದಲ್ಲಿ ವಿಳಂಬವಾಗಿರುತ್ತದೆ.

ಇದನ್ನು ಮನಗಂಡು, ಸರ್ಕಾರದ ಆದೇಶ ಸಂಖ್ಯೆ: ವಇ 148 ಹೆಚ್‌ಎಫ್‌ಎ 2023, ದಿನಾಂಕ:30.12.2023ರಲ್ಲಿ ರೂ. 1.00 ಲಕ್ಷಗಳನ್ನು ಫಲಾನುಭವಿಗಳಿಂದ ಪಾವತಿಸಿಕೊಂಡು ಉಳಿದ ಫಲಾನುಭವಿ ವಂತಿಕೆ ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲು ಆದೇಶವಾಗಿರುತ್ತದೆ. ಅದರಂತೆ ರಾಜ್ಯ ಸರ್ಕಾರದಿಂದ ಫಲಾನುಭವಿ ವಂತಿಕೆಗೆ ಎದುರಾಗಿ ಒಟ್ಟಾರೆ ಬಿಡುಗಡೆಗೊಳಿಸಲಾದ ರೂ. 808.00 ಕೋಟಿಗಳ ಪೈಕಿ ರೂ.202.61 ಕೋಟಿಗಳನ್ನು ಬೆಂಗಳೂರು ನಗರದಲ್ಲಿ ಪೂರ್ಣಗೊಳಿಸಿರುವ ಮನೆಗಳಿಗೆ ಬಳಸಿಕೊಳ್ಳಲಾಗಿದೆ.

ಪ್ರಗತಿಯಲ್ಲಿರುವ 6795 ಮನೆಗಳನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅನುಷ್ಠಾನವು ಡಿಸೆಂಬರ್-2025ರ ಅಂತ್ಯಕ್ಕೆ ಪೂರ್ಣಗೊಳುತ್ತಿರುವುದರಿಂದ ಫಲಾನುಭವಿಗಳಿಂದ ರೂ.1.00 ಲಕ್ಷಗಳನ್ನು ಪಡೆದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯ ಧನ ಹಾಗೂ ರಾಜ್ಯ ಸರ್ಕಾರದಿಂದ ಫಲಾನುಭವಿ ವಂತಿಕೆ ಬಿಡುಗಡೆಗೆ ಅನುಗುಣವಾಗಿ ಹಂತ ಹಂತವಾಗಿ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ವಾಸಕ್ಕೆ ನೀಡಲು ಕ್ರಮ ವಹಿಸಲಾಗುತ್ತಿದೆ.

**ಉ) ವಿಷಯ:- ಆಫ್ರಿಕನ್ ಕ್ಯಾಟ್‌ಫಿಶ್‌ಗಳ ಸಾಕಾಣಿಕೆಯನ್ನು ಸರ್ಕಾರ ನಿಷೇಧಿಸಿದ್ದರೂ, ಅಕ್ರಮವಾಗಿ ಸಾಕಾಣಿಕೆ ಮಾಡುತ್ತಿರುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ದಿನಾಂಕ 13.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಆಫ್ರಿಕನ್ ಕ್ಯಾಟ್ ಫಿಶ್ (*Clarias gariepinus*) ಮೀನನ್ನು ಸಾಕಾಣಿಕೆ, ಸಾಗಾಣಿಕೆ ಹಾಗೂ ಮಾರಾಟ ಮಾಡುವುದನ್ನು ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯವು ದಿ: 06-02-2013 ರಂದು ಹೊರಡಿಸಿರುವ ಆದೇಶದ ಪ್ರಕಾರ ನಿಷೇಧಿಸಿದೆ. ಮೀನುಗಾರಿಕೆ ಇಲಾಖೆಯು ಪತ್ರ ಸಂಖ್ಯೆ: ಮೀನಿ/10/ಆರ್‌ಎಸ್‌ಹೆಚ್/2016 ದಿನಾಂಕ: 11-08-2016 ರಲ್ಲಿ ಇಲಾಖಾಧಿಕಾರಿಗಳಿಗೆ ಉಚ್ಛ ನ್ಯಾಯಾಲಯದ ಆದೇಶದಂತೆ ಸೂಕ್ತ ಕ್ರಮವಹಿಸಲು ಸೂಚಿಸಲಾಗಿದೆ.

ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಆಫ್ರಿಕನ್ ಕ್ಯಾಟ್ ಫಿಶ್ ಸಾಕಾಣಿಕೆ, ಸಾಗಾಣಿಕೆ ಹಾಗೂ ಮಾರಾಟವನ್ನು ನಿಯಂತ್ರಿಸಲು ತಹಸೀಲ್ದಾರ್, ಪೋಲಿಸ್ ಇನ್ಸಪೆಕ್ಟರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹಾಗೂ ಸ್ಥಳೀಯ ಮೀನುಗಾರಿಕೆ ಸಹಾಯಕ ನಿರ್ದೇಶಕರನ್ನು ಒಳಗೊಂಡಿರುವ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಟಾಸ್ಕ್ ಫೋರ್ಸ್ (Taskforce) ನ್ನು ರಚಿಸಲಾಗಿರುತ್ತದೆ. ಇಂತಹ ಪ್ರಕರಣಗಳು ವರದಿಯಾದಲ್ಲಿ ಟಾಸ್ಕ್ ಫೋರ್ಸ್ ಕಟ್ಟುನಿಟ್ಟಿನ ಕ್ರಮವಹಿಸುತ್ತದೆ.

ಆಫ್ರಿಕನ್ ಕ್ಯಾಟ್ ಫಿಶ್ ಉತ್ಪಾದನೆ, ಪಾಲನೆ, ಸಾಗಾಣಿಕೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿರ್ಮೂಲನೆಗೊಳಿಸುವುದು. ಆಫ್ರಿಕನ್ ಕ್ಯಾಟ್‌ಫಿಶ್‌ಗಳನ್ನು ವಶಪಡಿಸಿ ಕೊಂಡು ನಾಶಪಡಿಸುವುದು ಹಾಗೂ ಸಾಗಾಣಿಕೆಗಾಗಿ ಬಳಸಿಕೊಂಡ ವಾಹನವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಹಸ್ತಾಂತರಿಸುವುದು. ಸಾಕಾಣಿಕೆದಾರರು, ಸಾಗಾಣಿಕೆದಾರರು ಮತ್ತು ಮಾರಾಟಗಾರರ ಮೇಲೆ ಸಿ.ಆರ್.ಪಿ.ಸಿ. 133ರಂತೆ ಪೋಲೀಸ್ ಇಲಾಖೆಯವರು ದೋಷಾರೋಪಣೆ ಪಟ್ಟಿ ತಯಾರಿಸಿ ಕ್ರಮವಹಿಸುತ್ತಾರೆ.

ಹಲವೆಡೆ ಇಲಾಖೆ ಅಧಿಕಾರಿಗಳು ಕ್ಯಾಟ್‌ಫಿಶ್ ಹೊಂಡಗಳನ್ನು ತೆರವುಗೊಳಿಸಿದ ನಂತರ ಕೆಲವೇ ದಿನಗಳಲ್ಲಿ ಬೇರೊಂದು ಕಡೆ ಹೊಂಡ ತೆಗೆದು ಪುನಃ ಸಾಕಾಣಿಕೆ ದಂಧೆಯನ್ನು ನಡೆಸುತ್ತಿರುವುದಾಗಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಈ ರೀತಿಯ ಯಾವುದೇ ಸಾಕಾಣಿಕೆ ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಇಲಾಖೆಯ ಅಧಿಕಾರಿಗಳಿಂದ ಆಫ್ರಿಕನ್ ಕ್ಯಾಟ್‌ಫಿಶ್‌ಗಳ ಸಾಕಾಣಿಕೆ, ಸಾಗಾಣಿಕೆ ಮತ್ತು ಮಾರಾಟ ಚಟುವಟಿಕೆ ಮರುಕಳಿಸದಂತೆ ಸಾರ್ವಜನಿಕರಿಗೆ ಹಾಗೂ ಸಾಕಾಣಿಕಾದಾರರಿಗೆ ಜಾಗೃತಿ ಮೂಡಿಸಲಾಗುತ್ತಿದೆ.

**ಊ) ವಿಷಯ:- ನೈಸ್ ಸಂಸ್ಥೆಯ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆ ಕುರಿತು.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಲೋಕೋಪಯೋಗಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿ ಗೌಡ ರವರು ದಿನಾಂಕ 13.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಬಿಎಂಐಸಿ ಯೋಜನೆಯ ಅನುಷ್ಠಾನ ಕುರಿತು ಇದುವರೆಗೂ ಆಗಿರುವ ಪ್ರಗತಿಯ ಹಿನ್ನೆಲೆಯಲ್ಲಿ ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ದಿನಾಂಕ:16.04.2025ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರವು ನೈಸ್ ಸಂಸ್ಥೆಯ ಜೊತೆ 1997ರಲ್ಲಿ ಮಾಡಿಕೊಂಡ ಮೂಲ ಒಪ್ಪಂದದಂತೆ (ಕ್ರಿಯಾ ಒಪ್ಪಂದ) ಇಲ್ಲದಿದ್ದರೂ ಇಂಟರ್‌ಚೇಂಜ್‌ಗಳಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಲೇಔಟ್‌ಗಳಿಗೆ ಅನುಮೋದನೆ ನೀಡುವ ಬಗ್ಗೆ, ಆ ಬಡಾವಣೆಗಳಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ ನೀಡುವ ವಿಧಾನದ ಕುರಿತು, ನೈಸ್ ಕಂಪನಿಗೆ ನೀಡಲಾದ ಒಟ್ಟು ಖಾಸಗಿ ಮತ್ತು ಸರ್ಕಾರಿ ಜಮೀನುಗಳ ಪೈಕಿ ಬಳಸದಿರುವ ಹೆಚ್ಚುವರಿ ಭೂಮಿಯನ್ನು ಸರ್ಕಾರ ಹಿಂಪಡೆಯುವ ಬಗ್ಗೆ, 30 ವರ್ಷಗಳ ಗುತ್ತಿಗೆ ಅವಧಿ ಮುಕ್ತಾಯಗೊಂಡ ನಂತರ ಈ ಯೋಜನೆಯನ್ನು ಸರ್ಕಾರಕ್ಕೆ ಹಿಂದಿರುಗಿಸುವ ಹಾಗೂ ಪ್ರಸ್ತಾಪಿಸಿರುವ ಟೌನ್‌ಶಿಪ್ ಗಳ ಕುರಿತು, ಈ ಯೋಜನೆಯನ್ನು ಕಾನೂನಾತ್ಮಕವಾಗಿ ಸೂಕ್ತ ಬದಲಾವಣೆಯೊಂದಿಗೆ ಮುಕ್ತಾಯಗೊಳಿಸಿ ಸಾವಿರಾರು ಕೋಟಿ ರೂಗಳನ್ನು ಟೋಲ್ ಮುಖಾಂತರ ಸಂಗ್ರಹಿಸುತ್ತಿರುವ ಕುರಿತು, ಯೋಜನೆಯ ಚೌಕಟ್ಟಿನ ಕರಾರಿನ ಅನ್ವಯ 13,237 ಎಕರೆ ಖಾಸಗಿ ಜಮೀನಿನ ಬದಲು ಕೆ.ಐ.ಎ.ಡಿ.ಬಿ. ಒಪ್ಪಂದದಲ್ಲಿ 23,846 ಎಕರೆ ಜಮೀನು ನೀಡಲಾಗಿರುವ ಬಗ್ಗೆ, ಮತ್ತು 30 ವರ್ಷ ಮುಗಿಯುತ್ತಾ ಬಂದರೂ ಸಹ ಈ ಯೋಜನೆ ಪೂರ್ಣಗೊಂಡಿಲ್ಲದಿರುವ ಕುರಿತು ಹಾಗೂ ಯೋಜನೆಯನ್ನು ಮುಂದುವರೆಸುವ ಅಥವಾ ಯೋಜನೆಯನ್ನು ಕೈಬಿಡುವ ಬಗ್ಗೆ, ಸಚಿವ ಸಂಪುಟ ಉಪ ಸಮಿತಿಯು ಪರಿಶೀಲಿಸಿ ನೀಡುವ ವರದಿಯನ್ವಯ ಸಚಿವ ಸಂಪುಟವು ತೆಗೆದುಕೊಳ್ಳುವ ತೀರ್ಮಾನದಂತೆ ಕ್ರಮಕೈಗೊಳ್ಳಲಾಗುವುದು.

**ಖ) ವಿಷಯ:- ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರದ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ ರವರು ದಿನಾಂಕ 13.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಡಿಮೆ ಸಾಧನೆಯನ್ನು ಮಾಡಿದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ಕೆಲವು ಹುದ್ದೆಗಳನ್ನು ರದ್ದುಗೊಳಿಸಲು ಹಾಗೂ ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರನ್ನು ಇತರೆ ಆರೋಗ್ಯ ಕೇಂದ್ರಗಳಲ್ಲಿ ಖಾಲಿಯಿರುವ ಕ್ರಿಟಿಕಲ್ ಹುದ್ದೆಗಳಿಗೆ ಸ್ಥಳ ನಿಯುಕಿಗೊಳಿಸಲು ನಿರ್ಧರಿಸಲಾಗಿದೆ., ಅದರಂತೆ, ಸಾಧನೆಯ ಆರೋಗ್ಯ ಕೇಂದ್ರವಾಗಿರುವುದರಿಂದ, ಸದರಿ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ 01 ಸ್ತ್ರೀರೋಗ ತಜ್ಞರ ಹುದ್ದೆಗಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ: ಶಶಿಕಲಾ ಹೆಚ್.ಆರ್.ಸ್ತ್ರೀಗೋಗ ತಜ್ಞರು ಇವರನ್ನು ದಿನಾಂಕ: 05.08.2025 ರಂದು ಸಮಾಲೋಚನೆಯ ಮೂಲಕ ಸಾರ್ವಜನಿಕ ಆಸ್ಪತ್ರೆ, ಜಗಳೂರು ದಾವಣಗೆರೆ ಜಿಲ್ಲೆ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಪ್ರಸ್ತುತ ಹುದ್ದೆಯು ಖಾಲಿ ಇದ್ದು, ಪ್ರಸ್ತುತ ಯಾವುದೇ ಸಾರ್ವಜನಿಕರಿಗೆ ತೊಂದರೆಯಾಗದಂತೆ ಆರೋಗ್ಯ ಸೇವೆಯನ್ನು ನೀಡಲು ಕ್ರಮವಹಿಸಲಾಗುತ್ತಿದೆ.

**ಎ) ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆಗೊಳಸುವ ಜಮೀನಿಗೆ ಸರ್ಕಾರಿ ರಸ್ತೆ ಸಂಪರ್ಕ ಹೊಂದಿದ್ದರೆ ಮಾತ್ರ ಭೂ ಪರಿವರ್ತನೆ ಮಾಡುತ್ತಿದ್ದು, ಪಂಚಾಯತ್ ವ್ಯಾಪ್ತಿಯಲ್ಲಿ ದೊರಕುತ್ತಿದ್ದ 9/11ಎ ಖಾತಾ ದೃಢೀಕರಣ ಪತ್ರವನ್ನು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸಿರುವ ಬಗ್ಗೆ.**

\- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ ರವರು ದಿನಾಂಕ 13.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಚಾಯತ್ ವ್ಯಾಪ್ತಿಯಲ್ಲಿ ದೊರಕುತ್ತಿದ್ದ 9/11ಎ ಖಾತಾ ದೃಢೀಕರಣ ಪತ್ರವನ್ನು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ನಾಇ 292 ಮೈಅಪ್ರಾ 2024, ದಿನಾಂಕ: 07.08.2024 ರಂತೆ ಕರಾವಳ ಭಾಗದಲ್ಲಿ 1 ಎಕರೆವರೆಗೆ ಏಕ ನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡು ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಸ್ಥಳೀಯ ಪ್ರಾಧಿಕಾರಗಳಿಗೆ ಅಧಿಕಾರ ವ್ಯಾಪ್ತಿಯನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

**ಏ) ವಿಷಯ:- ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಹಿಂದೇಟು ಹಾಕಿದ ಪರಿಣಾಮ ಈ ವರ್ಷ 9 ವಿಭಾಗಗಳು ಮುಚ್ಚುವ ಭೀತಿ ಎದುರಿಸುತ್ತಿರುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ.ಗೌಡ ರವರು ದಿನಾಂಕ 13.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಮೈಸೂರು ವಿಶ್ವವಿದ್ಯಾಲಯದಲ್ಲಿನ ಸಂಯೋಜಿತ ಕಾಲೇಜುಗಳು, ಕೋರ್ಸುಗಳು, ಬೋಧಕ-ಬೋಧಕೇತರರ ಮಾಹಿತಿ ಈ ಕೆಳಕಂಡಂತಿದೆ;

**ಸಂಯೋಜಿತ ಕಾಲೇಜುಗಳು ಮತ್ತು ಕೋರ್ಸ್‌ಗಳ ವಿವರ:**

| ಸಂಯೋಜಿತ ಕಾಲೇಜುಗಳ ಸಂಖ್ಯೆ | ಕೋರ್ಸುಗಳ ವಿವರ | |
|---|---|---|
| | ಸ್ನಾತಕ | ಸ್ನಾತಕೋತ್ತರ |
| 105 | BA, B.Com., B.Sc., BBA, BCA, BPA, BALLB, BSW, B.Plan, BVA, BASLP, B.Arch, B.Ed., | MA, M.Sc., M.Com., M.Ed., MED, MCA, MSW, M.Arch, MPEd., PhD |

**ಬೋಧಕ-ಬೋಧಕೇತರರ ವಿವರ:**

| ಹುದ್ದೆಗಳ ವಿವರ | ಮಂಜೂರಾದ | ಭರ್ತಿಯಾದ | ಖಾಲಿಯಿರುವ | ಅತಿಥಿ ಉಪನ್ಯಾಸಕರು (Guest Faculty) |
|---|---|---|---|---|
| ಬೋಧಕ | 575 | 219 | 356 | 529 |
| ಬೋಧಕೇತರ | 560 | 357 | 203 | - |
| ಒಟ್ಟು | **1135** | **576** | **559** | **529** |

ಮೈಸೂರು ವಿಶ್ವವಿದ್ಯಾಲಯವು ಪ್ರಸ್ತುತ ಈ ಕೆಳಕಂಡಂತೆ ಸ್ನಾತಕ-ಸ್ನಾತಕೋತ್ತರ ಹಾಗೂ ಸಂಶೋಧನಾ ಕೋರ್ಸ್‌ಗಳನ್ನು ನಡೆಸುತ್ತಿದೆ.

ಸ್ನಾತಕ ಕೋರ್ಸುಗಳ ವಿವರ;

| Name of the Courses | No. of Students at present | Admission in last 02 years | | Admission in 2025-26 | Last date of Admission |
|---|---|---|---|---|---|
| | | 2023-24 | 2024-25 | | |
| B.A, B.Sc, B.Com, BCA, BBA, BVA, BPA, BSW, B.Com-LLB, BBA in Tourism and Travel, BBA in Tourism and Hospitality , BA.SLP, B.Ed, B.Arch, B.Plan, B.A.B.Ed | 79622 | 24446 | 23226 | Processing | 30.08.2025 |

ಸ್ನಾತಕೋತ್ತರ ಕೋರ್ಸುಗಳ ವಿವರ;

| Name of the Courses | No. of Students at present | Admission in last 02 years | | Admission in 2025-26 | Last date of Admission |
|---|---|---|---|---|---|
| | | 2023-24 | 2024-25 | | |
| MA, M.Sc, M.Com, MBA, MCA, M.Tech, M.Arch, M.Vooc, LLM, M.VA, M.Ed, M.Ped | 10295 | 6063 | 7693 | Processing | 10.09.2025 |

ಪಿ.ಹೆಚ್.ಡಿ. ವಿವರ;

| Name of the Courses | No. of Students at present | Admission in last 02 years | | Admission in 2025-26 | Last date of Admission |
|---|---|---|---|---|---|
| | | 2023-24 | 2024-25 | | |
| Ph.D | 2743 | 239 | 260 | 268 | No last date for Admission |

ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎಸಿ., ವಿಭಾಗದಲ್ಲಿ ಈ ಕೆಳಕಂಡ ಕೋರ್ಸ್‌ಗಳನ್ನು ನಡೆಸುತ್ತಿದೆ;

(a) Master of Science Course: Anthropology, Applied Zoology, Applied Geology, Biochemistry, Biotechnology, Botany, Chemistry, Computer Science, Environmental Science, Food Science and Nutrition, Genetics, Geography, Geology, Human Development and Family Studies, Mathematics, Microbiology, Organic Chemistry, Physics, Psychology, Sericulture and Seri Biotechnology, Statistics, Zoology, Geographical Information System (GIS), Molecular Biology.

(b) Master of Library and Information Science (M.L.I.Sc)

(c) M.Sc.Tech. in Data Analytics and Learning

(d) M.Sc.Tech in Computer Science and Technology – through Karnataka Examination Authority.

(e) M.Sc in Information Technology (for Foreign Nationals)

ಪ್ರಸ್ತುತ ಮೈಸೂರು ವಿಶ್ವವಿದ್ಯಾಲಯದಲ್ಲಿ ಬೋಧಕ-ಬೋಧಕೇತರ ಹುದ್ದೆಗಳು ಖಾಲಿಯಿದ್ದು, ಸದರಿ ಹುದ್ದೆಗಳನ್ನು ಮೈಸೂರು ವಿಶ್ವವಿದ್ಯಾಲಯವು ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿರುತ್ತದೆ. ಮೈಸೂರು ವಿಶ್ವವಿದ್ಯಾಲಯವನ್ನು ಒಳಗೊಂಡಂತೆ ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಬೋಧಕ/ಬೋಧಕೇತರ ಹುದ್ದೆಗಳು, ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಇಂತಹ ಕೊರತೆಗಳನ್ನು ನಿವಾರಿಸಲು ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ. 13.02.2025 ಮತ್ತು 09.05.2025ರಂದು ಸಭೆಗಳನ್ನು ನಡೆಸಿದ್ದು, ಯಾವುದೇ ಶಿಫಾರಸ್ಸುಗಳನ್ನು ನೀಡಿರುವುದಿಲ್ಲ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಸಚಿವ ಸಂಪುಟದ ಮುಂದೆ ಮಂಡಿಸಿ ವಿಶ್ವವಿದ್ಯಾಲಯಗಳು ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಸದೃಢಗೊಳ್ಳಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತದೆ.

**ಐ) ವಿಷಯ:- ಆಶಾ ಕಾರ್ಯಕರ್ತೆಯರು ತಮ್ಮ ಗೌರವಧನವನ್ನು 10,000 ರೂಪಾಯಿಗಳಿಗೆ ಹೆಚ್ಚಿಸುವಂತೆ ಆಗ್ರಹಿಸಿ ಧರಣಿ ಮಾಡುತ್ತಿರುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ ರವರು, ಶ್ರೀಮತಿ ಬಲ್ಕೀಸ್‌ಬಾನುರವರು, ಶ್ರೀ ರಾಮೋಜಿಗೌಡರವರು ಹಾಗೂ ಶ್ರೀಮತಿ ಹೇಮಲತಾ ನಾಯಕ್‌ರವರು ದಿನಾಂಕ 14.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಆಶಾ ಕಾರ್ಯಕರ್ತೆಯು ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯಾಗಿದ್ದು, ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕಾರ್ಯಕ್ಷಮತೆ ಆಧಾರದ ಮೇಲೆ ಗೌರವಧನ ಮತ್ತು ಪ್ರೋತ್ಸಾಹಧನಕ್ಕೆ ಅರ್ಹರಾಗಿರುತ್ತಾರೆ.

ಆಶಾ ಕಾರ್ಯಕರ್ತೆಯರ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ಅರೆಕಾಲಿಕವಾಗಿದ್ದು, ಪೂರ್ಣಕಾಲಿಕ ಸ್ವರೂಪವಾಗಿರುವುದಿಲ್ಲ. ವಿಶೇಷ ಮತ್ತು ತುರ್ತು ವೈದ್ಯಕೀಯ ಪರಿಸ್ಥಿತಿಗಳನ್ನು ಹೊರತುಪಡಿಸಿ ಸೀಮಿತ ಅವಧಿಯ ಕರ್ತವ್ಯ ನಿರ್ವಹಣೆಯ ಸ್ವರೂಪವಾಗಿರುತ್ತದೆ.

ಆಶಾ ಕಾರ್ಯಕರ್ತೆಯರು ಸಮುದಾಯ ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಡುವೆ ಸಮನ್ವಯತೆ ಸಾಧಿಸಲು, ಮಾಹಿತಿ ವಿನಿಮಯ ಮಾಡಲು ಹಾಗೂ ಸಮುದಾಯ ಜಾಗರೂಕರಣ ಚಟುವಟಿಕೆಗಳು ಇವರ ಪ್ರಮುಖ ಜವಾಬ್ದಾರಿಯಾಗಿರುತ್ತವೆ ಹಾಗೂ ಇವರಿಗೆ ಈ ಕರ್ತವ್ಯಗಳನ್ನು ನಿರ್ವಹಿಸಲು ತರಬೇತಿಯನ್ನು ನೀಡಲಾಗಿರುತ್ತದೆ. ಈ ಚಟುವಟಿಕೆಗಳಲ್ಲಿ ಪರಿಣಿತರಾಗಿರುತ್ತಾರೆ.

ಆಶಾ ಕಾರ್ಯಕರ್ತೆಯರ ಕನಿಷ್ಠ ವಿದ್ಯಾರ್ಹತೆಯು ಎಂಟನೇ ತರಗತಿಯಾಗಿದ್ದು ಹಾಗೂ ತಾಂತ್ರಿಕ ಸಿಬ್ಬಂದಿಗಳಾಗದೇ ಇರುವ ಹಿನ್ನೆಲೆಯಲ್ಲಿ ಆರೋಗ್ಯ ಆರೈಕಾ ಸೇವಾ ( Health care service provider) ಪೂರೈಕೆದಾರರಾಗಲು ಅರ್ಹರಿರುವುದಿಲ್ಲ. ಇವರು ಸಮುದಾಯ ಆಧಾರಿತ ಚಟುವಟಿಕೆಗಳನ್ನು ಹೊರತುಪಡಿಸಿ ಶುಶ್ರೂಷಕ ಆಧಾರಿತ ಚಟುವಟಿಕೆಗಳನ್ನು ನಿರ್ವಹಿಸಲು ಸಾಧ್ಯವಿರುವುದಿಲ್ಲ.

ಆದಾಗ್ಯೂ ಆಶಾ ಕಾರ್ಯಕರ್ತೆಯರ ಕಾರ್ಯತತ್ಪರತೆ ಮತ್ತು ಅರ್ಪಣಾ ಮನೋಭಾವವನ್ನು ಸರ್ಕಾರವು ಶ್ಲಾಘಿಸುತ್ತದೆ. ಆರೋಗ್ಯ ಸೇವೆಗಳ ಪರಿಣಾಮಕಾರಿ ಪೂರೈಕೆ ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆಶಾ ಕಾರ್ಯಕರ್ತೆಯರ ಕಾರ್ಯತತ್ಪರತೆಯನ್ನು ಗುರುತಿಸಿರುವ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗೌರವಧನ ಮತ್ತು ಪ್ರೋತ್ಸಾಹಧನಗಳನ್ನು ಏರಿಕೆ ಮಾಡುತ್ತಿದೆ ಹಾಗೂ ಆರ್ಥಿಕೇತರ ಪ್ರೋತ್ಸಾಹಧನಗಳಾದ ಸನ್ಮಾನ್ಯ ಪ್ರಧಾನಮಂತ್ರಿಗಳ ಸಾಮಾಜಿಕ ಸುರಕ್ಷೆಯಡಿ ವಿಮಾ

ಸೌಲಭ್ಯ ಮತ್ತು ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆಯಡಿಯಲ್ಲಿ ನಗದು ರಹಿತ ಚಿಕಿತ್ಸಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪ್ರಸ್ತುತ ಆಶಾ ಕಾರ್ಯಕರ್ತೆಯರಿಗೆ ಕಾರ್ಯಕ್ಷಮತೆಯ ಆಧಾರದ ಮೇಲೆ ಕೆಳಕಂಡ ಗೌರವಧನ ಮತ್ತು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

| ಕ್ರ.ಸಂ | ವಿವರ | ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1 | 12 ಷರತ್ತುಗಳಿಗೆ ರಾಜ್ಯ ಸರ್ಕಾರದಿಂದ ಮಾಸಿಕ ಗೌರವಧನವನ್ನು ನೀಡಲಾಗುತ್ತಿದೆ. | ರೂ.5000/- |
| 2 | ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಆವರ್ತಕ ಮತ್ತು ನಿಯಮಿತ 8 ಚಟುವಟಿಕೆಗಳಿಗೆ ನೀಡಲಾಗುವ ಪ್ರೋತ್ಸಾಹಧನ | ರೂ.2000/- |
| 3 | ತಂಡ ಆಧಾರಿತ ಪ್ರೋತ್ಸಾಹಧನ (ಟೀಮ್ ಬ್ಯಸ್ಡ್ ಇನ್ಸೆಂಟೀವ್) | ರೂ.1000/- |
| 4 | ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಆಶಾ ಕಾರ್ಯಕರ್ತೆಯರಿಗೆ ಕಾರ್ಯಕ್ಷಮತೆಯ ಆಧಾರದ ಮೇಲೆ ನೀಡಲಾಗುವ ಪ್ರೋತ್ಸಾಹಧನ ಅಂದಾಜು | ಅಂದಾಜು ರೂ.500 ರಿಂದ ರೂ.1200/- |

ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನದ Mission Steering group ನ 9ನೇ ಸಭೆಯಲ್ಲಿ ತೀರ್ಮಾನಿಸಿದಂತೆ ಆಶಾ ಕಾರ್ಯಕರ್ತೆಯರಿಗೆ ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳ ಮತ್ತು ಇತರೆ ಕಾರ್ಯಕ್ರಮಗಳ ಕಾರ್ಯಕ್ಷಮತೆ ಪ್ರೋತ್ಸಾಹಧನವನ್ನು ಹೆಚ್ಚಳ ಮಾಡಲಾಗಿದೆ.

ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳ ಪ್ರೋತ್ಸಾಹಧನದ ಮೊತ್ತವನ್ನು ರೂ.2000/- ರಿಂದ ರೂ.3500/- ಕ್ಕೆ ಹೆಚ್ಚಳ ಮಾಡಲಾಗಿದೆ. ಹೆಚ್ಚಳ ಮಾಡಿರುವ ಪ್ರೋತ್ಸಾಹಧನದ ಮೊತ್ತವನ್ನು ಪಾವತಿ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ನಂತರ ಶೀಘ್ರವಾಗಿ ಅನುಷ್ಠಾನಗೊಳಿಸಲಾಗುವುದು. ಅನುಷ್ಠಾನಗೊಂಡ ನಂತರ ಪ್ರತಿ ಆಶಾ ಕಾರ್ಯಕರ್ತೆಯರಿಗೆ ಪ್ರತಿ ಮಾಹೆ ರೂ.9500 ನಿಗದಿತ ಪ್ರೋತ್ಸಾಹಧನವು ಹಾಗೂ 34 ಆರೋಗ್ಯ ಸಂಬಂಧಿ ಚಟುವಟಿಕೆಗಳಿಗೆ ನೀಡಲಾಗುವ ಕಾರ್ಯಕ್ಷಮತೆಯ ಆಧಾರಿತ ಪ್ರೋತ್ಸಾಹಧನವು ಸೇರಿ ಪ್ರತಿ ತಿಂಗಳು ಕನಿಷ್ಠ ರೂ.10,000 ಪ್ರೋತ್ಸಾಹ ಧನವು ಲಭ್ಯವಾಗುವುದು.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆಯುಷ್ಮಾನ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರದ ಮತ್ತು ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ತಂಡ ಆಧಾರಿತ ಪ್ರೋತ್ಸಾಹಧನವು ಲಭ್ಯವಾಗದ ಹಿನ್ನಲೆಯಲ್ಲಿ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಸಮಾನವಾಗಿ ತಂಡ ಆಧಾರಿತ ಪ್ರೋತ್ಸಾಹಧನವು ಲಭ್ಯವಾಗುವ ನಿಟ್ಟಿನಲ್ಲಿ ಆದೇಶ ಸಂಖ್ಯೆ : ಆಕುಕ 53 ಎಫ್.ಪಿ.ಇ 2025 ದಿನಾಂಕ: 15.05.2025 ರಲ್ಲಿ ರಾಜ್ಯ ಸರ್ಕಾರದ ಅನುದಾನದಿಂದ 2025-26 ನೇ ಸಾಲಿನಲ್ಲಿ ಮಾಸಿಕ ರೂ.1000/- ಗಳ ತಂಡ ಆಧಾರಿತ ಪ್ರೋತ್ಸಾಹಧನವನ್ನು ನೀಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಗ್ರಾಮೀಣ ಮತ್ತು ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ಸಮಾನವಾದ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

ಸೇವಾ ನಿವೃತ್ತಿ ಪಡೆಯುವ ಆಶಾ ಕಾರ್ಯಕರ್ತೆಯರಿಗೆ ಪಶ್ಚಿಮ ಬಂಗಾಳದ ಮಾದರಿಯಲ್ಲಿ ಐದು ಲಕ್ಷ ರೂಪಾಯಿಗಳನ್ನು ನೀಡುವುದು ನೀತಿ ನಿರೂಪಣಾ ವಿಷಯವಾಗಿದೆ. ರಾಜ್ಯದಲ್ಲಿ 10 ವರ್ಷ ನಿರಂತರ ಸೇವೆ ಸಲ್ಲಿಸಿ ಕರ್ತವ್ಯವನ್ನು ತ್ಯಜಿಸುವ ಆಶಾ ಕಾರ್ಯಕರ್ತೆಯರಿಗೆ ರೂ.20,000 ಏಕಗಂಟಿನ ಪ್ರೋತ್ಸಾಹಧನವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ನೀಡಲಾಗುತ್ತಿದ್ದು, ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನದ Mission Steering group ನ 9ನೇ ಸಭೆಯಲ್ಲಿ ಸದರಿ ರೂ.20,000 ಗಳ ಮೊತ್ತವನ್ನು ರೂ.50,000 ಕ್ಕೆ ಏರಿಕೆ ಮಾಡಿದ್ದು, ಈ

ಮೊತ್ತವನ್ನು 60 ವರ್ಷ ಪೂರೈಸಿದ ಆಶಾ ಕಾರ್ಯಕರ್ತೆಯರಿಗೆ ನೀಡಲು ತೀರ್ಮಾನಿಸಲಾಗಿದೆ. ಅದರಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆಯ ನಂತರ ಜಾರಿಗೊಳಿಸಲಾಗುವುದು.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಗಳಿಗೆ ಪರಿಣಾಮಕಾರಿ ಕಾರ್ಯಕ್ಷಮತೆಯನ್ನು ಖಾತ್ರಿಪಡಿಸಲು ಕಾರ್ಯಕ್ಷಮತೆ ಪರಾಮರ್ಶೆ ಪ್ರಕ್ರಿಯೆ ನಡೆಸಲಾಗುತ್ತಿದ್ದು, ಸಾರ್ವನಿಕರಿಗೆ ಉತ್ತಮ ಸೇವೆಯನ್ನು ನೀಡಲು, ಕಾರ್ಯಕ್ರಮದ ಹಾಗೂ ಆಶಾ ಕಾರ್ಯಕರ್ತೆಯರ ಹಿತದೃಷ್ಟಿಯಿಂದ ಇವರಿಗೂ ಸಹ ಕಾರ್ಯಕ್ಷಮತೆ ಪರಾಮರ್ಶೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದ್ದು, ಇದರಿಂದ ನಿಷ್ಕ್ರೀಯ ಆಶಾ ಕಾರ್ಯಕರ್ತೆಯರನ್ನು ಗುರುತಿಸಲು ಸಾಧ್ಯವಾಗುತ್ತದೆ ಮತ್ತು ಆಶಾ ಕಾರ್ಯಕರ್ತೆಯರ ಕಾರ್ಯಕ್ಷಮತೆಯನ್ನು ಗಮನಿಸಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಆಯ್ದ ಆಶಾ ಕಾರ್ಯಕರ್ತೆಯರು ಆಶಾ ಸುಗಮಕಾರರ ದ್ವಿ-ಸ್ವರೂಪದ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ಆಶಾ ಕಾರ್ಯಕರ್ತೆಯರಿಗೆ ಮೇಲ್ಕೈ ಬೆಂಬಲವನ್ನು ನೀಡುತ್ತಿದ್ದರು. ಕಾರ್ಯಕ್ರಮದ ಚಟುವಟಿಕೆಗಳು ಸುಗಮಗೊಂಡಿರುವ ( Streamline ) ಹಾಗೂ ಎರಡು ಜವಾಬ್ದಾರಿಗಳನ್ನು ನಿರ್ವಹಣೆ ಮಾಡುವಲ್ಲಿ ಕಾರ್ಯದೊತ್ತಡದ ಕಾರಣದಿಂದ ಆಶಾ ಸುಗಮಕಾರರ ದ್ವಿ- ಸ್ವರೂಪದ ಜವಾಬ್ದಾರಿಗಳನ್ನು ಪ್ರತ್ಯೇಕಗೊಳಿಸಲಾಗಿದ್ದು, ಇವರ ಜವಾಬ್ದಾರಿಗಳನ್ನು ದಿನಾಂಕ 25.02.2025 ರಂದು ಹಿಂಪಡೆಯಲಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿಯನ್ವಯ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ 1000 ಜನಸಂಖ್ಯೆ ಹಾಗೂ ನಗರ ಪ್ರದೇಶದಲ್ಲಿ 2500 ಜನಸಂಖ್ಯೆ (ಕೊಳಗೇರಿ ಮತ್ತು ದುರ್ಬಲ ವರ್ಗದ ಪ್ರದೇಶಗಳು) ಒಬ್ಬರಂತೆ ಆಶಾ ಕಾರ್ಯಕರ್ತೆಯರನ್ನು ಆಯ್ಕೆ ಮಾಡಬೇಕಾಗಿರುತ್ತದೆ.

ಆಶಾ ಕಾರ್ಯಕ್ರಮವು 2025-26 ನೇ ಸಾಲಿನಲ್ಲಿ ಆರಂಭಗೊಂಡಿದ್ದು, ಆರಂಭಿಕ ದಿನಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಆಯ್ಕೆಪ್ರಕ್ರಿಯೆಯು ನಡೆದಿರುತ್ತದೆ. ಜಿಲ್ಲಾಮಟ್ಟದಲ್ಲಿ ಇದೇ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪ್ರೋತ್ಸಾಹಧನವು ಕಡಿಮೆ ಪ್ರಮಾಣದಲ್ಲಿ ಲಭ್ಯವಾಗುತ್ತಿರುವ ಅಂಶವನ್ನು ಪರಿಶೀಲಿಸಿದಾಗ ಕೆಲವು ಆಶಾಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನಿಗದಿತ ಜನಸಂಖ್ಯೆ 1000 ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಕಾರ್ಯ ಕ್ಷಮತೆಯ ಆಧಾರದ ಪ್ರೋತ್ಸಾಹಧನವು ದೊರಕದೇ ಇರುವುದು ಕಂಡು ಬಂದಿರುತ್ತದೆ. ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಆಶಾ ಕಾರ್ಯಕರ್ತೆಯರಿಗೆ ಜನಸಂಖ್ಯೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ ನಿಯಮಾನುಸಾರ ತರ್ಕ ಬದ್ಧಗೊಳಿಸಿ ( Rationalization ) ಹಂಚಿಕೆ ಮಾಡುವ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಜನಸಂಖ್ಯೆಯನ್ನು ನಿಯಮಾನುಸಾರ ಹಂಚಿಕೆ ಮಾಡುವ ಉದ್ದೇಶದಿಂದ ಆಶಾ ಕಾರ್ಯಕರ್ತೆಯರ ಸ್ಥಾನಗಳನ್ನು ತರ್ಕ ಬದ್ಧಗೊಳಿಸಿ ( Rationalization ) ಪ್ರಕ್ರಿಯೆ ನಡೆಸಲು ತೀರ್ಮಾನಿಸಲಾಗಿರುತ್ತದೆ.

**ಒ) ವಿಷಯ:- ಮೈಸೂರಿನಲ್ಲಿ ತಯಾರಾದ ಮಾದಕ ವಸ್ತುವಿಗೆ ಮಹಾರಾಷ್ಟ್ರದ ನಂಟು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಮಾದಕ ಜಾಲವನ್ನು ಬುಡ ಸಮೇತ ಕಿತ್ತು ಹಾಕುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರು ದಿನಾಂಕ 14.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ಹೊರ ರಾಜ್ಯದ ಪೊಲೀಸರು ಬೇಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ಮೊ.ನಂ. 296/2025 ಕಲಂ 8(ಸಿ), 22(ಸಿ), 29 ಎನ್.ಡಿ.ಪಿ.ಎಸ್ ಕಾಯ್ದೆ-1985 ಮತ್ತು ಕಲಂ 111 ಬಿ.ಎನ್.ಎಸ್. ಕಾಯ್ದೆ 2023 ರ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದ ಮುಂಬೈ ನಿವಾಸಿಯಾದ ಆರೋಪಿ ಸಲೀಂ ಇಮ್ತಿಯಾಜ್ ಶೇಖ್, ವಯಸ್ಸು 47 ವರ್ಷ ಈತನು ನೀಡಿದ ಹೇಳಿಕೆಯಲ್ಲಿ ಮೈಸೂರು ನಗರದಲ್ಲಿ ಮೊದಲ ಬಾರಿಗೆ ಜುಲೈ ಮೊದಲನೇ ವಾರದಲ್ಲಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪ್ರಾರಂಭಿಸಿರುವುದಾಗಿ ತಿಳಿಸಿದ ಮೇರೆಗೆ, ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಮೈಸೂರು ನಗರ ನರಸಿಂಹರಾಜ ಪೊಲೀಸ್ ಠಾಣೆಯ ಠಾಣಾಧಿಕಾರಿಗಳೊಂದಿಗೆ ದಿನಾಂಕ: 26/07/2025 ರಂದು ಜಂಟಿ ಕಾರ್ಯಾಚರಣೆ ನಡೆಸಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪತ್ತೆ ಮಾಡಿ 04 ಜನ ಆರೋಪಿಗಳನ್ನು ದಸ್ತಗಿರಿ ಮಾಡಿರುತ್ತಾರೆ. ಸದರಿ ಘಟನೆಗೆ ಸಂಬಂಧಿಸಿದಂತೆ ಬೀಟ್ ಹಾಗೂ ಗುಪ್ತ ಮಾಹಿತಿ ಸಂಗ್ರಹಿಸುವ ಸಿಬ್ಬಂದಿಗಳು ಮಾಹಿತಿ ಸಂಗ್ರಹಿಸುವಲ್ಲಿ ವಿಫಲತೆ ಹೊಂದಿರುವುದರಿಂದ ಇವರುಗಳನ್ನು ಅಮಾನತ್ತುಗೊಳಿಸಲಾಗಿದೆ.

ಮೈಸೂರು ನಗರದಲ್ಲಿ ಕಳೆದ 3 ವರ್ಷಗಳಲ್ಲಿ ವರದಿಯಾಗಿರುವ ಪ್ರಕರಣಗಳ ಸಂಖ್ಯೆ, ಬಂಧಿಸಿರುವ ಆರೋಪಿಗಳು ಮತ್ತು ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಪ್ರಮಾಣ ಮತ್ತು ಅಂದಾಜು ಮೌಲ್ಯದ ವಿವರ ಈ ಕೆಳಕಂಡಂತಿದೆ:-

| Year | Reported | Accused | GANJA in KGs | SYNTHETIC DRUGS (Grams) | Value of the Drugs |
|---|---|---|---|---|---|
| 2023 | 62 | 119 | 227.809 | 356.039 | 68,44,660 |
| 2024 | 43 | 81 | 379.312 | 143.85 | 1,02,45,050 |
| 2025 | 326 | 361 | 101.193 | 153.165 | 26,89,875 |

**ರಾಜ್ಯದಲ್ಲಿ ಮಾದಕ ವಸ್ತುಗಳ ಸೇವನೆ, ಮಾರಾಟವನ್ನು ತಡೆಗಟ್ಟಲು ಹಾಗೂ ಮಾದಕ ಮುಕ್ತ ರಾಜ್ಯವನ್ನಾಗಿ ಮಾಡಲು ಸರ್ಕಾರವು ತೆಗೆದುಕೊಂಡ <u>ಕ್ರಮಗಳು ಈ ಕೆಳಕಂಡಂತಿದೆ:</u>**

- ರಾಜ್ಯದಲ್ಲಿ ಮಾದಕ ವಸ್ತುಗಳ ನಿಯಂತ್ರಣ ಕುರಿತಂತೆ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/141/ಪಿಒಪಿ/2025 ದಿನಾಂಕ: 02/08/2025ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (Anti Narcotics Task Force) ಘಟಕವನ್ನು ಸೃಜಿಸಲಾಗಿದೆ. ಈ ಕಾರ್ಯ ಪಡೆಯು ದಿನಾಂಕ:02.08.2025 ರಂದು ರಚನೆಯಾಗಿರುತ್ತದೆ.

- ಮಾದಕ ಬೆಳೆಗಳ ಗುರುತಿಸುವಿಕೆ ಮತ್ತು ನಾಶ, ಅಕ್ರಮ ಮಾದಕ ವ್ಯಸನವನ್ನು ಪತ್ತೆ ಹಚ್ಚಲು ಮತ್ತು ನಿರ್ಮೂಲನೆ ಮಾಡಲು ರಾಜ್ಯಾದ್ಯಂತ ಪೊಲೀಸ್ ಸಿಬ್ಬಂದಿಗೆ NCB (ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ) ಆನ್‌ಲೈನ್ ಕಾರ್ಯಾಗಾರಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ NCB ಮೊಬೈಲ್ ಅಪ್ಲಿಕೇಶನ್/ವೆಬ್ ಪೋರ್ಟಲ್ MAPDRUGS ಅನ್ನು ಸಹ ಪರಿಚಯಿಸಲಾಗಿದೆ.

- ಮಾದಕವಸ್ತು ಸಂಬಂಧಿತ ಪ್ರಕರಣಗಳಲ್ಲಿ ರಾಜ್ಯ ಪೊಲೀಸರ ತನಿಖಾ ಸಾಮರ್ಥ್ಯಗಳನ್ನು ಹೆಚ್ಚಿಸಲು NCB ಮತ್ತು ಇತರೆ ಏಜೆನ್ಸಿಗಳ ಸಹಯೋಗದೊಂದಿಗೆ ಆರು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಉಪ ಅಧೀಕ್ಷಕರವರಿಗೆ (ಡಿವೈಎಸ್ಪಿ), ಪೊಲೀಸ್ ನಿರೀಕ್ಷಕರು ಮತ್ತು ಅಬಕಾರಿ ಅಧಿಕಾರಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ. ಮತ್ತಷ್ಟು ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರಗಳನ್ನು ಯೋಜಿಸಲಾಗಿದೆ.

- ತರಬೇತಿ ಕಾರ್ಯಕ್ರಮಗಳು:- ಸಿಐಡಿ ಅಧಿಕಾರಿಗಳನ್ನು ಭೋಪಾಲ್ ನಲ್ಲಿರುವ ಸೆಂಟ್ರಲ್ ಅಕಾಡೆಮಿ ಫಾರ್ ಪೊಲೀಸ್ ಟ್ರೈನಿಂಗ್ (ಸಿಎಪಿಟಿ) ತರಬೇತುದಾರರಿಗಾಗಿ ತರಬೇತಿ (TOT) ಹಾಗೂ ಮಾದಕ ದ್ರವ್ಯ ತನಿಖೆಯ ಮೇಲೆ ಕೇಂದ್ರೀಕರಿಸಿದ ಕಾರ್ಯಕ್ರಮಗಳಿಗೆ ಕಳುಹಿಸಲಾಗಿದೆ. NDPS ಕಾಯ್ದೆ (Narcotic Drugs and Psychotropic Substances Act-1985) ಕುರಿತು ಇತರೆ ಸಿಬ್ಬಂದಿಗೆ ಪೊಲೀಸ್ ತರಬೇತಿ ಶಾಲೆಗಳಲ್ಲಿ ಇದೇ ರೀತಿಯ ತರಬೇತಿಯನ್ನು ನೀಡಲಾಗುತ್ತಿದೆ.

- ಬೆಂಗಳೂರು ಪೊಲೀಸರು ಅಕ್ರಮ ಮಾದಕ ದ್ರವ್ಯ ಚಟುವಟಿಕೆಗಳಲ್ಲಿ ತೊಡಗಿರುವ ವಿದೇಶಿಗರು ವಾಸಿಸುವ ಪ್ರದೇಶಗಳ ಮೇಲೆ ಸೂಕ್ತ ನಿಗಾ ವಹಿಸಿ ಅಕ್ರಮ ಚಟುವಟಿಕೆ ಮೇಲೆ ನಿಯಂತ್ರಣ ಸಾಧಿಸಲಾಗಿದೆ.

- ಮಾದಕ ದ್ರವ್ಯ ಸೇವನೆ, ಮಾರಾಟ, ಸಂಗ್ರಹಣೆ ಮತ್ತು ಸರಬರಾಜು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಸಿಐಡಿ ಘಟಕದಲ್ಲಿ ವಿಶೇಷ ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈಗಾಗಲೇ ರಾಜ್ಯದಲ್ಲಿ 167 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.

- ಜೂನ್ 26, 2025 ರಂದು "ಡ್ರಗ್ಸ್ ದುರುಪಯೋಗ ಮತ್ತು ಅಕ್ರಮ ಸಾಗಣೆಕೆ ವಿರುದ್ಧ ಅಂತರ ರಾಷ್ಟ್ರೀಯ ದಿನಾಚರಣೆ" ಅಂಗವಾಗಿ ಸುಮಾರು 4000 ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಾಗಾರ ಆಯೋಜಿಸಿ ತಿಳುವಳಿಕೆ ನೀಡಲಾಗಿದೆ.

- Drugs Free Karnataka Mobile App ಅನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ, ಮಾದಕವಸ್ತು ಬಳಕೆ, ಸಂಗ್ರಹಣೆ, ಸರಬರಾಜು ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮಕೈಗೊಳ್ಳಲಾಗುತ್ತಿದೆ.

- NDPS ಪ್ರಕರಣಗಳಲ್ಲಿನ ಆರೋಪಿಗಳ ಮಾಹಿತಿಯನ್ನು ಪೊಲೀಸ್ ಐಟಿ ತಂತ್ರಾಂಶ- National Integrated Database on Arrested Narco Offenders - NIDAAN ಪೋರ್ಟಲ್‌ನಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆ. ಆರೋಪಿಗಳ ದತ್ತಾಂಶ ವಿಶ್ಲೇಷಣೆ ಮಾಡಿ ಆರೋಪಿಗಳ ಚಲನವಲನಗಳ ಮೇಲೆ ನಿಗಾವಹಿಸಲಾಗಿದೆ.

- ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿNCORD (Narcotics Co- ordination) ಸಮಿತಿ ರಚನೆಗೊಂಡಿರುತ್ತದೆ. NDPS ಕಾಯ್ದೆ ಜಾರಿಗೊಳಿಸುವ ಸಂಬಂಧ ಇತರೆ ಇಲಾಖೆಯ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಎನ್.ಡಿ.ಪಿ.ಎಸ್ ಪ್ರಕರಣಗಳಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಿಯಾಗುವ ಆರೋಪಿಗಳನ್ನು Passport Act-1920, Foreigners Act-1946 & Foreigners Order-1948ರ ಅಡಿಯಲ್ಲಿ ಗಡಿಪಾರು ಪ್ರಕ್ರಿಯೆ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

- PITNDPS-1988ರ ಕಾಯ್ದೆ ಅನ್ವಯವಾಗುವ ಆರೋಪಿಗಳ ವಿರುದ್ಧ ನಿಯಾಮಾನುಸಾರ ಬಂಧನ ಕ್ರಮ ಜರುಗಿಸಿ ಮಾನ್ಯ PITNDPS ಸಲಹಾ ಮಂಡಳಿಯ ಮುಂದೆ ಬಂಧಿತ ಆರೋಪಿಯನ್ನು ಹಾಜರುಪಡಿಸಿ, ಮಾನ್ಯ ಸಲಹಾ ಮಂಡಳಿಯ ವರದಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

- ಡ್ರಗ್ಸ್ ದಂಧೆಯನ್ನು ಸಂಪೂರ್ಣ ಮಟ್ಟ ಹಾಕಲು ಮತ್ತು ಪೆಡ್ಲರ್‌ಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು NDPS-1985/PITNDPS-1988 ರ ಕಾಯ್ದೆಗಳು ಮತ್ತು ನಿಯಮಗಳಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

- ಕರ್ನಾಟಕ ರಾಜ್ಯವನ್ನು ದುರುಪಯೋಗದಿಂದ ಮುಕ್ತಗೊಳಿಸುವುದಕ್ಕೆ, ಯುವ ಜನತೆಗೆ ನಶೆಯಿಂದ ಉಂಟಾಗುವ ದೈಹಿಕ, ಮಾನಸಿಕ, ಸಾಮಾಜಿಕ ಹಾನಿಗಳ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ, ಪುನರ್ವಸತಿ, ಕೇಂದ್ರಗಳು, ಸಲಹಾ ಕೇಂದ್ರಗಳು ಮತ್ತು ಸಲಹಾ ಸೇವೆಗಳ ಮೂಲಕ ಪೀಡಿತ ವ್ಯಸನಿಗಳನ್ನು ಸಮಾಜದಲ್ಲಿ ಮರುಸ್ಥಾಪಿಸುವುದಕ್ಕೆ ಸಮುದಾಯದ ಭಾಗವಹಿಸುವಿಕೆ ಮೂಲಕ ಪರಿಹಾರ ಸಾಧಿಸುವುದಕ್ಕೆ, ನಿರಂತರವಾಗಿ ಇತರೆ ಎಲ್ಲಾ ಇಲಾಖೆಗಳ ಸಹಭಾಗಿತ್ವ ಮತ್ತು ಸಮನ್ವಯದೊಂದಿಗೆ ಶ್ರಮಿಸುತ್ತಿರುತ್ತದೆ.

**ಓ) ವಿಷಯ:- ಸಿಂಧನೂರಿನ ನಗರ ಹೃದಯ ಭಾಗದಲ್ಲಿ ಹಣ್ಣಿನ ತೋಟವನ್ನು ನಿರ್ಲಕ್ಷಿಸದೆ ಅಭಿವೃದ್ಧಿ ಪಡಿಸುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ರವರು ದಿನಾಂಕ 14.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಉತ್ತರ:** ರಾಯಚೂರು ಜಿಲ್ಲೆಯ ಸಿಂಧನೂರು ತೋಟಗಾರಿಕೆ ಕ್ಷೇತ್ರದ ಸರ್ವೆ ನಂ.775/P1, 775/P2 ಹಾಗೂ 775/P3 ರಲ್ಲಿ ಒಟ್ಟು 24 ಎಕರೆ 11 ಗುಂಟೆ ಜಮೀನನ್ನು ಕರ್ನಾಟಕ ಸರ್ಕಾರವು 1963ರಲ್ಲಿ ಭೂ ಸ್ವಾಧೀನ ಪಡಿಸಿಕೊಂಡು 1967-68ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಸದರಿ ತೋಟಗಾರಿಕೆ ಕ್ಷೇತ್ರದಲ್ಲಿ ಒಟ್ಟು 24 ಎಕರೆ 11 ಗುಂಟೆ ಜಮೀನು ಇದ್ದು, ಸರ್ಕಾರದ ಆದೇಶದಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು ರವರಿಗೆ 2 ಎಕರೆ ಜಮೀನನ್ನು ಹಸ್ತಾಂತರಿಸಲಾಗಿದೆ. ಪ್ರಸ್ತುತ ತೋಟಗಾರಿಕೆ ಇಲಾಖೆಯ ಸುಪರ್ಧಿಯಲ್ಲಿ 22 ಎಕರೆ 11 ಗುಂಟೆ ಜಮೀನು ಇರುತ್ತದೆ.

ಸರ್ಕಾರಿ ಹಣ್ಣಿನ ತೋಟದ ಸರ್ವೆ ನಂ.775/P1, 775/P2 ಹಾಗೂ 775/P3 ರಲ್ಲಿ ಒಟ್ಟು 22 ಎಕರೆ 11 ಗುಂಟೆ ಜಮೀನಿನಲ್ಲಿ ಪ್ರಸ್ತುತ 120 ಸಪೋಟ ಮರಗಳಿದ್ದು, 58 ವರ್ಷ ಹಳೆಯದಾಗಿದ್ದು, ಯಾವುದೇ ಫಸಲನ್ನು ನೀಡುವ ಕ್ಷಮತೆ ಇರುವುದಿಲ್ಲ. ತೋಟಗಾರಿಕೆ ಕ್ಷೇತ್ರಕ್ಕೆ ನೀರಿನ ಮೂಲ ಆಧಾರವಾಗಿದ್ದ D-40 ಕಾಲುವೆಯ ಅಕ್ಕಪಕ್ಕದ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿದ್ದು, ನೀರಿನ ಕಾಲುವೆಯು ಚರಂಡಿಯಾಗಿ ಮಾರ್ಪಾಟಾಗಿರುತ್ತದೆ. ಇದರಿಂದ ತೋಟಗಾರಿಕೆ ಕ್ಷೇತ್ರದಲ್ಲಿ ನೀರಾವರಿಯ ಮೂಲವು ಇಲ್ಲದಂತಾಗಿ 250 ಸಂಖ್ಯೆಯಷ್ಟಿದ್ದ ಸಪೋಟ ಮರಗಳು ಕ್ರಮೇಣ ಒಣಗುತ್ತಾ ಸೊರಗುತ್ತಿವೆ ಹಾಗೂ ಉಳಿದಿರುವ ಮರಗಳು ಫಸಲು ಸಹ ಬಿಡದಂತಾಗಿದೆ. ಕ್ಷೇತ್ರದ ನಿರ್ವಹಣೆ ಮಾಡಲು KSHDA ಯೋಜನೆಯಡಿ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯಿಸಲಾಗಿದ್ದು, ನೀರು ಲಭಿಸಿರುವುದಿಲ್ಲ ಹಾಗೂ ಇತರೆ ಯಾವುದೇ ನೀರಿನ ಮೂಲ ಇಲ್ಲದಿರುವುದರಿಂದಾಗಿ ಮರಗಳು ಸೊರಗುವುದು ಹೆಚ್ಚಾಗಿರುತ್ತದೆ.

ಸದರಿ ತೋಟಗಾರಿಕೆ ಕ್ಷೇತ್ರದ ಜಮೀನಿನ ಮೂಲ ಮಾಲೀಕತ್ವದ ಬಗ್ಗೆ ಜೆ.ಎಂ.ಎಫ್.ಸಿ., ಸಿಂಧನೂರು ನ್ಯಾಯಾಲಯದಲ್ಲಿ ತೋಟಗಾರಿಕೆ - ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು, ರಾಯಚೂರು ರವರ ವಿರುದ್ಧ ದಾವೆಯನ್ನು ಹೂಡಲಾಗಿದೆ. (Old O.S. No. 18/10, New O.S No. 81/14). ಆದುದರಿಂದ, ತೋಟಗಾರಿಕೆ ಕ್ಷೇತ್ರದಲ್ಲಿ ಯಾವುದೇ ಕಾಮಗಾರಿ/ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಾಗಿರುವುದಿಲ್ಲ.

ಮುಂದುವರೆದು, 2024 ರಲ್ಲಿ III Addl. District & Sessions Court, Raichur sitting at Sindhanur ಇಲ್ಲಿ Misc/5312/2024 ಪ್ರಕರಣವು ದಾಖಲಾಗಿದ್ದು ಪ್ರಸ್ತುತ ವಿಚಾರಣೆ ಹಂತದಲ್ಲಿರುತ್ತದೆ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್ ಕಛೇರಿ, ಸರ್ಕಾರಿ ಹಣ್ಣಿನ ತೋಟದ ಆವರಣದಲ್ಲಿಯೇ ಇದ್ದು, ಸಿಂಧನೂರು ತಾಲ್ಲೂಕಿನ ರೈತರಿಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ ಹಾಗೂ ಇಲಾಖೆಯ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ವಲಯದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ ಸಸ್ಯಾಭಿವೃದ್ಧಿ , ಸಾಧಾರಣ ಕಾಡು ಸ್ವಚ್ಛಗೊಳಿಸುವುದಕ್ಕಾಗಿ ಹೊರ ಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆಯನ್ನು ಪಡೆಯಲು ಒಟ್ಟಾರೆ ರೂ.6.21 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

**ಔ) ವಿಷಯ:- ವಿದ್ಯಾರ್ಥಿಗಳ ಸಂಖ್ಯೆ ಆಧರಿಸಿ ಶಾಲಾ ನಿರ್ವಹಣಾ ಅನುದಾನ ಹಂಚಿಕೆಗೆ ಶಿಕ್ಷಕರ ಒತ್ತಾಯ ಅಸಮಾಧಾನಕ್ಕೆ ಕಾರಣವಾಗುವ ಅನುದಾನದ ಬಗ್ಗೆ.**

\- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ರವರು ದಿನಾಂಕ 18.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

2024-25ನೇ ಸಾಲಿಗೆ ಶಾಲೆಗಳಲ್ಲಿ ಶೌಚಾಲಯ ಮತ್ತು ಇತರೇ ನಿರ್ವಹಣೆಗೆ ದಾಖಲಾತಿಗನುಗುಣವಾಗಿ ರಾಜ್ಯ ಸರ್ಕಾರದಿಂದ ಈ ಕೆಳಕಂಡಂತೆ ಅನುದಾನ ನಿಗದಿಯಾಗಿರುತ್ತದೆ.

| ಕ್ರ. ಸಂ. | ಮಕ್ಕಳ ಸಂಖ್ಯೆ | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ | ಘಟಕ ವೆಚ್ಚ (ರೂ.ಗಳಲ್ಲಿ) | ನಿಗದಿ ಮಾಡಲಾದ ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | 1-50 | 24,234 | 9,250 | 2241.64 | 5798.32 |
| 2 | 51-100 | 8,605 | 14,000 | 1204.7 | |
| 3 | 101-500 | 12,689 | 17,500 | 2220.57 | |
| 4 | 501+ | 584 | 22,500 | 131.4 | |
| | **ಒಟ್ಟು** | | | **5798.32** | **5798.32** |

ರಾಜ್ಯದಲ್ಲಿರುವ 308 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮಕ್ಕಳ ದಾಖಲಾತಿ ಸಂಖ್ಯೆ ಅನುಗುಣವಾಗಿ 5 ಲಕ್ಷದಿಂದ 9 ಲಕ್ಷಗಳವರೆಗೆ ಶಾಲಾ ನಿರ್ವಹಣಾ ಅನುದಾನ ಒದಗಿಸಲಾಗುತ್ತಿದ್ದು, ಸದರಿ ಅನುದಾನದಲ್ಲಿ ಶೌಚಾಲಯ ನಿರ್ವಹಣೆಗೆ ರೂ.20,000/- ರಿಂದ ರೂ.45,000/-ರವರೆಗೆ ಬಳಸಲು ಅವಕಾಶ ಕಲ್ಪಿಸಲಾಗಿದೆ.

**2025-26ನೇ ಸಾಲಿನ ಶಾಲಾ/ಕಾಲೇಜು ನಿರ್ವಹಣಾನುದಾನ:-**

ಶೌಚಾಲಯ ಮತ್ತು ಇತರೆ ನಿರ್ವಹಣೆ ವೆಚ್ಚಕ್ಕಾಗಿ 5329.00 ಲಕ್ಷಗಳ ಅನುದಾನದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅನುದಾನ ಬಿಡುಗಡೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ರಾಜ್ಯ ಸರ್ಕಾರದ ಅಡಿಯಲ್ಲಿ ಬರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಶಾಲಾನುದಾನವನ್ನು (ವಾರ್ಷಿಕವಾಗಿ) ಈ ಕೆಳಕಂಡ ಉದ್ದೇಶಗಳಿಗೆ ಬಿಡುಗಡೆಗೊಳಿಸಲಾಗುತ್ತಿದೆ.

1) ಕಛೇರಿಯ ದಾಖಲೆ ಪುಸ್ತಕಗಳು (ದಾಖಲಾತಿ ಪುಸ್ತಕ, ಹಾಳೆಗಳು, ಹಾಜರಾತಿ ಪುಸ್ತಕ, ವರ್ಗಾವಣೆ ಪತ್ರ, ಅಂಕಪಟ್ಟಿ, ಇತರೆ.)
2) ತರಗತಿಗೆ ಅಗತ್ಯವಿರುವ ಅಂಕಪಟ್ಟಿ ಇತರೆ (ಸೀಮೆಸುಣ್ಣ, ಡಸ್ಟರ್, ಇತರೆ)
3) ಬೋಧನೋಪಕರಣಗಳ ತಯಾರಿಕೆ, ಬೋಧನೋಪಕರಣಗಳ ಖರೀದಿ
4) ಕಟ್ಟಡದ ಸಣ್ಣ-ಪುಟ್ಟ ದುರಸ್ತಿ (ಬಾಗಿಲು, ಕಿಟಕಿ, ಶೌಚಾಲಯ)
5) ಶುದ್ಧ ಕುಡಿಯುವ ನೀರಿನ ವ್ಯವಸ್ಥೆ
6) ಪೀಠೋಪಕರಣಗಳ ದುರಸ್ತಿ

7) ಪ್ರಯೋಗಾಲಯ/ಕ್ರೀಡಾ ಸಾಮಗ್ರಿಗಳ ಖರೀದಿ/ದುರಸ್ತಿ
8) ವಿದ್ಯುತ್/ ದೂರವಾಣಿ ಬಿಲ್ ಪಾವತಿ/ದುರಸ್ತಿ
9) ದಿನಪತ್ರಿಕೆ ಮತ್ತು ವಾರ ಪತ್ರಿಕೆ ವೆಚ್ಚ
10) ಶಾಲಾ ಸ್ವಚ್ಛತಾ ವೆಚ್ಚ.

ಬಿಡುಗಡೆಗೊಳಿಸಲಾದ ಶಾಲಾನುದಾನದ ಶೇಕಡಾ 10 ರಷ್ಟು ಮೊತ್ತವನ್ನು ಶಾಲಾ ಸ್ವಚ್ಛತಾ ಕಾರ್ಯಚಟುವಟಿಕೆಗಳಿಗೆ ಬಳಸಿಕೊಳ್ಳಲು ಸೂಚಿಸಲಾಗಿರುತ್ತದೆ.

**PAB ಮಾನದಂಡಗಳ ಪ್ರಕಾರ :**

- 1 ರಿಂದ 10ನೇ ತರಗತಿಯಲ್ಲಿ ಓದುತ್ತಿರುವ ಆರ್.ಎಂ.ಎಸ್.ಎ ಶಾಲೆಗಳಿಗೆ ಒಂದೇ ಡೈಸ್ ಕೋಡ್ ಹೊಂದಿರುವುದರಿಂದ ಮಕ್ಕಳ ಸಂಖ್ಯೆಗನುಗುಣವಾಗಿ ಶಾಲಾನುದಾನ ಬಿಡುಗಡೆ ಮಾಡಲಾಗಿದೆ.
- ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರೌಢಶಾಲಾ ವಿಭಾಗ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಒಂದೇ ಡೈಸ್ ಕೋಡ್ ಹೊಂದಿರುವುದರಿಂದ ಮಕ್ಕಳ ಸಂಖ್ಯೆಗನುಗುಣವಾಗಿ ಶಾಲಾನುದಾನ ಬಿಡುಗಡೆ ಮಾಡಲಾಗಿದೆ.
- ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ ಪ್ರೌಢಶಿಕ್ಷಣ (8 ರಿಂದ 10ನೇ ತರಗತಿ) ಇರುವ ಶಾಲೆಗಳು ಬೇರೆ ಬೇರೆ ಡೈಸ್ ಕೋಡ್ ಅನ್ನು ಹೊಂದಿರುವುದರಿಂದ ಮಕ್ಕಳ ಸಂಖ್ಯೆಗನುಗುಣವಾಗಿ ಶಾಲಾನುದಾನ ಬಿಡುಗಡೆ ಮಾಡಲಾಗಿದೆ.

**ಈ ಕೆಳಕಂಡ ಕೋಷ್ಟಕದಂತೆ ಶಾಲಾನುದಾನವನ್ನು ಬಿಡುಗಡೆ ಮಾಡಲಾಗಿದೆ.**

| ವಿದ್ಯಾರ್ಥಿಗಳ ಸಂಖ್ಯೆ | ಘಟಕ ವೆಚ್ಚ (ರೂ. ಗಳಲ್ಲಿ) | 2024-25ನೇ ಸಾಲಿಗೆ ಬಿಡುಗಡೆ ಮಾಡಲಾದ ಶಾಲಾನುದಾನ (ರೂ. ಲಕ್ಷಗಳಲ್ಲಿ) | | 2025-26ನೇ ಸಾಲಿಗೆ ಅನುಮೋದನೆಯಾದ ಶಾಲಾನುದಾನ (ರೂ. ಲಕ್ಷಗಳಲ್ಲಿ)* | |
|---|---|---|---|---|---|
| | | ಶಾಲೆಗಳ ಸಂಖ್ಯೆ | ಅನುದಾನ | ಶಾಲೆಗಳ ಸಂಖ್ಯೆ | ಅನುದಾನ |
| 1 ರಿಂದ 30 ವಿದ್ಯಾರ್ಥಿಗಳಿರುವ ಶಾಲೆಗಳು | 10,000/- | 16,589 | 1622.86 | 15329.00 | 3831.65 |
| 31 ರಿಂದ 100 ವಿದ್ಯಾರ್ಥಿಗಳಿರುವ ಶಾಲೆಗಳು | 25,000/- | 15,880 | 3969.20 | 9687.00 | 4843.50 |
| 101 ರಿಂದ 250 ವಿದ್ಯಾರ್ಥಿಗಳಿರುವ ಶಾಲೆಗಳು | 50,000/- | 10,229 | 5099.70 | 3983.00 | 2987.25 |
| 251 ರಿಂದ 1000 ವಿದ್ಯಾರ್ಥಿಗಳಿರುವ ಶಾಲೆಗಳು | 75,000/- | 4,478 | 3317.70 | 108.00 | 108.00 |
| 1000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳು | 1,00,000/- | 135 | 134.20 | 17759.00 | 1850.60 |
| **ಒಟ್ಟು** | | **47,311** | **14143.66** | **46866.00** | **13621.00** |

*2025-26ನೇ ಸಾಲಿಗೆ ಶಾಲಾನುದಾನ ಅನುಮೋದನೆಯಾಗಿದ್ದು, ಮೊದಲನೇ ತ್ರೈಮಾಸಿಕ ಅನುದಾನ ಕೇಂದ್ರ ಶಿಕ್ಷಣ ಮಂತ್ರಾಲಯದಿಂದ ಬಿಡುಗಡೆಯಾದ ನಂತರ ಶಾಲೆಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

**ಕ್ರೀಡಾ ಅನುದಾನ :**

2025-26 ನೇ ಸಾಲಿನ ಕ್ರೀಡಾ ಮತ್ತು ದೈಹಿಕ ಶಿಕ್ಷಣ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವ ಶಾಲಾ ಸಂಖ್ಯೆಗನುಗುಣವಾಗಿ ಒಟ್ಟು ರೂ.3011.50 ಲಕ್ಷಗಳನ್ನು ಶಾಲೆಗಳಿಗೆ ಬಿಡುಗಡೆ ಮಾಡಲಾಗಿದೆ.

| ಕ್ರ. ಸಂ. | ಶಾಲೆ ವಿಧ | ಶಾಲೆಗಳ ಸಂಖ್ಯೆ | ಘಟಕ ವೆಚ್ಚ | ಒಟ್ಟು ಅನುದಾನ ರೂ. ಲಕ್ಷಗಳಲ್ಲಿ |
|---|---|---|---|---|
| 1 | ಕಿರಿಯ ಪ್ರಾಥಮಿಕ ಶಾಲೆಗಳು | 2,305 | 0.05 | 115.25 |
| 2 | ಹಿರಿಯ ಪ್ರಾಥಮಿಕ ಶಾಲೆಗಳು | 20,919 | 0.10 | 2091.9 |
| 3 | ಪ್ರೌಢಶಾಲೆಗಳು | 4,074 | 0.15 | 611.1 |
| 4 | ಪದವಿ ಪೂರ್ವ ಕಾಲೇಜುಗಳು | 1,286 | 0.15 | 192.9 |
| | ಒಟ್ಟು | **28,589** | | **3011.15** |

**ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ನಿರ್ವಹಣೆಗೆ ರಾಜ್ಯ ಸರ್ಕಾರದ ಅನುದಾನ:**

2023-24 ಮತ್ತು 2024-25ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ನಿರ್ವಹಣೆಗಾಗಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ರೂ.20,000/- ರಿಂದ ರೂ.50,000/- ರವರೆಗೆ ಕಾಲೇಜು ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡಲಾಗಿದೆ. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಉತ್ತಮ ಶೈಕ್ಷಣಿಕ ಪರಿಸರವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಡುವ ಹಿತದೃಷ್ಟಿಯಿಂದ ಸದರಿ ಕಾಲೇಜುಗಳಿಗೆ ನಿರ್ವಹಣಾ ಅನುದಾನವನ್ನು ಕಾಲೇಜಿನ ಪ್ರಾಂಶುಪಾಲರಿಗೆ ಬಿಡುಗಡೆ ಮಾಡಲಾಗಿದೆ, ಸದರಿ ಅನುದಾನವನ್ನು ವೆಚ್ಚ ಮಾಡಬೇಕಾದ ಕಾರ್ಯಚಟುವಟಿಕೆಯ ವಿವರ ಈ ಕೆಳಗಿನಂತಿದೆ:

1. ಕಛೇರಿಯ ದಾಖಲೆ ಪುಸ್ತಕಗಳು (ದಾಖಲಾತಿ ಪುಸ್ತಕ, ವರ್ಗಾವಣೆ ಪತ್ರ, ಅಂಕಪಟ್ಟಿ ಇತರೆ)
2. ತರಗತಿ ಕೊಠಡಿಗೆ ಸಂಬಂಧಿಸಿದಂತೆ ಅಗತ್ಯವಿರುವ ಸಾಮಗ್ರಿಗಳ ಖರೀದಿಗಾಗಿ (ಸೀಮೆಸುಣ್ಣ, ಡಸ್ಟರ್, ಡಸ್ಟಬಿನ್, Painting of black board ಇತರೆ)
3. ಕಟ್ಟಡದ ಸಣ್ಣಪುಟ್ಟ ದುರಸ್ತಿ (ಬಾಗಿಲು, ಕಿಟಕಿ, ಗಾಜು ಒಡೆದಿರುವಿಕೆ,ಶೌಚಾಲಯ)
4. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ /RO PLANT ಗಳ candle replacement and drinking water related maintenance.
5. ಪೀಠೋಪಕರಣಗಳ ದುರಸ್ತಿ.
6. ವಿದ್ಯುತ್/ ನೀರಿನ ಬಿಲ್ ಪಾವತಿ.
7. ಕಾಲೇಜು ಶೌಚಾಲಯ ಸ್ವಚ್ಛತೆ (ಶೌಚಾಲಯ ನಿರ್ವಹಣೆ, phenoil, toilet cleaning liquid, brush, jug, bleaching powder etc)
8. ಬೋಧನಾ ಉಪಕರಣಗಳ ಖರೀದಿ.
9. ಕಾಲೇಜು ಆವರಣದ ಸ್ವಚ್ಛತೆ (ಸ್ವಚ್ಛತೆಗೆ ಅಗತ್ಯತೆ ಇರುವ ಪರಿಕರಗಳ ಖರೀದಿಗಾಗಿ)

10. ಶೌಚಾಲಯ ನೀರಿನ ವ್ಯವಸ್ಥೆ (ನಲ್ಲಿ ರಿಪೇರಿ, ನಲ್ಲಿ, ಸೋರುವಿಕೆಯ ರಿಪೇರಿ, ನೀರಿನ ಪೈಪುಗಳ ಅಳವಡಿಕೆ and other plumbing items)
11. ವಿದ್ಯುತ್ ಪರಿಕರಗಳಾದ switches, fan, tube lights, wires, Electrical fittings etc ದುರಸ್ತಿ ಹಾಗೂ ಸದರಿ ಉಪಕರಣಗಳ ಖರೀದಿ ವೆಚ್ಚ, ಹಾಗೂ ಪ್ರಯೋಗಾಲಯ ಕೊಠಡಿಗಳಿಗೆ ಗ್ಯಾಸ್ ಅಳವಡಿಕೆ ವೆಚ್ಚ, ನೀರಿನ ಸಂಪರ್ಕ, hand wash ಇತ್ಯಾದಿ.

**ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.**

| ಕ್ರ ಸಂ | ಕಾಲೇಜುಗಳ ವಿಧ | ಘಟಕ ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|
| 1 | 1 ರಿಂದ 50 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಪದವಿ ಪೂರ್ವ ಕಾಲೇಜುಗಳ ನಿರ್ವಹಣಾ ವೆಚ್ಚ | 0.20 |
| 2 | 51 ರಿಂದ 100 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಪದವಿ ಪೂರ್ವ ಕಾಲೇಜುಗಳ ನಿರ್ವಹಣಾ ವೆಚ್ಚ | 0.30 |
| 3 | 101 ರಿಂದ 500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಪದವಿ ಪೂರ್ವ ಕಾಲೇಜುಗಳ ನಿರ್ವಹಣಾ ವೆಚ್ಚ | 0.40 |
| 4 | 500 ಕ್ಕಿಂತ ಹೆಚ್ಚಿರುವ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಪದವಿ ಪೂರ್ವ ಕಾಲೇಜುಗಳ ನಿರ್ವಹಣಾ ವೆಚ್ಚ | 0.50 |

ಮೇಲ್ಕಂಡಂತೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ (ಸಂಯುಕ್ತ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನೂ ಒಳಗೊಂಡಂತೆ) ಕಾಲೇಜು ನಿರ್ವಹಣಾ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಆಯೋಜಿಸುವ 31 ವಿಭಿನ್ನ ಕ್ರೀಡಾ ಚಟುವಟಿಕೆಗಳಿಗೆ ಕ್ರೀಡಾನುದಾನದ ರೂಪದಲ್ಲಿ ರೂ. 2,83,02,000/- (ಎರಡು ಕೋಟಿ ಎಂಭತ್ತೂರು ಲಕ್ಷದ ಎರಡು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಪ್ರತ್ಯೇಕವಾಗಿ ನೀಡಲಾಗುತ್ತಿದೆ. ಶಾಲಾ ಶಿಕ್ಷಣ ಇಲಾಖೆಯ(ಪದವಿ ಪೂರ್ವ) ಕ್ರೀಡಾ ಚಟುವಟಿಕೆಗಳಿಗೆ ವಿದ್ಯಾರ್ಥಿಗಳ ವಿಶೇಷ ಕ್ರೀಡಾ ನಿಧಿಯಿಂದ ನೀಡಲಾಗುತ್ತಿದೆ.

**ಅಂ) ವಿಷಯ ಬಾಲ್ಯ ವಿವಾಹದ ಪಿಡುಗನ್ನು ತಡೆಗಟ್ಟುವಲ್ಲಿ ವಿಫಲವಾಗಿರುವ ಕುರಿತು.**

\- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜು ರವರು ದಿನಾಂಕ 18.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಬಾಲ್ಯವಿವಾಹ ಪ್ರಕರಣಗಳನ್ನು ತಡೆಯಲು ಕೈಗೊಂಡಿರುವ ಕ್ರಮಗಳು.**

- ರಾಜ್ಯದಲ್ಲಿ 2022ನೇ ಸಾಲಿನಿಂದ ಜುಲೈ 2025ರ ತನಕ ಒಟ್ಟು 10,290 ಬಾಲ್ಯವಿವಾಹ ಪ್ರಕರಣಗಳು ಬೆಳಕಿಗೆ ಬಂದಿದ್ದು, ಇದರಲ್ಲಿ ಒಟ್ಟು 7687 (75%) ಬಾಲ್ಯವಿವಾಹಗಳನ್ನು ತಡೆಗಟ್ಟಲು ಇಲಾಖೆ ಯಶಸ್ವಿಯಾಗಿದೆ.
- **ವರ್ಷದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು** ಅನುಷ್ಠಾನಗೊಳಿಸಲು ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು-2014ನ್ನು ರಚಿಸಲಾಗಿದೆ.
- ಬಾಲ್ಯವಿವಾಹದ ಪ್ರಯತ್ನ, ಸಿದ್ಧತೆ, ನಿಶ್ಚಿತಾರ್ಥದ ಬಗ್ಗೆ ಕ್ರಮ ಕೈಗೊಳ್ಳಲು ಬಾಲ್ಯವಿವಾಹ ನಿಷೇಧ ಕಾಯ್ದೆ, 2006ರಲ್ಲಿ ಯಾವುದೇ ಕಲಂಗಳಲ್ಲಿ ಅವಕಾಶ ಇಲ್ಲದೇ ದೂರನ್ನು ದಾಖಲಿಸಲು ಪೊಲೀಸರಿಂದ ಸಾಧ್ಯವಾಗುತ್ತಿಲ್ಲ, ಹೀಗಾಗಿ ಅಪರಾಧವನ್ನಾಗಿಸಲು **ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) 2025ರ** ಮಸೂದೆಯನ್ನು ಜಾರಿಗೆ ತರುವ ಅವಶ್ಯಕತೆಯಿರುತ್ತದೆ. ಈ ಹಿನ್ನೆಲೆಯಲ್ಲಿ ಕರಡು ತಿದ್ದುಪಡಿ ಮಸೂದೆಯನ್ನು ರೂಪಿಸಲಾಗಿದ್ದು, ಇದಕ್ಕೆ ಸಚಿವ ಸಂಪುಟದ ಅನುಮೋದನೆಗೊಂಡು ರಾಜ್ಯ ವಿಧಾನ ಸಭಾ ಅಧಿವೇಶನದಲ್ಲಿ ಅಂಗೀಕಾರವಾಗಿರುತ್ತದೆ.
- ಬಾಲ್ಯವಿವಾಹಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ತಡೆಗಟ್ಟಲು ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016ನ್ನು ಜಾರಿಗೆ ತರಲಾಗಿದೆ.
- ಸರ್ವೋಚ್ಚ ನ್ಯಾಯಾಲಯಾದ ನಿವೃತ್ತ ನ್ಯಾಯ ಮೂರ್ತಿಗಳಾದ ಜಸ್ಟಿಸ್ ಶಿವರಾಜ್‌ವಿ. ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಿ ಸದರಿ ಕಮಿಟಿಯ ವರದಿಯಲ್ಲಿ ಮಾಡಲಾಗಿರುವ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ ಬಾಲ್ಯವಿವಾಹ ನಿಷೇಧ ಉಸ್ತುವಾರಿ ಕೋಶವನ್ನು ಸ್ಥಾಪಿಸಲಾಗಿದೆ. ಮುಂದುವರೆದು ಉಳಿದ ಶಿಫಾರಸ್ಸುಗಳನ್ನು ಸಹ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.
- ಬಾಲ್ಯವಿವಾಹ ನಿಷೇಧ ನಿಯಮಗಳ ಅಡಿ ವಿವಿಧ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳನ್ನು ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮಮಟ್ಟದ ವರೆಗೆ ಒಟ್ಟು 58,200ಕ್ಕೂ ಹೆಚ್ಚು ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.
- **ಮಕ್ಕಳ ಸಹಾಯವಾಣಿ-1098 (24*7)** ಕಾರ್ಯನಿರ್ವಹಿಸುತ್ತಿದೆ. ಬಾಲ್ಯ ವಿವಾಹ ಸೇರಿದಂತೆ ಸಂಕಷ್ಟದಲ್ಲಿರುವ ಮಗುವಿನ ಬಗ್ಗೆ ಯಾವುದೇ ಸಮಯದಲ್ಲಿ ಕರೆ ಸ್ವೀಕೃತವಾದರೂ ತಕ್ಷಣ ಮಗುವನ್ನು ರಕ್ಷಿಸಲು ಸಂಬಂಧಿಸಿದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿರುತ್ತಾರೆ.
- ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಕ್ರಿಯಾ ಯೋಜನೆಯನ್ನು ರೂಪಿಸಿ, ಜಿಲ್ಲಾಧಿಕಾರಿಗಳ ಮೂಲಕ ಜಿಲ್ಲಾಮಟ್ಟದಲ್ಲಿ ಎಲ್ಲಾ ಸಂಬಂಧಪಟ್ಟ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಮತ್ತು ಇತರೆ ಭಾಗೀದಾರ ಇಲಾಖಾ ಅಧಿಕಾರಿ/ ಸಿಬ್ಬಂದಿಗಳಿಗೆ **ಸಾಮರ್ಥ್ಯಾಭಿವೃದ್ಧಿ ತರಬೇತಿ** ಆಯೋಜಿಸಲು ಕ್ರಮವಹಿಸಲಾಗಿದೆ.

2020ರಿಂದ 2024ರವರೆಗೆ (ಕ್ಯಾಲೆಂಡರ್) 5 ವರ್ಷಗಳಲ್ಲಿ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಮಾಹಿತಿ

| ಕ್ರ. ಸಂ. | ವರ್ಷ (ಕ್ಯಾಲೆಂಡ್) | ಸ್ವೀಕರಿಸಿದ ದೂರುಗಳ ಸಂಖ್ಯೆ | ಬಾಲ್ಯವಿವಾಹ ತಡೆದ ಸಂಖ್ಯೆ | ಬಾಲ್ಯವಿವಾಹ ನಡೆದ ಸಂಖ್ಯೆ | ಎಫ್. ಐ. ಆರ್ ದಾಖಲಿಸಿದ ಸಂಖ್ಯೆ |
|---|---|---|---|---|---|
| 1 | 2020 | 2290 | 1911 | 379 | 379 |
| 2 | 2021 | 2716 | 2078 | 638 | 638 |
| 3 | 2022 | 2730 | 2085 | 645 | 645 |
| 4 | 2023 | 2605 | 1775 | 830 | 830 |
| 5 | 2024 | 3127 | 2323 | 804 | 804 |
| ಒಟ್ಟು | | **13468** | **10172** | **3296** | **3296** |

ರಾಜ್ಯದಲ್ಲಿ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ರಾಜ್ಯ, ಜಿಲ್ಲಾ, ತಾಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ ವಿವಿಧ ಭಾಗಿಧಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೆಚ್ಚಿನ ಅರಿವು ಮೂಡಿಸುವ ಮೂಲಕ ಹೆಚ್ಚಿನ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಸರ್ಕಾರವು ಕಾರ್ಯಪ್ರವೃತ್ತವಾಗಿರುತ್ತದೆ.

ಬಾಲ್ಯವಿವಾಹ ಪ್ರಕರಣಗಳ ಮಾಹಿತಿ

| ಕ್ರ. ಸಂ. | ಜಿಲ್ಲೆಯ ಹೆಸರು | 2022 | | | | 2023 | | | | 2024 | | | | 2025ರ ಜೂನ್ ವರೆಗೆ | | | |
|---|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್.ಐ.ಆರ್. ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್.ಐ.ಆರ್. ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್.ಐ.ಆರ್. ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್.ಐ.ಆರ್. ಸಂಖ್ಯೆ |
| 1 | ಬಾಗಲಕೋಟೆ | 143 | 103 | 40 | 40 | 98 | 68 | 30 | 30 | 120 | 100 | 20 | 20 | 71 | 61 | 10 | 2 |
| 2 | ಬೆಂಗಳೂರು (ಗ್ರಾಮಾಂತರ) | 63 | 43 | 20 | 20 | 47 | 29 | 18 | 18 | 53 | 36 | 17 | 17 | 15 | 12 | 3 | 1 |
| 3 | ಬೆಂಗಳೂರು (ನಗರ) | 84 | 0 | 84 | 84 | 8 | 0 | 8 | 8 | 6 | 0 | 6 | 6 | 3 | 2 | 1 | 1 |
| 4 | ಬೆಂಗಳೂರು ಪೂರ್ವ | 3 | 0 | 3 | 3 | 9 | 0 | 9 | 9 | 26 | 8 | 18 | 18 | 11 | 4 | 7 | 7 |
| 5 | ಬೆಂಗಳೂರು ಪಶ್ಚಿಮ | 0 | 0 | 0 | 0 | 18 | 18 | 0 | 0 | 17 | 17 | 0 | 0 | 15 | 14 | 1 | 0 |
| 6 | ಬೆಂಗಳೂರು ಉತ್ತರ | 33 | 16 | 17 | 17 | 36 | 15 | 21 | 21 | 38 | 17 | 21 | 21 | 11 | 9 | 2 | 0 |
| 7 | ಬೆಂಗಳೂರು ದಕ್ಷಿಣ | 0 | 0 | 0 | 0 | 41 | 0 | 41 | 41 | 49 | 18 | 31 | 31 | 11 | 9 | 2 | 2 |
| 8 | ಬೆಳಗಾವಿ | 156 | 120 | 36 | 36 | 124 | 83 | 41 | 41 | 168 | 128 | 40 | 40 | 138 | 105 | 33 | 32 |
| 9 | ಬಳ್ಳಾರಿ | 116 | 116 | 0 | 0 | 111 | 111 | 0 | 0 | 166 | 166 | 0 | 0 | 113 | 97 | 16 | 12 |
| 10 | ಬೀದರ್ | 54 | 54 | 0 | 0 | 25 | 21 | 4 | 4 | 58 | 55 | 3 | 3 | 52 | 52 | 0 | 0 |
| 11 | ವಿಜಯಪುರ | 132 | 118 | 14 | 14 | 135 | 128 | 7 | 7 | 145 | 136 | 9 | 9 | 107 | 103 | 4 | 0 |
| 12 | ಚಾಮರಾಜನಗರ | 51 | 51 | 0 | 0 | 129 | 125 | 4 | 4 | 107 | 105 | 2 | 2 | 28 | 27 | 1 | 1 |
| 13 | ಚಿಕ್ಕಬಳ್ಳಾಪುರ | 123 | 115 | 8 | 8 | 101 | 96 | 5 | 5 | 110 | 105 | 5 | 5 | 49 | 39 | 10 | 8 |
| 14 | ಚಿಕ್ಕಮಗಳೂರು | 103 | 72 | 31 | 31 | 48 | 15 | 33 | 33 | 110 | 80 | 30 | 30 | 59 | 48 | 11 | 11 |
| 15 | ಚಿತ್ರದುರ್ಗ | 131 | 113 | 18 | 18 | 154 | 93 | 61 | 61 | 166 | 91 | 75 | 75 | 86 | 50 | 36 | 36 |
| 16 | ದಕ್ಷಿಣ ಕನ್ನಡ | 11 | 11 | 0 | 0 | 5 | 5 | 0 | 0 | 11 | 3 | 8 | 8 | 3 | 1 | 2 | 2 |
| 17 | ದಾವಣಗೆರೆ | 52 | 25 | 27 | 27 | 54 | 24 | 30 | 30 | 92 | 43 | 49 | 49 | 48 | 44 | 4 | 6 |
| 18 | ಧಾರವಾಡ | 32 | 16 | 16 | 16 | 59 | 28 | 31 | 31 | 59 | 34 | 25 | 25 | 26 | 21 | 5 | 5 |
| 19 | ಗದಗ | 42 | 40 | 2 | 2 | 59 | 55 | 4 | 4 | 57 | 55 | 2 | 2 | 16 | 14 | 2 | 0 |
| 20 | ಕಲಬುರಗಿ | 166 | 156 | 10 | 10 | 98 | 94 | 4 | 4 | 141 | 127 | 14 | 14 | 105 | 92 | 13 | 0 |
| 21 | ಹಾಸನ | 56 | 43 | 13 | 13 | 108 | 104 | 4 | 4 | 127 | 117 | 10 | 10 | 58 | 43 | 15 | 11 |
| 22 | ಹಾವೇರಿ | 61 | 52 | 9 | 9 | 60 | 40 | 20 | 20 | 75 | 40 | 35 | 35 | 46 | 24 | 22 | 22 |
| 23 | ಕೊಡಗು | 11 | 8 | 3 | 3 | 7 | 2 | 5 | 5 | 7 | 1 | 6 | 6 | 10 | 4 | 6 | 6 |
| 24 | ಕೋಲಾರ | 47 | 40 | 7 | 7 | 66 | 5 | 61 | 61 | 56 | 39 | 17 | 17 | 71 | 38 | 33 | 33 |
| 25 | ಕೊಪ್ಪಳ | 73 | 69 | 4 | 4 | 106 | 102 | 4 | 4 | 166 | 161 | 5 | 5 | 73 | 65 | 8 | 8 |
| 26 | ಮಂಡ್ಯ | 167 | 91 | 76 | 76 | 180 | 95 | 85 | 85 | 211 | 120 | 91 | 91 | 89 | 66 | 23 | 23 |
| 27 | ಮೈಸೂರು | 319 | 270 | 49 | 49 | 226 | 130 | 96 | 96 | 275 | 219 | 56 | 56 | 142 | 124 | 18 | 18 |
| 8 | ರಾಯಚೂರು | 124 | 121 | 3 | 3 | 65 | 56 | 9 | 9 | 90 | 88 | 2 | 2 | 89 | 84 | 5 | 3 |
| 9 | ರಾಮನಗರ | 81 | 36 | 45 | 45 | 55 | 4 | 51 | 51 | 60 | 5 | 55 | 55 | 18 | 8 | 10 | 9 |
| 1 | ಶಿವಮೊಗ್ಗ | 133 | 74 | 59 | 59 | 130 | 62 | 68 | 68 | 127 | 40 | 87 | 87 | 68 | 33 | 35 | 35 |
| | ತುಮಕೂರು | 35 | 0 | 35 | 35 | 64 | 0 | 64 | 64 | 44 | 0 | 44 | 44 | 21 | 0 | 21 | 20 |
| | ಉಡುಪಿ | 0 | 0 | 0 | 0 | 1 | 0 | 1 | 1 | 0 | 0 | 0 | 0 | 0 | 0 | 0 | 0 |
| | ಉತ್ತರ ಕನ್ನಡ | 33 | 26 | 7 | 7 | 19 | 17 | 2 | 2 | 24 | 16 | 8 | 8 | 6 | 3 | 3 | 3 |
| | ಯಾದಗಿರಿ | 90 | 86 | 4 | 4 | 91 | 86 | 5 | 5 | 90 | 77 | 13 | 13 | 128 | 122 | 6 | 6 |
| | ವಿಜಯನಗರ | 5 | 0 | 5 | 5 | 68 | 64 | 4 | 4 | 76 | 76 | 0 | 0 | 42 | 41 | 1 | 0 |
| | ಒಟ್ಟು | **2730** | **2085** | **645** | **645** | **2605** | **1775** | **830** | **830** | **3127** | **2323** | **804** | **804** | **1828** | **1459** | **369** | **323** |

**ಅಃ) ವಿಷಯ:- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗಳ ಅಂತಿಮ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ.**

- -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ತಳವಾರ್ ಸಾಬಣ್ಣ ರವರು ದಿನಾಂಕ 18.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

- ಇಲಾಖೆಯಲ್ಲಿ ಖಾಲಿ ಇರುವ 310 ಪ್ರಾಂಶುಪಾಲರ (ಯು.ಜಿ) ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/121/ಡಿಸಿಇ/2018, ದಿನಾಂಕ:09.09.2020 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ:21.03.2022ರಲ್ಲಿ ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರ ಹುದ್ದೆಗಳ ನೇಮಕಾತಿ) (ಸ್ನಾತಕ ಶಿಕ್ಷಣ) (ವಿಶೇಷ) ನಿಯಮಗಳು 2020 ಮತ್ತು ತಿದ್ದುಪಡಿ ನಿಯಮಗಳು 2022ನ್ನು ಜಾರಿಗೊಳಿಸಲಾಗಿದೆ.

- ಸದರಿ ವಿಶೇಷ ನಿಯಮಗಳನ್ವಯ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, 310 ಪ್ರಾಂಶುಪಾಲರ ಹುದ್ದೆಗಳಿಗೆ ನಿಯಮಾನುಸಾರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಸಲ್ಲಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/121/ಡಿಸಿಇ/2018, ದಿನಾಂಕ:21.03.2022ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿದೆ.

- ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆ.ಇ.ಎ) ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಸ್ಥಳೀಯ ವೃಂದದ (ಹೆಚ್.ಕೆ) 141 ಹಾಗೂ ಉಳಿಕೆ ಮೂಲ ವೃಂದದ (ನಾನ್ ಹೆಚ್.ಕೆ) 813 ಅಭ್ಯರ್ಥಿಗಳ ಅಂತಿಮ ಮೆರಿಟ್ ಪಟ್ಟಿಯನ್ನು ಕೆ.ಇ.ಎ. ವೆಬ್‌ಸೈಟ್ ನಲ್ಲಿ ಪ್ರಕಟಿಸಿ, ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಅಂತಿಮ ಮೆರಿಟ್ ಪಟ್ಟಿಯನ್ನು ಕಾಲೇಜು ಶಿಕ್ಷಣ ಆಯುಕ್ತರ ಅಧ್ಯಕ್ಷತೆಯಲ್ಲಿನ ಆಯ್ಕೆ ಪ್ರಾಧಿಕಾರವು ಶೈಕ್ಷಣಿಕ ಹಾಗೂ ಮೀಸಲಾತಿ ದಾಖಲಾತಿಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ:ಇಡಿ 93 ಡಿಸಿಇ 2024(ಇ) ದಿನಾಂಕ:13-03-2024ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ಸೂಚಿಸಲಾಗಿತ್ತು.

- ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪ್ರಕಟಿಸಲ್ಪಟ್ಟ ಮೆರಿಟ್ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ, ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಜಿಯಲ್ಲಿ ದಾಖಲಿಸಿದ್ದ ಮಾಹಿತಿಗಳಿಗನುಗುಣವಾಗಿ ವಿದ್ಯಾರ್ಹತೆ, ಮೀಸಲಾತಿ ಮತ್ತಿತರೆ ಅಗತ್ಯ ದೃಢೀಕೃತ ಪ್ರತಿಗಳನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ ಅವಕಾಶವನ್ನು ನೀಡಲಾಗಿತ್ತು. ಅದರನ್ವಯ ಮೆರಿಟ್ ಪಟ್ಟಿಯಲ್ಲಿನ ಒಟ್ಟು 954 ಅಭ್ಯರ್ಥಿಗಳಲ್ಲಿ 779 ಅಭ್ಯರ್ಥಿಗಳಿಂದ ದಾಖಲೆಗಳು ಸ್ವೀಕೃತವಾಗಿದ್ದು, ಉಳಿದಂತೆ 175 ಅಭ್ಯರ್ಥಿಗಳಿಂದ ದಾಖಲೆಗಳು ಸ್ವೀಕೃತವಾಗಿರುವುದಿಲ್ಲ.

- ಒಟ್ಟು 779 ಅಭ್ಯರ್ಥಿಗಳಿಂದ ಸ್ವೀಕೃತಗೊಂಡ ದಾಖಲೆಗಳಲ್ಲಿ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದಂತೆ ಸಲ್ಲಿಸಿರುವ ದಾಖಲೆಗಳ ಪರಿಶೀಲನೆಯನ್ನು ಉನ್ನತ ಮಟ್ಟದ ಇಲಾಖಾ ಪರಿಶೀಲನಾ ಸಮಿತಿಯು ಪರಿಶೀಲಿಸಿದ್ದು, ಅದರಂತೆ ಶೈಕ್ಷಣಿಕವಾಗಿ ಅರ್ಹರಾಗಿರುವ ಹಾಗೂ ಅನರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಗಳನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಅಧಿಕೃತ ಜ್ಞಾಪನ ಸಂ:ಕಾಶಿಇ/ನೇವಿ-1/ಪ್ರಾಹುಭ-2021/61/2025-26, ದಿನಾಂಕ:18.06.2025ರಲ್ಲಿ ಪ್ರಕಟಿಸಿ, ಸಂಬಂಧಪಟ್ಟ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

- ಅದರಂತೆ, ಒಟ್ಟು 279 ಅಭ್ಯರ್ಥಿಗಳಿಂದ ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಸ್ವೀಕೃತವಾದ ಪ್ರತಿಯೊಂದು ಆಕ್ಷೇಪಣೆಗಳ ಪರಿಶೀಲನೆಯನ್ನು ಉನ್ನತಮಟ್ಟದ ಇಲಾಖಾ ಪರಿಶೀಲನಾ ಸಮಿತಿಯು ಕೈಗೊಳ್ಳಲಿದೆ. ಆಕ್ಷೇಪಣೆಗಳ ಪರಿಶೀಲನಾ ಸಂದರ್ಭದಲ್ಲಿ ಸಮಿತಿಯ ಮುಂದೆ ಅಭ್ಯರ್ಥಿಗಳಿಗೆ ಖುದ್ದಾಗಿ ಹಾಜರಾಗಿ (personal hearing) ಅಹವಾಲುಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅವರ ಅಹವಾಲುಗಳೊಂದಿಗೆ ಸಲ್ಲಿಸುವ ಪೂರಕ ದಾಖಲೆಗಳನ್ನು ಪರಿಶೀಲಿಸಿ, ಶೈಕ್ಷಣಿಕ ಅರ್ಹತೆಯ ಕುರಿತು ಅಂತಿಮ ತೀರ್ಮಾನವನ್ನು ಕೈಗೊಂಡು, ಪ್ರಕ್ರಿಯೆ ಪೂರ್ಣಗೊಳಿಸಿ, ಶೀಘ್ರವಾಗಿ ಪ್ರಾಂಶುಪಾಲರ ಅಂತಿಮ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಕ) ವಿಷಯ:- ಧರ್ಮಸ್ಥಳದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅನಾಮಿಕ ದೂರುದಾರನಿಗೆ ಮಂಪರು ಪರೀಕ್ಷೆ ಮಾಡುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ ರವರು ದಿನಾಂಕ 19.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತರುವ ಪ್ರಕರಣ ತನಿಖೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 142 ಸಿಓಡಿ 2025, ದಿನಾಂಕ: 19.07.2025ರನ್ವಯ ವಿಶೇಷ ತನಿಖಾ ತಂಡವನ್ನು ರಚಿಸಿರುತ್ತದೆ. ಈ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡ ನಡೆಸುತ್ತಿದ್ದು, ತನಿಖೆ ಪ್ರಗತಿಯಲ್ಲಿದೆ. ಈವರೆಗೆ ನಡೆದ ತನಿಖೆಯಲ್ಲಿ ದೂರದಾರ "ವಿ" ರವರನ್ನು ಮಂಪರು ಪರೀಕ್ಷೆಗೆ ಒಳಪಡಿಸಿರುವುದಿಲ್ಲ. ತನಿಖಾ ಹಂತದಲ್ಲಿ ದೂರದಾರರನ್ನು ಮಂಪರು ಪರೀಕ್ಷೆಗೆ ಒಳಪಡಿಸುವ ಅವಶ್ಯಕತೆ ಕಂಡುಬಂದಲ್ಲಿ ಮಂಪರು ಪರೀಕ್ಷೆಗೆ ಒಳಪಡಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.

**ಖ) ವಿಷಯ:- ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್. ರವರು ದಿನಾಂಕ 19.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ 2024 ರಲ್ಲಿ ಒಟ್ಟು 13,235 ಹಾವು ಕಡಿತದ ಪ್ರಕರಣಗಳು ಹಾಗೂ 100 ಮರಣಗಳು IHIP (Integrated Health Information Platform) ನಲ್ಲಿ ವರದಿಯಾಗಿರುತ್ತವೆ.

2022 ರಲ್ಲಿ ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮವು ಕರ್ನಾಟಕದಲ್ಲಿ ಅನುಷ್ಠಾನಗೊಂಡಿದ್ದು, 2024 ಫೆಬ್ರವರಿಯ ಮೊದಲು ಹಾವು ಕಡಿತ ಹಾಗೂ ಮರಣದ ನೈಜ ಪ್ರಕರಣಗಳು ವರದಿಯಾಗದೇ ಇದರ ಮಾಹಿತಿಯು ಸಮರ್ಪಕವಾಗಿರುವುದಿಲ್ಲ. ದಿನಾಂಕ 12.02.2024 ರಂದು ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯ ಸರ್ಕಾರವು ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ಘೋಷಿತ ಖಾಯಿಲೆಯೆಂದು (Notifiable Disease) ಆದೇಶ ಹೊರಡಿಸಿದೆ. ಹಾಗೂ ಎಲ್ಲಾ ಹಾವು ಕಡಿತ ಹಾಗೂ ಮರಣ ಪ್ರಕರಣಗಳನ್ನು ಖಾಸಗಿ ಆಸ್ಪತ್ರೆಗಳನ್ನೊಳಗೊಂಡಂತೆ ಎಲ್ಲಾ ಆರೋಗ್ಯ ಕೇಂದ್ರಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ IHIP (Integrated Health Information Platform) ಯಲ್ಲಿ ವರದಿ ಮಾಡಲು ಸೂಚಿಸಲಾಗಿರುವುದರಿಂದ 2023 ರ ಪ್ರಕರಣಗಳಿಗೆ ಹೋಲಿಸಿದರೆ 2024 ರಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿರುತ್ತವೆ. ಯಾವುದೇ ಖಾಸಗಿ ಆಸ್ಪತ್ರೆ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಹಾವು ಕಡಿತ ಪ್ರಕರಣ ಹಾಗೂ ಮರಣಗಳನ್ನು ವರದಿ ಮಾಡದೇ ಇರುವುದು ಅಥವಾ ವರದಿ ಮಾಡುವುದು ತಡವಾದರೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಖಾಯಿಲೆ 2020, ಸೆಕ್ಷನ್ 3 ರನ್ವಯ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಉಲ್ಲೇಖಿತ ವಿಷಯವಾದ ಹಾವು ಕಡಿತದ ನಂತರ 45 ರಿಂದ 60 ನಿಮಿಷದೊಳಗೆ ಚಿಕಿತ್ಸೆ ದೊರೆತರೆ ಜೀವ ಉಳಿಸಬಹುದಾಗಿರುತ್ತದೆ.

ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ತಡೆಗಟ್ಟಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ

1. ದೇಶದಲ್ಲೇ ಪ್ರಪ್ರಥಮ ಬಾರಿಗೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಖಾಯಿಲೆ 2020, ಸೆಕ್ಷನ್ 3 ರನ್ವಯ ಹಾವು ಕಡಿತ ಹಾಗೂ ಮರಣಗಳನ್ನು ಘೋಷಿತ ಖಾಯಿಲೆಯೆಂದು ದಿನಾಂಕ 12.02.2024 ರಂದು ಆದೇಶ ಹೊರಡಿಸಲಾಗಿದೆ. ಹಾಗೂ ಎಲ್ಲಾ ಹಾವು ಕಡಿತ ಹಾಗೂ ಮರಣ ಪ್ರಕರಣಗಳನ್ನು ಖಾಸಗಿ ಆಸ್ಪತ್ರೆಗಳನ್ನೊಳಗೊಂಡಂತೆ ಎಲ್ಲಾ ಕೇಂದ್ರಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ IHIP (Integrated Health Information Platform) ಯಲ್ಲಿ ವರದಿ ಮಾಡಲು ಸೂಚಿಸಲಾಗಿದೆ. ಇದರಿಂದ ನೈಜ ಪ್ರಕರಣಗಳಲ್ಲಿ ಏರಿಕೆಯಾಗದಿದ್ದರೂ ಕೂಡ ವರದಿಯಾಗುತ್ತಿರುವ ಸಂಖ್ಯೆ ಹೆಚ್ಚಾಗಿರುತ್ತದೆ.

2. ರಾಜ್ಯದ ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾಸ್ಪತ್ರೆಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಿಲಾಗಿದ್ದು, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಹಾವು ಕಡಿತಕ್ಕೆ ನೀಡಲಾಗುವ Anti Snake Venom (ASV) ಅನ್ನು ಹಾಗೂ ಇತರೆ ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇರಿಸಿಕೊಳ್ಳಲು ಸೂಚಿಸಲಾಗಿದೆ. Anti Snake Venom (ASV) ಅನ್ನು Essential Durg list ಅಡಿಯಲ್ಲಿ ಸೇರಿಸಿ ರಾಜ್ಯದಿಂದ KSMSCL (Karnataka State Medical Supplies Corporation Ltd) ಮುಖಾಂತರ ASV ಯನ್ನು ಸಾಕಷ್ಟು ಪ್ರಮಾಣದಲ್ಲಿ ವಿತರಿಸಲಾಗಿದೆ.
3. ಎಲ್ಲಾ ವೈದ್ಯಾಧಿಕಾರಿಗಳಿಗೆ ಹಾಗೂ ಎಲ್ಲಾ ಆರೋಗ್ಯ ಸಿಬ್ಬಂದಿಗಳಿಗೆ ಹಾವು ಕಡಿತದ ಚಿಕಿತ್ಸೆ ಬಗ್ಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ. ತಾಲ್ಲೂಕು ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಯ ಫಿಜಿಷಿಯನ್‌ಗಳಿಗೆ ಹಾವು ಕಡಿತದಿಂದ ಸಂಭವಿಸುವ ಇತರೆ ತೊಡಕುಗಳಿಗೆ ಚಿಕಿತ್ಸೆ ನೀಡಲು ತರಬೇತಿಯನ್ನು ನೀಡಲಾಗಿದೆ.
4. IEC – ರಾಜ್ಯದಿಂದ ನೀಡಿರುವ IEC Posters ಹಾಗೂ ವಿಡಿಯೋಗಳನ್ನು ಉಪಯೋಗಿಸಿ IEC ಚಟುವಟಿಕೆಗಳನ್ನು ನಡೆಸಿ, ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲು ಜಿಲ್ಲೆಗಳಿಗೆ ಸೂಚಿಸಲಾಗಿದೆ. ಸ್ಥಳೀಯ ಮಟ್ಟದಲ್ಲಿ ಗ್ರಾಮ ಪಂಚಾಯಿತಿ, NGOಗಳು, ಸಾಂಪ್ರದಾಯಕ ನಾಟಿ ಚಿಕಿತ್ಸಕರು ಹಾಗೂ ಇತರೆ ಸ್ಥಳೀಯ ಮುಖಂಡರು ಒಳಗೊಂಡಂತೆ ಇತರೆ ಇಲಾಖೆಗಳ ಸಹಯೋಗದೊಂದಿಗೆ IEC ಚಟುವಟಿಕೆಗಳನ್ನು ನಡೆಸಲು ಹಾಗೂ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರಿಗೆ ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ.
5. ದಿನಾಂಕ 10.07.2024 ರಂದು ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ರಾಜ್ಯ ಕ್ರಿಯಾತಂತ್ರ ರಚಿಸಲು ಅಂತರ್ ಇಲಾಖಾ ಕಾರ್ಯಾಗಾರವನ್ನು ನಡೆಸಿ, ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣದಲ್ಲಿ ತಮ್ಮ ತಮ್ಮ ಇಲಾಖೆಗಳ ಜವಾಬ್ದಾರಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ (ಅರಣ್ಯ ಇಲಾಖೆ, ಕೃಷಿ ಇಲಾಖೆ, ಪಶುಸಂಗೋಪನಾ ಹಾಗೂ ಮೀನುಗಾರಿಕೆ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಇತರೆ) ವಿವರಿಸಲಾಯಿತು. ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮದ ರಾಜ್ಯ ಕ್ರಿಯಾತಂತ್ರ ತಯಾರಿಕೆ ಪ್ರಗತಿಯಲ್ಲಿರುತ್ತದೆ.
6. ಹಾವು ಕಡಿತದ ಎಲ್ಲಾ ಮರಣಗಳನ್ನು ಕಡ್ಡಾಯವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Death Audit ಮಾಡಿ ವರದಿ ನೀಡಲು ಸೂಚಿಸಲಾಗಿದೆ. ಮರಣಗಳನ್ನು ತಡೆಗಟ್ಟಲು ಜಿಲ್ಲೆಗಳಿಗೆ ಪಾಲಿಸಬೇಕಾದ ಕ್ರಮಗಳನ್ನು ತಿಳಿಸಲಾಗಿದೆ. ಹಾವು ಕಡಿತ ಪ್ರಕರಣಗಳನ್ನು ತಡೆಗಟ್ಟಲು ಹಾಗೂ

ಮರಣಗಳನ್ನು ನಿಯಂತ್ರಿಸಲು, ಜಿಲ್ಲಾಧಿಕಾರಿಗಳಿಗೆ ಕಾರ್ಯಕ್ರಮದ ಪರಿಶೀಲನೆ ಹಾಗೂ ಹಾವು ಕಡಿತದಿಂದ ಸಂಭವಿಸುವ ಮರಣಗಳ ಲೆಕ್ಕ ಪರಿಶೋಧನೆಯ ಜವಾಬ್ದಾರಿಯನ್ನು ವಹಿಸಲಾಗಿದೆ. ಕಾರ್ಯಕ್ರಮ ಅನುಷ್ಠಾನಕ್ಕೆ ಕಂಡು ಬರುವ ಸವಾಲುಗಳನ್ನು ಸರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

7. ವರದಿಯಾಗಿರುವ ಮರಣಗಳನ್ನು ಪರಿಶೀಲಿಸಿದಾಗ, ಅಧಿಕ ಪ್ರಕರಣಗಳಲ್ಲಿ ಸಾಂಪ್ರದಾಯಕ ನಾಟಿ ಚಿಕಿತ್ಸಕರಿಗೆ ಭೇಟಿ ನೀಡಿ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಿರುವುದು ಕಂಡು ಬಂದಿರುತ್ತದೆ. ಹಾಗಾಗಿ ಸಾಂಪ್ರದಾಯಕ/ ನಾಟಿ ಚಿಕಿತ್ಸಕರು ಹಾವು ಕಡಿತ ಪ್ರಕರಣಗಳಲ್ಲಿ ಚಿಕಿತ್ಸೆ ನೀಡಿ ಇದರಿಂದ ರೋಗಿಯು ನಿರ್ಣಾಯಕ ಚಿಕಿತ್ಸೆಗೆ ಆಸ್ಪತ್ರೆ ತಲುಪಲು ತಡವಾದರೆ ಅಥವಾ ರೋಗಿಯು ಮರಣ ಹೊಂದಿದರೆ, ಇಂತವರ ಮೇಲೆ **KPME Act** ಅಡಿಯಲ್ಲಿ ಶಿಸ್ತು ಕ್ರಮ ಜರುಗಿಸಬಹುದಾಗಿರುತ್ತದೆ.

8. ಹಾವು ಕಡಿತ ಪ್ರಕರಣಗಳು ಯಾವ ಆಸ್ಪತ್ರೆಗೆ ಚಿಕಿತ್ಸೆಗೆ ಭೇಟಿ ನೀಡಬೇಕೆಂದು ಮ್ಯಾಪಿಂಗ್ ಮಾಡಲು ಹಾಗೂ ತಮ್ಮ ಕೇಂದ್ರದಲ್ಲಿ ಬರುವಂತಹ high risk area ಹಾಗೂ high risk population ಅನ್ನು ಗುರುತಿಸಿ, ಅಲ್ಲಿ ತೀವ್ರ ನಿಗಾವಹಿಸಲು ಮತ್ತು ಅಂತರ್ ಇಲಾಖಾ IEC ಚಟುವಟಿಕೆಗಳನ್ನು ನಡೆಸಲು ಸೂಚಿಸಲಾಗಿದೆ.

**ಗ) ವಿಷಯ:- ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಅಧಿಕಾರಿ, ಸಿಬ್ಬಂದಿಗಳ ಹುದ್ದೆ ಖಾಲಿ ಇರುವುದರಿಂದ ನಿರ್ವಹಣೆ ಕೊರತೆ ಹೆಚ್ಚಾಗಿದ್ದು ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಾಮೋಜಿಗೌಡ ರವರು ದಿನಾಂಕ 19.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**<u>ಉತ್ತರ</u>:**

ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಒಟ್ಟು 09 ಮೃಗಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು. ಸರ್ಕಾರದ ಆದೇಶ ಸಂಖ್ಯೆ: ಅಪಜೀ 129 ಎಫ್.ಪಿ.ಸಿ 2013, ದಿನಾಂಕ:05.07.2018 ರಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಒಟ್ಟು 398 ಹುದ್ದೆಗಳು ಮಂಜೂರಾಗಿದ್ದು, ಸದರಿ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 70 ಎಫ್‌ಪಿಸಿ 2018 (ಪಿ-2) ದಿನಾಂಕ:21.12.2019ರ ವೃಂದ ಮತ್ತು ನೇಮಕಾತಿ ನಿಯಮ 2019 ರನ್ವಯ ವಿವಿಧ ಇಲಾಖೆಗಳಿಂದ ನಿಯೋಜನೆ ಮತ್ತು ನೇರ ನೇಮಕಾತಿಗಳ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿರುತ್ತದೆ. ಅದರಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಒಟ್ಟು 156 ಹುದ್ದೆಗಳು ಮಂಜೂರಾಗಿದ್ದು, ಅರಣ್ಯ ಇಲಾಖೆ, ಪಶುಸಂಗೋಪನಾ ಇಲಾಖೆ, ಲೋಕೋಪಯೋಗಿ ಇಲಾಖೆ, ಮತ್ತು ತೋಟಗಾರಿಕೆ ಇಲಾಖೆಗಳಿಂದ ಒಟ್ಟು 38 ಹುದ್ದೆಗಳನ್ನು ನಿಯೋಜನೆ ಮೇಲೆ ಹಾಗೂ ನೇರ ನೇಮಕಾತಿ ಮುಖಾಂತರ 27 ಹುದ್ದೆಗಳನ್ನು ಮತ್ತು ಉಳಿದ 91 ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿರುತ್ತದೆ. ಅದರಂತೆ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ 27 ಮತ್ತು ಮೈಸೂರು ಮೃಗಾಲಯಕ್ಕೆ 59 ಹುದ್ದೆಗಳು ಒಟ್ಟು 86 ಸಿ & ಡಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರಡು ಅಧಿಸೂಚನೆಗೆ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಪತ್ರ ಸಂಖ್ಯೆ: ಅಪಜೀ 28 ಎಫ್‌ಪಿಸಿ 2025 ದಿನಾಂಕ:31.05.2025ರ ಪತ್ರದಲ್ಲಿ ಒಳ ಮೀಸಲಾತಿ ಆದೇಶದ ನಂತರ ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ನಿರ್ದೇಶಿಸಿರುವುದರಿಂದ ಒಳ ಮೀಸಲಾತಿ ಜಾರಿಯಾದ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಪ್ರತಿ ವರ್ಷ ಸರಾಸರಿ ಅಂದಾಜು 22.00 ಲಕ್ಷ ಪ್ರವಾಸಿಗರು ಭೇಟಿ ನೀಡುತ್ತಿರುವುದರಿಂದ ಮೃಗಾಲಯದ ಸ್ವಚ್ಛತೆ, ಭದ್ರತೆ ಮತ್ತು ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ಯಾವುದೇ ನ್ಯೂನ್ಯತೆಯಾಗದಂತೆ ಹಾಗೂ ಪ್ರಾಣಿ-ಪಕ್ಷಿಗಳಿಗೆ ಮತ್ತು ಪ್ರವಾಸಿಗರಿಗೆ ಯಾವುದೇ ಅನಾನುಕೂಲವಾಗದಂತೆ ಮೃಗಾಲಯ ಸಮರ್ಪಕ ನಿರ್ವಹಣೆ ಹಿತದೃಷ್ಟಿಯಿಂದ ನೇರಗುತ್ತಿಗೆ /ಹೊರಗುತ್ತಿಗೆ ಆದಾರದಲ್ಲಿ 350 ನೌಕರರನ್ನು ನೇಮಕ

ಮಾಡಿಕೊಳ್ಳಲಾಗಿದ್ದು, 28 ಕ್ಷೇಮಾಭಿವೃದ್ಧಿ ನೌಕರರು10 ಖಾಯಂ ಅಧಿಕಾರಿ/ಸಿಬ್ಬಂದಿಗಳು ಒಟ್ಟಾರೆ 388 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಕೇಂದ್ರ ಮೃಗಾಲಯ ಪ್ರಾಧಿಕಾರದ Management Effectives Evaluation (MEE) of Indian Zoos ವರದಿಯಂತೆ Large Zoo Category ಯಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನವು ದೇಶದ ಅತ್ಯುತ್ತಮ ಮೃಗಾಲಯದ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿರುತ್ತದೆ.

| ಕ ಸಂ | ಮಂಜೂರಾದ ಹುದ್ದೆ | ವರ್ಗ | ಮಂಜೂರಾದ ಹುದ್ದೆಗಳ ಸಂಖ್ಯೆ | ಒಟ್ಟು ಭರ್ತಿ ಮಾಡದಲಾದ ಹುದ್ದೆ | ಖಾಲಿ ಹುದ್ದೆ | ಷರಾ |
|---|---|---|---|---|---|---|
| 1 | ಕಾರ್ಯನಿರ್ವಾಹಕ ನಿರ್ದೇಶಕರು | ಎ | 1 | 1 | 0 | |
| 2 | ಉಪ ನಿರ್ದೇಶಕರು | ಎ | 1 | 0 | 1 | |
| 3 | ಉಪ ನಿರ್ದೇಶಕರು (AH&VB) | ಎ | 1 | 0 | 1 | |
| 4 | ಸಹಾಯಕ ನಿರ್ದೇಶಕರು (AH&VB) | ಎ | 1 | 0 | 1 | |
| 5 | ಪಶುವೈದ್ಯಾಧಿಕಾರಿ (AH&VB) | ಬಿ | 1 | 1 | 0 | |
| 6 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | ಎ | 1 | 1 | 0 | |
| 7 | ಲೆಕ್ಕಪರಿಶೋಧನಾ ಅಧಿಕಾರಿ | ಬಿ | 1 | 0 | 1 | |
| 8 | ವಲಯ ಅರಣ್ಯಾಧಿಕಾರಿ | ಬಿ | 3 | 1 | 2 | |
| 9 | ಪತ್ರಾಂಕಿತ ವ್ಯವಸ್ಥಾಪಕರು | ಬಿ | 1 | 1 | 0 | |
| 10 | ಲೆಕ್ಕಪತ್ರ ಅಧೀಕ್ಷಕರು | ಬಿ | 1 | 0 | 1 | |
| 11 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಬಿ | 1 | 0 | 1 | |
| 12 | ಉಪ ವಲಯ ಅರಣ್ಯಾಧಿಕಾರಿ | ಸಿ | 4 | 4 | 0 | |
| 13 | ಅರಣ್ಯ ರಕ್ಷಕ | ಸಿ | 8 | 0 | 8 | 10 ಹುದ್ದೆಗಳಲ್ಲಿ ಎರಡು ಹುದ್ದೆಗಳು ಚಿತ್ರದುರ್ಗ ಮತ್ತು ಮೈಸೂರು ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ. |
| 14 | ಪ್ರಥಮ ದರ್ಜೆ ಸಹಾಯಕರು ವ ಗಣಕ ಯಂತ್ರ ನಿರ್ವಾಹಕರು | ಸಿ | 3 | 1 | 2 | 2 ಹುದ್ದೆಗಳಲ್ಲಿ ಒಂದು ಹುದ್ದೆ ಗದಗ ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ. |
| 15 | ತೋಟಗಾರಿಕೆ ಸಹಾಯಕರು | ಸಿ | 1 | 0 | 1 | |
| 16 | ಪಶುವೈದ್ಯಕೀಯ ಪ್ರಯೋಗಾಲಯ ಸಹಾಯಕ | ಸಿ | 1 | 0 | 1 | |
| 17 | ಅರಣ್ಯ ವೀಕ್ಷಕರು | ಡಿ | 8 | 0 | 8 | 10 ಹುದ್ದೆಗಳಲ್ಲಿ ಎರಡು ಹುದ್ದೆಗಳು ಚಿತ್ರದುರ್ಗ ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ. |
| | | | 38 | 10 | 18 | |

ಜೈವಿಕ ಉದ್ಯಾನವನವು ದೇಶದ ಅತ್ಯುತ್ತಮ ಮೃಗಾಲಯದ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿರುವುದು ಇದಕ್ಕೆ ಸಾಕ್ಷಿಯಾಗಿರುತ್ತದೆ.

| ಕ್ರ. ಸಂ. | ನೌಕರರ ವಿವರ | ಒಟ್ಟು ಸಂಖ್ಯೆ |
|---|---|---|
| 1 | ಖಾಯಂ ನೌಕರರು | 10 |
| 2 | ಕ್ಷೇಮಾಭಿವೃದ್ಧಿ ನೌಕರರು | 28 |
| 3 | ನೇರಗುತ್ತಿಗೆ ನೌಕರರು | 132 |
| 4 | ಹೊರಗುತ್ತಿಗೆ ನೌಕರರು | 218 |
| | ಒಟ್ಟು | 388.00 |

**ಫ) ವಿಷಯ:- ರಕ್ತದಾನ ಸಂದರ್ಭದಲ್ಲಿ ರಕ್ತದ ಗುಣಮಟ್ಟದ ಪರೀಕ್ಷೆ ಮತ್ತು ಸೋಂಕುಗಳನ್ನು ಪತ್ತೆ ಹಚ್ಚಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿ ರವರು ದಿನಾಂಕ 19.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

ರಾಷ್ಟ್ರೀಯ ರಕ್ತ ಚಾಲನಾ ಪರಿಷತ್ ಮತ್ತು ಔಷಧ ನಿಯಂತ್ರಣ ಕಾಯ್ದೆ ನಿಯಮಾವಳಿಯಂತೆ ಒಟ್ಟು ರಕ್ತ ಸಂಗ್ರಹಣೆಯಲ್ಲಿ ಶೇಕಡ 2% ರಿಂದ 3% ರಕ್ತವು ಸೋಂಕಿನಿಂದ ಕೂಡಿರುವುದಾಗಿ ತಿಳಿಸಿ ವಿಶ್ವ ಸಂಸ್ಥೆಯ ಜಾಗತಿಕ ಮಟ್ಟದ ಹಲವು ಸಮೀಕ್ಷೆಗಳಿಂದ ದೃಡೀಕರಿಸಿರುತ್ತಾರೆ. ಆದ್ದರಿಂದ ಒಟ್ಟು ಸಂಗ್ರಹಣೆಯಲ್ಲಿ ಸರಾಸರಿ ಆಧಾರದಂತೆ ಶೇಕಡ 2% ಕಡಿಮೆ ಸೋಂಕು, ಹಾಗೂ ಒಟ್ಟು ಸಂಗ್ರಹಣೆಯಲ್ಲಿ ಗರಿಷ್ಠ ಶೇಕಡ 5% ರಕ್ತವು ತ್ಯಾಜ್ಯ ರಕ್ತವಾಗಿರುವುದು ಹಲವು ಸಮೀಕ್ಷೆಗಳಲ್ಲಿ ಕಂಡು ಬಂದಿದೆ.

ಕರ್ನಾಟಕ ರಾಜ್ಯದ ಕಳೆದ 3 ವರ್ಷಗಳ ರಕ್ತ ಸೊಂಕು ಮತ್ತು ರಕ್ತ ತ್ಯಾಜ್ಯಗಳ ವಿವರ ಈ ಕೆಳಕಂಡಂತಿದೆ.

Statement showing last 3 years discard & Transfusion Transmitted Infection (TTI) Reactive rate of Blood units in Karnataka

| **Year** | **No of Blood Units Collection** | **Discard** | **% of Discard** | **Sero Reactive (HIV, HBC,HCV,VDRL, MP)** | | **Reason of Discard** |
|---|---|---|---|---|---|---|
| | | | | **Detected** | **% of TTI** | |
| 2024-25 | 1011073 | 42919 | 4.24 | 8,989 | 0.89 | Sero Reactive<br>out dated & any other reason |
| 2023-24 | 974689 | 37906 | 3.89 | 7,698 | 0.79 | |
| 2022-23 | 975785 | 43857 | 4.49 | 8,240 | 0.84 | |

ರಕ್ತ ತ್ಯಾಜ್ಯವನ್ನು ಹಾಗೂ ಸೋಂಕಿತ ರಕ್ತವನ್ನು ಸಂಗ್ರಹಿಸುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ರಕ್ತ ತ್ಯಾಜ್ಯ ಮತ್ತು ಸೋಂಕಿತ ರಕ್ತದಾನ ಮಾಡುವುದನ್ನು ತಡೆಗಟ್ಟಲು IEC ಕಾರ್ಯಕ್ರಮಗಳ ಮುಖಾಂತರ ರಕ್ತ ಕೇಂದ್ರಗಳಿಗೆ ಹಾಗೂ ದಾನಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗಿದೆ.

- ರಕ್ತದಾನ ಮಾಡಲು ಬಂಧಂತಹ ದಾನಿಗೆ ಮೊದಲೇ ಸೋಂಕು ಹರಡುವ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸುವುದು ಇದರಿಂದ ದಾನಿಯು ತಾನು ರಕ್ತ ಕೊಡಬಹುದೇ ಅಥವಾ ಬೇಡವೇ ಎಂಬ ದೃಡ

ನಿರ್ಧಾರಕ್ಕೆ ಬರುವಂತೆ ಆಪ್ತ ಸಮಾಲೋಚನೆ ನಡೆಸುವುದು.

- ಮತ್ತು ಎಲ್ಲಾ ರಕ್ತಕೇಂದ್ರಗಳಿಗು ಬೇಡಿಕೆಗನುಗುಣವಾಗಿ ಅವಶ್ಯವಿರುವ ರಕ್ತವನ್ನು ಮಾತ್ರವೇ ಪಡೆಯಲು ಹಾಗೂ ಸಂಗ್ರಹಿಸಲು ಸೂಚಿಸಿದೆ. ಹೆಚ್ಚುವರಿ ರಕ್ತವನ್ನು ಅಗತ್ಯ ರಕ್ತ ಕೇಂದ್ರಗಳು/ಆಸ್ಪತ್ರೆಗಳಿಗೆ ರವಾನಿಸಲು ಸೂಚಿಸಿದೆ.

ಈ ಮೇಲಿನ ಎಲ್ಲಾ ಕ್ರಮಗಳಿಂದ ರಕ್ತ ತ್ಯಾಜ್ಯ ಮತ್ತು ರಕ್ತ ಸೋಂಕುಗಳು ವಿಶ್ವ ಸಂಸ್ಥೆ ಹಾಗೂ ರಾಷ್ಟ್ರೀಯ ರಕ್ತಚಾಲನಾ ಪರಿಷತ್ ನಿಗದಿ ಪಡಿಸಿದ ಗರಿಷ್ಠ ಮಟ್ಟಕ್ಕಿಂತ ಕಡಿಮೆ ಸಾಧಿಸಲು ಪ್ರಯತ್ನಿಸಲಾಗಿದೆ. ಮುಂದೆ ಇನ್ನೂ ಹೆಚ್ಚಿನ ಪ್ರಮಾಣದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುಖಾಂತರ ಸೋಂಕಿನ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

**ಐ) ವಿಷಯ:- ರಾಜ್ಯದಲ್ಲಿ ಅಪಹರಣಕ್ಕೆ ಹಾಗೂ ನಾಪತ್ತೆಗೆ ಒಳಗಾಗುತ್ತಿರುವ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ.**

- - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ದಿನಾಂಕ 19.08.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಉತ್ತರ:** ರಾಜ್ಯದಲ್ಲಿ ಕಳೆದ 5 ವರ್ಷದಿಂದ ಜುಲೈ-2025ರ ವರೆಗೆ ವರದಿಯಾಗಿರುವ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳ ಅಪಹರಣ/ಕಾಣೆಯಾದ ಮತ್ತು ಪತ್ತೆಯಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:

| ವರ್ಷ | ಗಂಡು ಮಕ್ಕಳು | | | ಹೆಣ್ಣು ಮಕ್ಕಳು | | |
|---|---|---|---|---|---|---|
| | ವರದಿ | ಪತ್ತೆ | ಬಾಕಿ | ವರದಿ | ಪತ್ತೆ | ಬಾಕಿ |
| 2020 | 421 | 402 | 19 | 1137 | 1104 | 33 |
| 2021 | 487 | 462 | 25 | 1630 | 1591 | 39 |
| 2022 | 745 | 715 | 30 | 1829 | 1785 | 44 |
| 2023 | 907 | 869 | 38 | 2131 | 2083 | 48 |
| 2024 | 975 | 920 | 55 | 2446 | 2293 | 153 |
| 2025(ಜುಲೈ) | 551 | 385 | 166 | 1619 | 933 | 686 |
| **ಒಟ್ಟು** | **4086** | **3753** | **333** | **10792** | **9789** | **1003** |

ರಾಜ್ಯದಲ್ಲಿ ಕಳೆದ 05 ವರ್ಷದಲ್ಲಿ ಒಟ್ಟು **14,878** ಮಕ್ಕಳ ಅಪಹರಣ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ **13,542** ಪ್ರಕರಣಗಳು ಪತ್ತೆಯಾಗಿದ್ದು, **1336** ಪತ್ತೆ ಹಚ್ಚಲು ಬಾಕಿ ಇರುತ್ತದೆ. ಸದರಿ ಪ್ರಕರಣಗಳಲ್ಲಿ 2020 ರಿಂದ 2025 ಜುಲೈ ವರೆಗೆ ಒಟ್ಟು **634** ಆರೋಪಿಗಳನ್ನು ಬಂಧಿಸಲಾಗಿದೆ.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: Horilal V/s Commissioner of Police Delhi, dated: 14/11/2022 ತೀರ್ಪಿನನ್ವಯ ಸರ್ಕಾರವು ಮಕ್ಕಳ ಅಪಹರಣ ಪ್ರಕರಣಗಳಲ್ಲಿ ನಿರ್ಧಿಷ್ಟ ಕಾರ್ಯವಿಧಾನ (ಎಸ್.ಒ.ಪಿ) ಸಂಖ್ಯೆ: ಸಿಆರ್‌ಎಂ-2/224/ರಿಪಿ/2018, ಅನ್ನು ಹೊರಡಿಸಲಾಗಿದೆ. ಇದರನ್ವಯ ಮಕ್ಕಳ ನಾಪತ್ತೆ ಪ್ರಕರಣಗಳನ್ನು ಅಪಹರಣ ಪ್ರಕರಣಗಳೆಂದು ದಾಖಲಿಸಿ ಕಲಂ 363 IPC ಐಪಿಸಿ/137 BNS ಅಡಿಯಲ್ಲಿ ನೋಂದಾಯಿಸಿಕೊಂಡು ತನಿಖೆ ನಿರ್ವಹಿಸಲು ನಿರ್ದೇಶನ ನೀಡಲಾಗಿರುತ್ತದೆ. ಅಪಹರಣ/ನಾಪತ್ತೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತಿದೆ.

**ಮಕ್ಕಳ ಅಪಹರಣ/ಕಾಣೆ / ಕಳ್ಳ ಸಾಗಾಣಿಕೆಯನ್ನು ಸಾಗಾಣಿಕೆ ನಿಯಂತ್ರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳು:-**

- ಮಕ್ಕಳ ಅಪಹರಣ ಪ್ರಕರಣಗಳಲ್ಲಿ ವರದಿಯಾದ ಕೂಡಲೇ ವಿಳಂಬ ಮಾಡದೆ ಎಫ್.ಐ.ಆರ್. ಅನ್ನು ದಾಖಲಿಸಲಾಗುವುದು.
- ಅಪಹರಣ ಪ್ರಕರಣ ವರದಿಯಾದ ಕೂಡಲೇ ರಾಜ್ಯದ ಎಲ್ಲಾ ಠಾಣೆಗಳಿಗೆ ಪ್ರಕರಣದ ಆರೋಪಿ ಮತ್ತು ಅಪಹರಿಸಿರುವ ಮಗುವಿನ ಬಗ್ಗೆ, ಯಾವುದೇ ಸುಳಿವು ದೊರೆತರೆ ಮಾಹಿತಿ ಪಡೆದುಕೊಳ್ಳಲು ಪೋಷಕರ ಒಪ್ಪಿಗೆ ಮೇರೆಗೆ ಪತ್ರಿಕಾ ಪ್ರಕಟಣೆ, ದೂರದರ್ಶನ, ಆಕಾಶವಾಣಿ ಇತ್ಯಾದಿ ಮಾದ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ರಾಜ್ಯದ ಗಡಿ ಪ್ರದೇಶಗಳಲ್ಲಿ ಮತ್ತು ಬಸ್ ನಿಲ್ದಾಣ/ರೈಲ್ವೆ ನಿಲ್ದಾಣಗಳಲ್ಲಿ ಭಿತ್ತಿ ಪತ್ರಗಳನ್ನು/ಫೋಟೋಗಳನ್ನು ಅಂಟಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.
- ರಿಜಿನಲ್ ಪಾಸ್‌ಪೋರ್ಟ್ ಆಫೀಸ್ ರವರಿಗೆ ಯಾರಾದರೂ ನವಜಾತ ಮಕ್ಕಳಿಗೆ ಪಾಸ್ ಪೋರ್ಟ್‌ಗೆ ಅರ್ಜಿ ಸಲ್ಲಿಸಿರುವರೇ ಎಂಬ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.
- ಲುಕ್-ಔಟ್ ನೋಟೀಸ್ ನೀಡುವುದು, ಅಕ್ಕ-ಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಕ್ಕಳ ಕುರಿತು ಹುಡುಕಾಟ ನಡೆಸುವುದು.
- ಅಧಿಕಾರಿಗಳ ತಂಡವನ್ನು ನಿರ್ಮಿಸಿ ಎಲ್ಲಾ ಕಡೆ ಹುಡುಕಾಟ ನಡೆಸುವುದು, ಅಕ್ಕ-ಪಕ್ಕದ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಅಪರಿಚಿತ ಶವಗಳ UDR ಪ್ರಕರಣಗಳನ್ನು ಪರಿಶೀಲಿಸುವುದು, ಜಿಲ್ಲಾ ಅಪರಾಧ ದಾಖಲಾತಿ ವಿಭಾಗಗಳಲ್ಲಿನ ವರದಿಗಳನ್ನು ಪರಿಶೀಲಿಸುವುದು, ದಿನಪತ್ರಿಕೆ ಮತ್ತು ದೂರದರ್ಶನದಲ್ಲಿ ಕಾಣೆಯಾದ ಮಕ್ಕಳ ಭಾವಚಿತ್ರವನ್ನು ಪ್ರಸಾರ ಮಾಡುವುದು.
- ಪ್ರತಿ ಮಾನವ ಕಳ್ಳ ಸಾಗಾಣಿಕೆ ಘಟಕಗಳಿಗೆ ಹಿರಿಯ ಮತ್ತು ಕಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನಿಯೋಜಿಸಿ, ಅವರುಗಳಿಗೆ ತರಬೇತಿ ನೀಡಲಾಗಿರುತ್ತದೆ.
- ಮಾನವ ಕಳ್ಳ ಸಾಗಾಣಿಕೆ ಮಾಡುವವರ ವಿರುದ್ಧ ಬಾತ್ಮಿ ಸಂಗ್ರಹಿಸಿ ತಪ್ಪಿತಸ್ಥರ ವಿರುದ್ಧ ಕಲಂ 370, 370(A) ಐಪಿಸಿ /143, 144 BNS ಮತ್ತು ಇಮ್‌ಮೋರಲ್ ಟ್ರಾಫಿಕ್

ಪ್ರಿವೆನ್‌ಷನ್ ಆಕ್ಟ್ (ಐ.ಟಿ.ಪಿ.ಎ) ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

- ಮಾನವ ಕಳ್ಳ ಸಾಗಾಣಿಕೆಯ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗಾಗಿ ನಿರ್ದಿಷ್ಟ ಕಾರ್ಯವಿಧಾನವನ್ನು ಸಿದ್ಧಪಡಿಸಿ, ಸ್ಥಾಯಿ ಆದೇಶದ ಮೂಲಕ ರಾಜ್ಯ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.
- ಅಪರಿಚಿತ ವ್ಯಕ್ತಿಗಳ ಬಳಿ ಸಂಪರ್ಕ ಇಟ್ಟುಕೊಳ್ಳದಂತೆ, ಆಸೆ ಆಮಿಷಗಳನ್ನು ಒಡ್ಡುವ ಆಸಾಮಿಗಳ ಬಗ್ಗೆ ಮಹಿಳೆಯರಿಗೆ & ಮಕ್ಕಳಿಗೆ ಹಾಗೂ ಗ್ರಾಮಗಳಲ್ಲಿ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.
- ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳ ಭಿಕ್ಷಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡು ಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ.
- ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ವಿವಿಧ ಹೆಸರುಗಳಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಿದ್ದು, ಸದರಿ ಪಡೆಯು ನಗರದ ಮತ್ತು ಜಿಲ್ಲಾ ವ್ಯಾಪ್ತಿಯ ಶಾಲಾ- ಕಾಲೇಜು, ಪಾರ್ಕ್‌ಗಳು, ಹಾಸ್ಟೆಲ್, ಪಿಜಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಇತರೆ ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಓಡಾಡುವ ಸ್ಥಳಗಳ ಪ್ರತಿದಿನ ಗಸ್ತು ಕರ್ತವ್ಯ ನಿರ್ವಹಿಸುತ್ತಾರೆ.
- ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಮತ್ತು ಜನನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ ಸಹಾಯದಿಂದ ಮಹಿಳೆಯರ ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ.
- ಕೃತ್ಯ ನಡೆದ ಸ್ಥಳದಲ್ಲಿ ಹಾಗೂ ಸುತ್ತಮುತ್ತ ಲಭ್ಯವಿದ್ದ ಸಿ.ಸಿ.ಟಿ.ವಿ ಕ್ಯಾಮರದ ಪುಟೇಜ್ ಗಳನ್ನು ಪರಿಶೀಲನೆ ಮಾಡಲಾಗುತ್ತದೆ.
- ಲಭ್ಯವಿರುವ ಮಾಹಿತಿಯೊಂದಿಗೆ (ಚಹರೆ) ಟ್ರಾಕ್ ಚೈಲ್ಡ್ ತಂತ್ರಾಂಶದಲ್ಲಿ ಮಗುವಿನ ದೈಹಿಕ ಚಹರೆಯನ್ನು ಮಿಸ್ಸಿಂಗ್ ಪರ್ಸನ್ ಬ್ಯೂರೋಗೆ ಕಳುಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.
- ಮಾನವ ಕಳ್ಳ ಸಾಗಾಣಿಕೆ ಪ್ರಕರಣಗಳನ್ನು ತಡೆಗಟ್ಟಲು ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕ ಹಾಗೂ ಸಂಬಂಧಪಟ್ಟ ಎಸ್.ಸಿ.ಆರ್.ಬಿ (ರಾಜ್ಯ ಅಪರಾಧ ದಾಖಲಾತಿ ಘಟಕ) ಮತ್ತು ಎನ್.ಸಿ.ಆರ್.ಬಿ(ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಮಾನವ ಕಳ್ಳ ಸಾಗಾಣಿಕೆ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.
- ಅಪಹರಣಕ್ಕೊಳಗಾದ ಮಗುವಿನ ಭಾವಚಿತ್ರಗಳ ನೋಟಿಸ್‌ಗಳನ್ನು ಸುತ್ತಮುತ್ತಲ್ಲಿನ ಪ್ರದೇಶಗಳಲ್ಲಿ ಅಂಟಿಸುವ ಮೂಲಕ, ಸಾಮಾಜಿಕ ಜಾಲತಾಣಗಳಲ್ಲಿ, ಎಲ್ಲಾ ವರ್ಗದ ಜನತೆಯನ್ನೂ ತಲುಪುವಂತೆ ವ್ಯಾಪಕ ಪ್ರಚಾರ ನೀಡಿ ಸಾರ್ವಜನಿಕರ ಸಹಕಾರದಿಂದ ಈ ಪ್ರಕರಣದಲ್ಲಿ ಅಪಹರಣಕ್ಕೊಳಗಾದ ಮಗು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುತ್ತದೆ.
- ಶಾಪಿಂಗ್ ಮಾಲುಗಳು, ಉದ್ಯಾನವನಗಳು, ಮನರಂಜನಾ ಸ್ಥಳಗಳು, ಕ್ರೀಡಾ ಸ್ಥಳಗಳು, ಮತ್ತು ಅಪಹರಣಕ್ಕೊಳಗಾದ ಮಕ್ಕಳು ಸಾಮಾನ್ಯವಾಗಿ ಇರಬಹುದಾದ ಸ್ಥಳಗಳಲ್ಲಿ ಶೋಧನೆ ಮಾಡಿ ಅಪಹರಣಕ್ಕೊಳಗಾದ ಮಗುವನ್ನು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುವುದು.

- ಎನ್.ಜಿ.ಓ.ಗಳ ಸಹಕಾರದೊಂದಿಗೆ ಕಾಣೆಯಾದ ಮಕ್ಕಳ ಪತ್ತೆಗಾಗಿ ಶ್ರಮಿಸಲಾಗುತ್ತಿದೆ.
- ನಿರ್ಮಾಣದ ಹಂತದಲ್ಲಿರುವಂತಹ ಕಟ್ಟಡಗಳು, ಬಳಕೆಯಾಗದಂತಹ ಕಟ್ಟಡಗಳು, ಆಸ್ಪತ್ರೆಗಳು ಮತ್ತು ಔಷಧಾಲಯಗಳು, ರೈಲ್ವೆ ಪೊಲೀಸರು ಮತ್ತಿತರ ಸ್ಥಳಗಳಲ್ಲಿ ವಿಚಾರಣೆ ನಡೆಸಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ ಅಪಹರಣಕ್ಕೊಳಗಾದ ಮಗುವನ್ನು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುವುದು.
- ಕಾಣೆಯಾದ ಪ್ರಕರಣಗಳ ಪೈಕಿ 120 ದಿನದೊಳಗೆ ಪತ್ತೆಯಾಗದ ಪ್ರಕರಣಗಳನ್ನು ಪರಿಣಾಮಕಾರಿ ತನಿಖೆಗಾಗಿ ವಿಶೇಷ ಘಟಕವಾದ ಎ.ಹೆಚ್.ಟಿ.ಯು (Anti Human Trafficking Unit) ಘಟಕಗಳಿಗೆ ವರ್ಗಾವಣೆ ಮಾಡವುದು.
- ಅನಾಥಶ್ರಮಗಳು, ಆಶ್ರಮಗಳಲ್ಲಿ, ಆಧ್ಯಾತ್ಮಿಕ ಸ್ಥಳಗಳಲ್ಲಿ ಮತ್ತು ಬಾಲಮಂದಿರಗಳಲ್ಲಿ ಹುಡುಕುವುದು. ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳ ಸಾಗಾಣಿಕೆಗೆ ಸಂಬಂಧಿಸಿದಂತೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.

ಬೆಂಗಳೂರು ಸೇರಿದಂತೆ ಬೆಳೆಯುತ್ತಿರುವ ನಗರಗಳಲ್ಲಿ ಮಕ್ಕಳ ಅಪಹರಣ ಪ್ರಕರಣಗಳು ವರದಿಯಾಗುತ್ತಿರುವುದನ್ನು ಗಂಭೀರವಾಗಿ ಹಾಗೂ ಆದ್ಯತೆಯ ಪ್ರಕರಣಗಳೆಂದು ಪರಿಗಣಿಸಿ, ಪತ್ತೆಕಾರ್ಯವನ್ನು ಕೈಗೊಳ್ಳುತ್ತಿದೆ.

ಇಂತಹ ಪ್ರಕರಣಗಳನ್ನು ತಡೆಗಟ್ಟಲು ಪೊಲೀಸ್ ಇಲಾಖೆಯು ಸಂಬಂಧಪಟ್ಟ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಮುಂತಾದ ಇತರೆ ಇಲಾಖೆಗಳೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿದೆ.

(ಮುಂದು)

(951) 22-08-2025/1.30/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

## ೦೮. ಸಾರಾಂಶ

**ಮಾನ್ಯ ಸಭಾಪತಿಯವರು:-** ವಿಧಾನ ಪರಿಷತ್ತಿನ 156ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ 11.08.2025 ರಿಂದ 22.08.2025ರವರೆಗೆ ಒಟ್ಟು 09 ದಿನಗಳು ಅಂದರೆ, 55 ಗಂಟೆ 25 ನಿಮಿಷಗಳ ಕಾಲ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 11 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

2025-26ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು) ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 1 ಮತ್ತು 2ನೇ ಪಟ್ಟಿಗಳನ್ನು ಮಂಡಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಸಿ.ಟಿ.ರವಿಯವರನ್ನು ಹೊರತುಪಡಿಸಿ ಭಾರತೀಯ ಜನತಾ ಪಕ್ಷದ ಮತ್ತು ಜೆಡಿ(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿ ಧರಣಿ ಕುಳಿತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು)**

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, 2023-24ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ (2025ರ ವರದಿ ಸಂಖ್ಯೆ:4) ವರದಿ, ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಕಂದಾಯದ ವರದಿ (2025ರ ವರದಿ ಸಂಖ್ಯೆ:5), 2020-2022ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕ

ತಾಂತ್ರಿಕ ಪರಿಶೀಲನಾ ವರದಿ, ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಸರಣಾ ಲೆಕ್ಕಪರಿಶೋಧನಾ ವರದಿ (2025ರ ವರದಿ ಸಂಖ್ಯೆ:3), ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣದ (2025ರ ವರದಿ ಸಂಖ್ಯೆ:02) ವರದಿ ಹಾಗೂ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಸರಣಾ ಲೆಕ್ಕಪರಿಶೋಧನೆ-ಸಿವಿಲ್ (2025ರ ವರದಿ ಸಂಖ್ಯೆ:06) ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 104ನೇ ವರದಿ, ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ 2023-24 ಹಾಗೂ 2024-25ನೇ ಸಾಲಿನ 50ನೇ ವರದಿ, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 43ನೇ ವರದಿ, ಅಧೀನ ಶಾಸನ ರಚನಾ ಸಮಿತಿಯ 53ನೇ ವರದಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 5ನೇ ವರದಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯ 02ನೇ ವರದಿಗಳನ್ನು ಒಪ್ಪಿಸಲಾಯಿತು.

ವಿಧಾನ ಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನ ವಿವಿಧ ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಸದಸ್ಯರುಗಳನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ದಿನಾಂಕ 22.04.2025ರವರೆಗೆ ವಿಸ್ತರಿಸಿರುವ ಪ್ರಸ್ತಾವನೆಯನ್ನು ಮಂಡಿಸಿ ಅಂಗೀಕರಿಸಲಾಯಿತು ಹಾಗೂ ಸಮಿತಿಯ ವರದಿಯನ್ನು ಒಪ್ಪಿಸಲಾಯಿತು.

ಮೂರು ಅಧಿಕೃತ ನಿರ್ಣಯಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಎರಡು ಅಧಿಕೃತ ನಿರ್ಣಯಗಳನ್ನು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ನಿಯಮ 59 ರಡಿಯಲ್ಲಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಉತ್ತರಿಸಲಾಯಿತು. ಉಳಿದಂತೆ 01 ಸೂಚನೆಯನ್ನು ನಿಯಮ 72ಕ್ಕೆ ಪರಿವರ್ತಿಸಲಾಗಿರುತ್ತದೆ. 02 ಸೂಚನೆಗಳನ್ನು ನಿಯಮ 330ಕ್ಕೆ ಪರಿವರ್ತಿಸಿ, ಒಂದನ್ನು ಚರ್ಚಿಸಿ ಉತ್ತರಿಸಲಾಯಿತು.

ನಿಯಮ 68ರಡಿಯಲ್ಲಿ 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಚರ್ಚೆಯಾಗಿರುವುದಿಲ್ಲ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1431 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 95 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. 34 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಗಿರುತ್ತದೆ. ಲಿಖಿತ ಮೂಲಕ ಉತ್ತರಿಸುವ ಒಟ್ಟು 1296 ಪ್ರಶ್ನೆಗಳ ಪೈಕಿ 798 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ. ಯಾವುದೇ ಸೂಚನೆಯನ್ನು ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.

ನಿಯಮ 72ರಡಿಯಲ್ಲಿ 134 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 15 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 65 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 84 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 04 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 71 ಸೂಚನೆಗಳ ಪೈಕಿ 26 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 19 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 04 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 33 ವಿಧೇಯಕಗಳು ಸೇರಿದಂತೆ ಒಟ್ಟು 37 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ ಹಾಗೂ 03 ವಿಧೇಯಕಗಳನ್ನು ಹಿಂಪಡೆಯಲಾಯಿತು.

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಹಾಗೂ ಎಲ್ಲಾ ಶಾಸಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಸಿ.ಟಿ.ರವಿಯವರನ್ನು ಹೊರತುಪಡಿಸಿ ಭಾರತೀಯ ಜನತಾ ಪಕ್ಷದ ಮತ್ತು ಜೆಡಿ(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ರಾಷ್ಟ್ರಗೀತೆಯೊಂದಿಗೆ ಸದನವು ಮಧ್ಯಾಹ್ನ 1 ಗಂಟೆ 35 ನಿಮಿಷಗಳಿಗೆ ಅನಿದಿರ್ಷಾವಧಿಯವರೆಗೆ ಮುಂದೂಡಲ್ಪಟ್ಟಿತು)**